ಗುರುವಾರ, ಆಗಸ್ಟ್ 31, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 242 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕಲುಷಿತ ಆಹಾರ: ದೃಷ್ಟಿ ಕಳೆದುಕೊಂಡ ವ್ಯಕ್ತಿ 4
ಚೀನಾ ಭೂಪಟ: ಮೋದಿ ಹೇಳಿಕೆಗೆ ಪಟ್ಟು 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,087 ▲	19,347 ▲	₹61,080 (ಬೆಂಗಳೂರು) ▲	₹77,200 (ಬೆಂಗಳೂರು) ▲	82.74 ▲

ಸಹಸ್ರಾರು ಮಹಿಳೆಯರ ಸಂಭ್ರಮ, ಹರ್ಷೋದ್ಗಾರ • ತಿಂಗಳಿಗೆ ₹2 ಸಾವಿರ ಬ್ಯಾಂಕ್ ಖಾತೆಗೆ ಜಮೆ

'ಗೃಹಲಕ್ಷ್ಮಿ' ಯೋಜನೆಗೆ ಅದ್ದೂರಿ ಚಾಲನೆ

• ಕೆ.ನರಸಿಂಹಮೂರ್ತಿ

ಮೈಸೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮಿ' ಯೋಜನೆಗೆ ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಬುಧವಾರ ಅದ್ದೂರಿ ಚಾಲನೆ ದೊರೆಯಿತು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿಶೇಷ ಅತಿಥಿಯಾಗಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸುತ್ತಿದ್ದಂತೆ ಸೇರಿದ್ದ ಸಹಸ್ರಾರು ಮಹಿಳೆಯರು ಹರ್ಷೋದ್ಗಾರ ಮೊಳಗಿಸಿದರು.

ರಾಹುಲ್ ರಿಮೋಟ್ ಒತ್ತುತ್ತಿದ್ದಂತೆಯೇ ವೇದಿಕೆ ಮುಂಭಾಗ ₹2 ಸಾವಿರ ಮೌಲ್ಯದ ಚೆಕ್ ಪ್ರತಿಕೃತಿಯು ನಿಧಾನಗತಿಯಲ್ಲಿ ಮೇಲೆದ್ದಿತು. ಅಷ್ಟಲಕ್ಷ್ಮಿ ವೇಷಧಾರಿ ಯುವತಿಯರು ವೇದಿಕೆಗೆ ಬಂದರೆ, ಇನ್ನೊಂದೆಡೆ ಸಾಧುಕೋಕಿಲ ತಂಡದವರು ಯೋಜನೆಯ ಆಶಯ ಗೀತೆ 'ಲಕ್ಷ್ಮಿಬಾರಮ್ಮ' ಹಾಡಿದರು.

ಜಿಲ್ಲೆಯ ವಿವಿಧ ಗ್ರಾಮಗಳ ಫಲಾನುಭವಿಗಳಾದ ದೊಡ್ಡ ಮಹದೇವಮ್ಮ, ಶೋಭಾರಾಣಿ, ಆಶಾ, ಅನಿತಾ, ಮೊಹಸಿನ್ ತಾಜ್, ಭಾಗ್ಯಾ, ಅಶ್ವಿನಿ, ಪುಷ್ಪಲತಾ, ಸುನೀತಾ ಹಾಗೂ ಬನಶಂಕರಿ ಅವರು ಕ್ಯೂಆರ್ ಕೋಡ್ ಹಾಗೂ ಟ್ಯಾಗ್ ಸಹಿತ ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆದು ಸಂಭ್ರಮಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಹುಲ್ ಗಾಂಧಿ ತಮ್ಮ ಬಳಿ ನಿಂತಿದ್ದ ಫಲಾನುಭವಿಗಳೊಂದಿಗೆ ಕೆಲ ಹೊತ್ತು ಮಾತುಕತೆ ನಡೆಸಿದರು.

'ಈವರೆಗೆ ನೋಂದಾಯಿಸಿರುವ 1.10 ಕೋಟಿ ಮಹಿಳೆಯರಿಗೆ ತಿಂಗಳಿಗೆ ತಲಾ ₹2ಸಾವಿರವನ್ನು ಅವರವರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು' ಎಂದು ಸಿದ್ದರಾಮಯ್ಯ ಪ್ರಕಟಿಸಿದರು.

4ನೇ ಪುಟ ನೋಡಿ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬುಧವಾರ ನಡೆದ ರಾಜ್ಯ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಸ್ಮಾರ್ಟ್ ಕಾರ್ಡ್ ಪಡೆದ ಫಲಾನುಭವಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾತುಕತೆ ನಡೆಸಿದರು. ಸಚಿವ ಡಾ.ಎಚ್‌ಸಿ.ಮಹದೇವಪ್ಪ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ.ವೇಣುಗೋಪಾಲ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದಾರೆ —ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಗ್ಯಾರಂಟಿಗಳ ಜಾರಿಯಿಂದ ರಾಜ್ಯ ದಿವಾಳಿಯೇನೂ ಆಗಿಲ್ಲ. ಇತರ ಕಾರ್ಯಕ್ರಮಗಳಿಗೂ ಅನುದಾನ ಒದಗಿಸುತ್ತಿದ್ದೇವೆ. ಸತ್ಯವೀಗ ನಿಮ್ಮೆಲ್ಲರ ಮುಂದಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನದೊಂದಿಗೆ ಇಂದಿರಾ ಗಾಂಧಿ ಅವರ ಕಾಲದ ವೈಭವ ಮರುಸೃಷ್ಟಿಯಾಗಿದೆ
ಡಿ.ಕೆ.ಶಿವಕುಮಾರ್, ಡಿ.ಸಿ.ಎಂ

ರಕ್ಷಾಬಂಧನದ ದಿನವೇ ನಾಡಿನ ಕೋಟ್ಯಂತರ ಅಕ್ಕ- ತಂಗಿಯರಿಗೆ ಕೊಟ್ಟ ಮಾತನ್ನು ಈಡೇರಿಸಿದ್ದೇವೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ದೇಶದಲ್ಲೇ ಮಾದರಿ ರಾಜ್ಯ ಕರ್ನಾಟಕ: ರಾಹುಲ್ ಗಾಂಧಿ

'ರಾಜ್ಯ ಸರ್ಕಾರ 100 ದಿನಗಳನ್ನು ಪೂರೈಸಿರುವ ಹೊತ್ತಿನಲ್ಲಿ, ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿದೆ. ರಾಜ್ಯದ ಯೋಜನೆಗಳು ಇಡೀ ದೇಶಕ್ಕೇ ಮಾದರಿಯಾಗಿವೆ. ದೇಶಕ್ಕೊಂದು ದಿಕ್ಕು ತೋರಿಸಿವೆ' ಎಂದು ರಾಹುಲ್ ಗಾಂಧಿ ಹೇಳಿದರು.

'ಐದು ಗ್ಯಾರಂಟಿಗಳು ಆಡಳಿತದ ನೀಲಿ ನಕ್ಷೆಯಾಗಿವೆ. ಬಡವರಿಗಾಗಿ ಸರ್ಕಾರಗಳು ಕೆಲಸ ಮಾಡಬೇಕು. ಜಾತಿ–ಧರ್ಮ ಮೀರಿ ನೆರವಾಗಬೇಕು. ಕೇಂದ್ರ ಸರ್ಕಾರವು ಕೋಟ್ಯಧಿಪತಿಗಳಿಗಾಗಿ ಕೆಲಸ ಮಾಡುತ್ತಿದೆ. ಇಬ್ಬರು ಮೂವರಿಗಷ್ಟೇ ಅಭಿವೃದ್ಧಿಯ ಹೊಣೆ ನೀಡಲಾಗಿದೆ' ಎಂದು ಟೀಕಿಸಿದರು.

'ಚುನಾವಣೆಗೂ ಮುನ್ನ ಗ್ಯಾರಂಟಿಗಳನ್ನು ಘೋಷಿಸಿದಾಗ, ಕಾಂಗ್ರೆಸ್ ಸುಳ್ಳು ಹೇಳುತ್ತಿದೆ ಎಂದು ಪ್ರಧಾನಿ ಹೇಳಿದ್ದರು. ಸತ್ಯ ನಿಮ್ಮ ಕಣ್ಣ ಮುಂದಿದೆ. ಮಹಿಳೆಯರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಪ್ರತಿ ಮನೆಗೂ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುತ್ತಿದೆ. ಪ್ರತಿ ಬಿಪಿಎಲ್ ಕುಟುಂಬಕ್ಕೆ 10 ಕೆಜಿ ಅಕ್ಕಿ ಉಚಿತವಾಗಿ ನೀಡಲಾಗುತ್ತಿದೆ. ಶೀಘ್ರದಲ್ಲೇ ಯುವನಿಧಿ ಕಾರ್ಯಕ್ರಮವೂ ಅನುಷ್ಠಾನಕ್ಕೆ ಬರಲಿದೆ' ಎಂದರು.

'ವಿಶ್ವದಲ್ಲೇ ಅತ್ಯಂತ ಬೃಹತ್ತಾದ ಯೋಜನೆ ಗೃಹಲಕ್ಷ್ಮಿ. ಇಂಥ ಯೋಜನೆ ಬೇರೆಲ್ಲೂ ಇಲ್ಲ. ₹2 ಸಾವಿರ ಸಣ್ಣದಲ್ಲ. ಮಹಿಳೆಗೆ ಸಂರಕ್ಷಣೆ ಭಾವವನ್ನು ನೀಡುತ್ತದೆ. ಮಕ್ಕಳ ಶಿಕ್ಷಣಕ್ಕೆ ಬಳಸಬಹುದು. ಯಾವುದೇ ಊರಾಗಿರಲಿ, ಇಡೀ ರಾಜ್ಯದ ಭದ್ರ ಬುನಾದಿ ನೀವೇ. ದೇಶದಲ್ಲಿ 75 ವರ್ಷಗಳ ಅಭಿವೃದ್ಧಿಯೂ ನಿಮ್ಮಿಂದಲೇ ಆಗಿದೆ' ಎಂದರು.

'ಇದು ನಮ್ಮ ಯೋಜನೆಯಲ್ಲ. ನೀವು ಯೋಜನೆಯ ದಾರಿ ತೋರಿಸಿದ್ದೀರಿ' ಎಂದು, ಭಾರತ್ ಜೋಡೊ ಯಾತ್ರೆಯನ್ನು ಸ್ಮರಿಸಿದರು.

'ರಾಜ್ಯದಲ್ಲಿ ಸಾವಿರಾರು ಮಹಿಳೆಯರನ್ನು ಭೇಟಿ ಮಾಡಿದ್ದೆ. ಬೆಲೆ ಏರಿಕೆಯ ಏಟು ತಮ್ಮ ಮೇಲೇ ಬೀಳುತ್ತದೆಂದು ಅವರು ಹೇಳಿದ್ದರು. ನಡೆಯುತ್ತಾ ನಡೆಯುತ್ತಾ, ಮಹಿಳೆಯರೇ ಈ ರಾಜ್ಯದ ಅಡಿಪಾಯ, ಅವರಿಲ್ಲದೆ ಈ ರಾಜ್ಯ ನಿಲ್ಲದು ಎಂಬುದು ಅರಿವಿಗೆ ಬಂದಿತ್ತು' ಎಂದರು.

ದೇಶ ಹಾಳು ಮಾಡುತ್ತಿರುವ ಬಿಜೆಪಿ: ಖರ್ಗೆ

'ಬಿಜೆಪಿಯು ದೇಶವನ್ನು ಹಾಳು ಮಾಡುತ್ತಿದೆ. ಕೇಂದ್ರದಲ್ಲಿರುವ ಫ್ಯಾಸಿಸ್ಟ್ ಸರ್ಕಾರವನ್ನು ಕಿತ್ತೊಗೆಯಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆ ನೀಡಿದರು.

'ಕಾಂಗ್ರೆಸ್ ದೇಶವನ್ನು ಒಗ್ಗೂಡಿಸುತ್ತಿದ್ದರೆ ಬಿಜೆಪಿಯು ವಿಭಜಿಸುತ್ತಿದೆ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನುಡಿದಂತೆ ನಡೆಯುತ್ತಿದೆ. ದೇಶದಲ್ಲಿ ಯಾವ ಸರ್ಕಾರವೂ ಇಂತಹ ಗ್ಯಾರಂಟಿಗಳನ್ನು ಕೊಟ್ಟಿಲ್ಲ. ಎಲ್ಲರೂ ಕರ್ನಾಟಕ ದತ್ತ ನೋಡುತ್ತಿದ್ದಾರೆ' ಎಂದರು.

ಎಲ್ಲ ಭರವಸೆ ಈಡೇರಿಸುವ ವಿಶ್ವಾಸ: ಸಿಎಂ

'ಕಾಂಗ್ರೆಸ್ ಸರ್ಕಾರ ಮುಂದಿನ ಐದು ವರ್ಷಗಳಲ್ಲಿ ಎಲ್ಲ ಭರವಸೆಗಳನ್ನೂ ಈಡೇರಿಸುವ ವಿಶ್ವಾಸವಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಸರ್ಕಾರದ ಯಾವುದೇ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ಗ್ಯಾರಂಟಿಗಳನ್ನು ಜಾರಿಗೊಳಿಸಲಾಗುತ್ತಿದೆ' ಎಂದು ಪ್ರತಿಪಾದಿಸಿದರು.

'ವಿರೋಧ ಪಕ್ಷದವರು ಏನೇ ಹೇಳಿದರೂ ಗ್ಯಾರಂಟಿ ಕಾರ್ಯಕ್ರಮಗಳು ಮತ್ತು ಭರವಸೆಗಳನ್ನು ಈಡೇರಿಸಿಯೇ ತೀರುತ್ತೇವೆ' ಎಂದರು.



ಆದಿತ್ಯ ಎಲ್ 1 ಉಡಾವಣೆಗೆ ಸಿದ್ಧಗೊಂಡಿದ್ದು, ಶ್ರೀಹರಿಕೋಟದ ಉಡ್ಡಯನ ವೇದಿಕೆಗೆ ಒಯ್ಯಲು ಸಿಬ್ಬಂದಿ ತಯಾರಿ ನಡೆಸಿದ್ದಾರೆ.

ಆದಿತ್ಯ ಎಲ್–1 ಉಡಾವಣಾ ಪರೀಕ್ಷೆ ಪೂರ್ಣ: ಇಸ್ರೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯನ ಅಧ್ಯಯನಕ್ಕಾಗಿ ಶನಿವಾರ (ಸೆ.2) ಉಡಾವಣೆಗೊಳ್ಳಲಿರುವ 'ಆದಿತ್ಯ ಎಲ್–1'ನ ಉಡಾವಣಾ ಪೂರ್ವಾಭ್ಯಾಸ (ರಿಹರ್ಸಲ್) ಮತ್ತು ಆಂತರಿಕ ಪರೀಕ್ಷೆಯನ್ನು ಇಸ್ರೊ ಬುಧವಾರ ಪೂರ್ಣಗೊಳಿಸಿದೆ.

ಶ್ರೀಹರಿಕೋಟದ ಉಡಾವಣಾ ಕೇಂದ್ರದಿಂದ ಶನಿವಾರ ಬೆಳಿಗ್ಗೆ 11.50ಕ್ಕೆ ಪಿಎಸ್‌ಎಲ್‌ವಿ-ಸಿ 57 ರಾಕೆಟ್ ಮೂಲಕ ಆದಿತ್ಯ ಎಲ್1 ಉಡಾವಣೆ ನಡೆಯಲಿದೆ. ಇದರಲ್ಲಿ ಸೂರ್ಯನ ಅಧ್ಯಯನ ನಡೆಸಲು ಒಟ್ಟು ಏಳು ಉಪಕರಣಗಳು (ಪೇಲೋಡ್) ಇರಲಿವೆ.

'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿರುವ ಇಸ್ರೊ, ಉಡಾವಣೆಗೆ ಎಲ್ಲ ರೀತಿಯ ಸಿದ್ಧತೆಗಳು ಪ್ರಗತಿಯಲ್ಲಿವೆ. ಉಡಾವಣಾ ಪೂರ್ವಾಭ್ಯಾಸ ಮತ್ತು ವಾಹನದ ಆಂತರಿಕ ಪರೀಕ್ಷೆಗಳೂ ಪೂರ್ಣಗೊಂಡಿವೆ ಎಂದು ಹೇಳಿದೆ.

ಭೂಮಿಯಿಂದ 15 ಲಕ್ಷ ಕಿ.ಮೀ ದೂರದಲ್ಲಿರುವ ಲಾಂಗ್ರೇಜ್ ಎಲ್ ಒನ್ ಬಿಂದುವಿನಲ್ಲಿ ಆದಿತ್ಯ ಎಲ್–1 ಅಂತರಿಕ್ಷ ವೀಕ್ಷಣಾಲಯವನ್ನು (ಅಬ್ಸರ್ವೇಟರಿ) ಇರಿಸಲಾಗುವುದು. ಇದು ಯಾವುದೇ ಅಡಚಣೆ ಇಲ್ಲದೆ ನಿರಂತರವಾಗಿ ಸೂರ್ಯನಲ್ಲಿ ನಡೆಯುವ ಸೌರ ಚಟುವಟಿಕೆಗಳನ್ನು ಗಮನಿಸುತ್ತದೆ. ನಾಲ್ಕು ಪ್ರತ್ಯೇಕ ಉಪಕರಣಗಳಿಂದ ಸೂರ್ಯನ ಪ್ರಭಾಗೋಳ, ವರ್ಣಗೋಳ ಮತ್ತು ಕಿರೀಟದ (ಕೊರೋನಾ) ಅಧ್ಯಯನವನ್ನು ನಿರಂತರವಾಗಿ ನಡೆಸಲಿದೆ.

'ಉಳಿದ ಮೂರು ಉಪಕರಣಗಳು ಅಯಸ್ಕಾಂತ ಕ್ಷೇತ್ರ ಮತ್ತು ಕಣ ಪ್ರವಾಹದ ವೀಕ್ಷಣೆ ನಡೆಸುತ್ತವೆ. ಆದಿತ್ಯ ಎಲ್ 1 ಅನ್ನು ಸಂಪೂರ್ಣ ದೇಶೀಯವಾಗಿ ನಿರ್ಮಿಸಲಾಗಿದೆ' ಎಂದು ಇಸ್ರೊ ಹೇಳಿದೆ.

ಸ್ಮೈಲ್ ಪ್ಲೀಸ್... ಎಂದ ಪ್ರಜ್ಞಾನ್

ಚಂದ್ರಯಾನ–3 ರ 'ಪ್ರಜ್ಞಾನ್' ರೋವರ್ ಬುಧವಾರ 'ವಿಕ್ರಮ್' ಲ್ಯಾಂಡರ್‌ನ ಚಿತ್ರವನ್ನು ಸೆರೆ ಹಿಡಿದಿದ್ದು, ಅದನ್ನು ಇಸ್ರೊ ಬಿಡುಗಡೆ ಮಾಡಿದೆ.

'ಪ್ರಜ್ಞಾನ್'ನಲ್ಲಿರುವ ನ್ಯಾವಿಗೇಷನ್ ಕ್ಯಾಮೆರಾ (ನಾವ್‌ಕ್ಯಾಮ್) ಚಂದ್ರನ ನೆಲದ ಮೇಲೆ ನಿಂತಿರುವ 'ವಿಕ್ರಮ್'ನ ಚಿತ್ರವನ್ನು ಇವತ್ತು ಬೆಳಿಗ್ಗೆ ಸೆರೆ ಹಿಡಿದಿದೆ' ಎಂದು ಇಸ್ರೊ ತಿಳಿಸಿದೆ.

ನಾವ್‌ಕ್ಯಾಮ್ ಅನ್ನು ಇಸ್ರೊ ಅಂಗ ಸಂಸ್ಥೆಯಾಗಿರುವ ಲ್ಯಾಬೊರೇಟರಿ ಫಾರ್ ಎಲೆಕ್ಟ್ರೊ–ಆಪ್ಟಿಕ್ಸ್ ಸಿಸ್ಟಮ್ಸ್ (ಎಲ್‌ಇಒಎಸ್) ಅಭಿವೃದ್ಧಿಪಡಿಸಿದೆ.

ನೊಬೆಲ್ ಪುರಸ್ಕೃತರಿಂದ 'ಗ್ಯಾರಂಟಿ' ಅಧ್ಯಯನ

• ಭರತ್ ಜೋಶಿ

ಬೆಂಗಳೂರು: ಸಿದ್ದರಾಮಯ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳ ಪರಿಣಾಮಗಳನ್ನು ಅಧ್ಯಯನ ನಡೆಸಲು ನೊಬೆಲ್ ಪ್ರಶಸ್ತಿ ಪುರಸ್ಕೃತ ಅಭಿಜಿತ್ ಬ್ಯಾನರ್ಜಿ ಮತ್ತು ಎಸ್ತರ್ ಡಫ್ಲೊ ಸಹ ಸ್ಥಾಪಕರಾಗಿರುವ ಸಂಶೋಧನಾ ಸಂಸ್ಥೆ ಮುಂದಾಗಿದೆ.

ಅಲ್ಲದೇ, ರಾಜ್ಯ ಸರ್ಕಾರದ ವಿತ್ತೀಯ ಕಾರ್ಯನೀತಿ ಸಂಸ್ಥೆಯು ಐದು ಗ್ಯಾರಂಟಿಗಳ ಜಾರಿಯ ಪರಿಣಾಮಗಳನ್ನು ಮೌಲ್ಯಮಾಪನ ನಡೆಸಲಿದೆ ಎಂದು ಹಣಕಾಸು ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಎಲ್.ಕೆ.ಅತೀಕ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಸಂಬಂಧ ರಾಜ್ಯ ಸರ್ಕಾರ ಅಭಿಜಿತ್ ಬ್ಯಾನರ್ಜಿ ಮತ್ತು ಡಫ್ಲೊ ಸೇರಿ ಆರಂಭಿಸಿರುವ ಅಬ್ದುಲ್ ಲತೀಫ್ ಜಮೀಲ್ ಪವರ್ಟಿ ಆ್ಯಕ್ಷನ್ ಲ್ಯಾಬ್ (ಜೆ-ಪಾಲ್) ಸಂಸ್ಥೆಯನ್ನು ಸಂಪರ್ಕಿಸಿದ್ದು, ಇದಕ್ಕೆ ಸಂಸ್ಥೆಯು ಒಪ್ಪಿಗೆ ನೀಡಿದೆ. ಇವರಿಬ್ಬರ ಜತೆಗೆ ಶಿಕಾಗೋ ಬೂತ್‌ನ ಸೆಂತಿಥಿ ಮುಲ್ಲೈನಾಥನ್ ಅವರೂ ಐದು ಗ್ಯಾರಂಟಿಗಳ ಬಗ್ಗೆ ಅಧ್ಯಯನ ನಡೆಸಲು ಆಸಕ್ತಿ ತೋರಿಸಿದ್ದಾರೆ.

ಅಭಿಜಿತ್ ಬ್ಯಾನರ್ಜಿ ಅವರು 2019 ರ ಲೋಕಸಭೆ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷಕ್ಕೆ 'ನ್ಯಾಯ್' ಯೋಜನೆ ರೂಪಿಸಿದ್ದರು. ಇದರಡಿ ಕಾಂಗ್ರೆಸ್ ಪ್ರತಿ ಬಡ ಕುಟುಂಬಗಳಿಗೆ ₹6,000 ನೀಡುವ ಆಶ್ವಾಸನೆಯನ್ನು ಪ್ರಕಟಿಸಿತ್ತು.

ಆದರೆ, ಲೋಕಸಭಾ ಚುನಾವಣೆಯಲ್ಲಿ 'ನ್ಯಾಯ್' ಯೋಜನೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ಲಾಭವಾಗಲಿಲ್ಲ. ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷ ಅಭೂತಪೂರ್ವ ವಿಜಯ ಸಾಧಿಸಲು ಕಾರಣವಾಗಿದೆ ಎಂದು ನಂಬಲಾಗಿದೆ.

ಇನ್ನು ಕೆಲವೇ ತಿಂಗಳಲ್ಲಿ ಉದ್ದೇಶಿತ ಅಧ್ಯಯನ ಆರಂಭವಾಗಲಿದೆ ಎಂದೂ ಅವರು ಹೇಳಿದರು.

'ಬರ ತಾಲ್ಲೂಕು: ಸೆ. 4ಕ್ಕೆ ಘೋಷಣೆ'

ಪ್ರಜಾವಾಣಿ ವಾರ್ತೆ



ಕೃಷ್ಣ ಬೈರೇಗೌಡ

ಬೆಂಗಳೂರು: 'ಕೇಂದ್ರ ಸರ್ಕಾರದ ಮಾರ್ಗಸೂಚಿ ಅನ್ವಯ, ಯಾವ್ಯಾವ ತಾಲ್ಲೂಕುಗಳು ಬರ ಘೋಷಣೆಗೆ ಅರ್ಹವಾಗುತ್ತವೆ ಎನ್ನುವುದನ್ನು ಗುರುತಿಸಲು ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ. ಗುರುವಾರದ (ಆಗಸ್ಟ್ 31) ಒಳಗೆ ಬೆಳೆ ನಷ್ಟದ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಕೆಲವು ತಾಲ್ಲೂಕುಗಳಿಂದ ಈಗಾಗಲೇ ಮಾಹಿತಿ ಬಂದಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ಪ್ರಜಾವಾಣಿ' ಜೊತೆ ಬುಧವಾರ ಮಾತನಾಡಿದ ಅವರು, 'ಸಚಿವ ಸಂಪುಟ ಉಪ ಸಮಿತಿಯ ಸಭೆ ಸೆ. 4ರಂದು ನಡೆಯಲಿದೆ. ಆ ಸಭೆಯಲ್ಲಿ ಎಷ್ಟು ತಾಲ್ಲೂಕುಗಳು ಬರಪೀಡಿತ ಎನ್ನುವುದನ್ನು ಅಂತಿಮಗೊಳಿಸಿ ಘೋಷಿಸಲಾಗುವುದು. ಈ ತಾಲ್ಲೂಕುಗಳಲ್ಲಿ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳ ಬಗ್ಗೆಯೂ ಈ ಸಭೆಯಲ್ಲಿ ತೀರ್ಮಾನಿಸಲಾಗುವುದು. ಈ ಬಗ್ಗೆ ವಾರದೊಳಗೆ ಕೇಂದ್ರಕ್ಕೆ ಮನವಿಯನ್ನೂ ಸಲ್ಲಿಸಲಾಗುವುದು. ಮಳೆ ಕೊರತೆ, ಬೆಳೆ ಸಮೀಕ್ಷೆ ಆಧಾರದಲ್ಲಿ ಮುಂದೆ ಪ್ರತಿ 15 ದಿನಗಳಿಗೊಮ್ಮೆ ಬರ ಪೀಡಿತ ತಾಲ್ಲೂಕುಗಳ ಹೊಸ ಪಟ್ಟಿ ತಯಾರಿಸಲಾಗುವುದು' ಎಂದೂ ಅವರು ತಿಳಿಸಿದರು.

'ಬರ ಘೋಷಣೆ ವಿಚಾರದಲ್ಲಿ ರಾಜ್ಯ ಸರ್ಕಾರದ ವಿವೇಚನೆ ಬಳಸುವಂತೆ ಇಲ್ಲ. ಕೇಂದ್ರದ ಮಾರ್ಗಸೂಚಿಯೇ ಅಂತಿಮ. ಈ ಮಾರ್ಗಸೂಚಿಯನ್ನು ಸರಳಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ. ಆದರೆ, ಕೇಂದ್ರ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಅವರು ಹೇಳಿದರು.



ಬದನಗೋಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಿನ ಕೊರತೆಯಿಂದ ಬಳಲಿದ ಬತ್ತದ ಸಸಿಗಳು

113ಕ್ಕೂ ಹೆಚ್ಚು ತಾಲ್ಲೂಕು 'ಬರಪೀಡಿತ'?

ತೀವ್ರ ಮಳೆ ಕೊರತೆ ಎದುರಿಸುತ್ತಿರುವ ರಾಜ್ಯದ 113 ತಾಲ್ಲೂಕುಗಳನ್ನು ಬರಪೀಡಿತ ಎಂದು ಈಗಾಗಲೇ ಗುರುತಿಸಿದ್ದು, ಈ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

'ಆಗಸ್ಟ್ ತಿಂಗಳಲ್ಲಿ ತೀವ್ರ ಮಳೆ ಕೊರತೆ ಎದುರಾಗಿರುವುದು ಇದೇ ಮೊದಲು. ಹಿಂದೆಂದೂ ಈ ಪ್ರಮಾಣದಲ್ಲಿ ಮಳೆ ಕೊರತೆ ಆಗಿರಲಿಲ್ಲ. ಯಾವುದೇ ತಾಲ್ಲೂಕನ್ನು ಬರಪೀಡಿತ ಎಂದು ಘೋಷಿಸುವ ಮೊದಲು ಮೂರು ಹಂತಗಳಲ್ಲಿ ಸಮೀಕ್ಷೆ ನಡೆಸಲಾಗುತ್ತದೆ. ಈಗ ಮೂರನೇ ಹಂತದಲ್ಲಿ ಬೆಳೆ ನಷ್ಟದ ಸಮೀಕ್ಷೆ ನಡೆಸಲಾಗುತ್ತಿದೆ. ಮಳೆಯ ತೀವ್ರ ಕೊರತೆ ಎದುರಿಸುತ್ತಿರುವ ತಾಲ್ಲೂಕುಗಳಲ್ಲಿ ಈ ಸಮೀಕ್ಷೆ ನಡೆಯುತ್ತಿದೆ. ಮೂರು ಸಮೀಕ್ಷೆಗಳ ಆಧಾರದಲ್ಲಿ ತೀವ್ರ ಅಥವಾ ಸಾಧಾರಣ ಬರ ಎಂಬುದನ್ನು ತೀರ್ಮಾನಿಸಲಾಗುತ್ತದೆ. ಅಕ್ಟೋಬರ್ ವೇಳೆಗೆ ಈ ಪ್ರಕ್ರಿಯೆ ಮುಂದುವರಿಯಲಿದೆ' ಎಂದೂ ಮೂಲಗಳು ಹೇಳಿವೆ.

ಆಳ–ಅಗಲ: ಬರದ ಬೇಗೆಯಲ್ಲಿ ಕರ್ನಾಟಕ 09

ಜಿಎಸ್‌ಟಿ ವಂಚನೆ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಎಸ್‌ಟಿ ನಕಲಿ ರಸೀದಿ ಬಳಸಿ ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿದ್ದ ಜಾಲವನ್ನು ವಾಣಿಜ್ಯ ತೆರಿಗೆ ಇಲಾಖೆಯ ಬೆಂಗಳೂರು ದಕ್ಷಿಣ ವಲಯದ ಅಧಿಕಾರಿಗಳು ಪತ್ತೆ ಹಚ್ಚಿ, ಇಬ್ಬರನ್ನು ಬಂಧಿಸಿದ್ದಾರೆ.

ಬೆಂಗಳೂರಿನ ಎಚ್.ಎಂ.ಗುರುಪ್ರಸಾದ್ ಹಾಗೂ ಮಂಜುನಾಥಯ್ಯ ಬಂಧಿತ ಆರೋಪಿಗಳು.

ವಂಚಕರು ತಮ್ಮ ಕುಟುಂಬದ ಸದಸ್ಯರು, ಸ್ನೇಹಿತರ ಹೆಸರಿನಲ್ಲಿ 30ಕ್ಕೂ ಹೆಚ್ಚು ನಕಲಿ ಕಂಪನಿಗಳನ್ನು ತೆರೆದು ₹525 ಕೋಟಿ ವಹಿವಾಟು ನಡೆಸಿದ್ದಾರೆ. ಸರ್ಕಾರಕ್ಕೆ ₹90 ಕೋಟಿ ತೆರಿಗೆ ನಷ್ಟ ಮಾಡಿದ್ದಾರೆ. ಮಾನವ ಶಕ್ತಿ ಮತ್ತು ಕಾರ್ಮಿಕ ಪೂರೈಕೆ ಸೇವಾ ವಲಯದ ಕಂಪನಿಗಳಿಗೆ ತೆರಿಗೆ ವಹಿವಾಟಿನ ನಕಲಿ ರಸೀದಿ ನೀಡಿ ಹಣ ಸಂಗ್ರಹಿಸಿದ್ದಾರೆ ಎಂದು ವಾಣಿಜ್ಯ ತೆರಿಗೆ ಆಯುಕ್ತರು ಮಾಹಿತಿ ನೀಡಿದ್ದಾರೆ.

ಸೇವಾ ವಲಯದಲ್ಲಿ ನಕಲಿ ರಸೀದಿ ಸೃಷ್ಟಿಸುವ ಜಾಲವನ್ನು ಭೇದಿಸಿರುವುದು ಇದೇ ಮೊದಲು ಎಂದಿದ್ದಾರೆ.

ಕಾರ್ಯದರ್ಶಿಯಿಂದ ಅಧಿಕಾರ ದುರ್ಬಳಕೆ: ಕೆಪಿಎಸ್‌ಸಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಪರ್ಧಾತ್ಮಕ ಪರೀಕ್ಷಾ ವ್ಯವಸ್ಥೆಯನ್ನು ಮತ್ತಷ್ಟು ಪಾರದರ್ಶಕ ವಾಗಿ ನಡೆಸುವ ಉದ್ದೇಶದಿಂದ ಅಭ್ಯರ್ಥಿಗಳ ಕಣ್ಗಾವಲಿಗೆ ಪರೀಕ್ಷಾ ಕೇಂದ್ರಗಳಲ್ಲಿನ ಸಿಸಿಟಿವಿ ಕ್ಯಾಮೆರಾಗಳಿಗೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಾಂಶ ಅಳವಡಿಸುವ ವಿಷಯವನ್ನು ಆಯೋಗದ ಸಭೆಯಲ್ಲಿ ಕಾರ್ಯದರ್ಶಿ ಪ್ರಸ್ತಾಪಿಸಿಲ್ಲ. ಆ ಮೂಲಕ, ಕಾರ್ಯದರ್ಶಿ ಅಧಿಕಾರ ದುರ್ಬಳಕೆ ಮಾಡಿದ್ದಾರೆ' ಎಂದು ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಆರೋಪಿಸಿದ್ದಾರೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಆಯೋಗಕ್ಕೆ ಮಾಹಿತಿ ನೀಡದೆ ಸುಮಾರು ₹45 ಕೋಟಿಯ ಟೆಂಡರ್ ಆಹ್ವಾನಿಸಲಾಗಿದೆ' ಎಂದು ತಿಳಿಸಿದ್ದಾರೆ.

4ನೇ ಪುಟ ನೋಡಿ

'ಕಾರ್ಯದರ್ಶಿಯ ಅಧಿಕಾರದ ವ್ಯಾಪ್ತಿಯಲ್ಲಿದೆ'

'ಅಧ್ಯಕ್ಷರು ಉಲ್ಲೇಖಿಸಿದ ಟೆಂಡರ್ ಮೊತ್ತ ವಾಸ್ತವ ಅಲ್ಲ. ಈ ಮೊತ್ತವು ಪ್ರತಿ ಪರೀಕ್ಷೆಗೆ ಅಭ್ಯರ್ಥಿಗಳ ಮತ್ತು ನಿರ್ದಿಷ್ಟ ಅವಧಿಯಲ್ಲಿ ನಡೆಯುವ ಪರೀಕ್ಷೆಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಪರೀಕ್ಷಾ ಕೇಂದ್ರಗಳ ಸೂಕ್ಷ್ಮತೆಯ ಆಧಾರದಲ್ಲಿ ವಿವಿಧ ಕೇಂದ್ರಗಳಲ್ಲಿ ನಿಯೋಜಿಸಬಹುದಾದ ವಿವಿಧ ಸೇವೆಗಳ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಟೆಂಡರ್ ಮೊತ್ತವನ್ನು ನಿಖರವಾಗಿ ಲೆಕ್ಕ ಮಾಡಲು ಸಾಧ್ಯ ಇಲ್ಲ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ಪ್ರತಿಕ್ರಿಯಿಸಿದ್ದಾರೆ.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಹಿರಿಯ ಅತಿಥಿ ಉಪನ್ಯಾಸಕರಿಗೆ ಸಂಕಷ್ಟ

'ಅತಿಥಿ' ಕೃಪಾಂಕಕ್ಕೆ 16 ವರ್ಷಗಳ ಮಿತಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ನೇಮಕಾತಿಗೆ ಗರಿಷ್ಠ 16 ವರ್ಷಗಳ ಸೇವೆಗಷ್ಟೇ ಕೃಪಾಂಕ ನಿಗದಿ ಮಾಡಿರುವುದರಿಂದ ಸುದೀರ್ಘಾವಧಿ ಸೇವೆ ಸಲ್ಲಿಸಿದವರು ತಮ್ಮ ಶಿಷ್ಯರ ಜತೆ ಸ್ಪರ್ಧಿಸಲಾಗದೆ ಕೆಲಸ ಕಳೆದುಕೊಳ್ಳುತ್ತಿದ್ದಾರೆ.

ಪ್ರತಿ ಶೈಕ್ಷಣಿಕ ವರ್ಷದ ಆರಂಭದಲ್ಲಿ ನೇಮಕಾತಿ ಹೊಂದಿ 10 ತಿಂಗಳು ಕೆಲಸ ಮಾಡುವ ಅತಿಥಿ ಉಪನ್ಯಾಸಕರು, ನಂತರ ಕರ್ತವ್ಯದಿಂದ ಬಿಡುಗಡೆ ಹೊಂದುತ್ತಾರೆ. ಮತ್ತೆ ಬರುವ ಶೈಕ್ಷಣಿಕ ವರ್ಷಕ್ಕೆ ಎಲ್ಲರೂ ಅರ್ಜಿ ಸಲ್ಲಿಸಬೇಕು. ಅಂತಿಮ ಆಯ್ಕೆಪಟ್ಟಿಯಲ್ಲಿ ಅವಕಾಶ ದೊರೆತರೆ ಕೌನ್ಸೆಲಿಂಗ್ ಮೂಲಕ ಕಾಲೇಜು ಆಯ್ಕೆ ಮಾಡಿಕೊಳ್ಳಬಹುದು. ಇಲ್ಲದಿದ್ದರೆ ಆ ವರ್ಷಕ್ಕೆ ಅವರು ನಿರುದ್ಯೋಗಿ.

ಶೈಕ್ಷಣಿಕ ಅರ್ಹತೆ ಹಾಗೂ ಸೇವಾ ಅನುಭವಕ್ಕೆ ಅಂಕಗಳನ್ನು ನಿಗದಿ ಮಾಡಿ ಕಾಲೇಜು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಆಯಾ ವಿಷಯಗಳಿಗೆ ಅರ್ಜಿ ಸಲ್ಲಿಸುವವರು ಸ್ನಾತಕೋತ್ತರ ಪದವಿಯಲ್ಲಿ ಪಡೆದ ಶೇಕಡವಾರು ಅಂಕಗಳಲ್ಲಿ ಶೇ 25 ನಿಗದಿ ಮಾಡಲಾಗಿದೆ (ಒಬ್ಬ ಅಭ್ಯರ್ಥಿ ಶೇ 60 ಅಂಕ ಪಡೆದಿದ್ದರೆ ಅದನ್ನು 15 ಅಂಕಗಳು ಎಂದು ಪರಿಗಣಿಸಲಾಗುತ್ತದೆ). ಪಿಎಚ್‌.ಡಿ, ನೀಟ್, ಎಂ.ಫಿಎಲ್ ಪದವಿಗಳಿಗೆ 27 ಅಂಕಗಳು ಹಾಗೂ ಪ್ರತಿ ವರ್ಷದ ಸೇವಾನುಭವಕ್ಕೆ 3 ಅಂಕಗಳಂತೆ ಗರಿಷ್ಠ 16 ವರ್ಷಗಳಿಗೆ 48 ಅಂಕಗಳನ್ನು ನಿಗದಿ ಮಾಡಲಾಗಿದೆ.

ಕಳೆದ ಕೆಲ ವರ್ಷಗಳಿಂದ ಈಚೆಗೆ ಪಿ.ಎಚ್‌ಡಿ ಪಡೆದ, ನೀಟ್ ತೇರ್ಗಡೆಯಾದವರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದ್ದು, 20-25 ವರ್ಷಗಳು ಸೇವೆ ಸಲ್ಲಿಸಿದ ಸುಮಾರು 6 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಸ್ನಾತಕೋತ್ತರ ಪದವಿ ಹೊರತಾಗಿ ಬೇರೆ ವಿದ್ಯಾರ್ಹತೆ ಪಡೆದಿಲ್ಲ.

ಅಲ್ಲದೇ ಹಿಂದೆ ಸೆಮಿಸ್ಟರ್ ಹೊರತಾದ ಶಿಕ್ಷಣ ಪದ್ಧತಿಯಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಅವರು ಪಡೆದಿರುವ ಅಂಕಗಳಿಗೂ, ಇಂದಿನ ಸೆಮಿಸ್ಟರ್ ಪದ್ಧತಿಯಲ್ಲಿ ಹೊಸ ತಲೆಮಾರು ಪಡೆಯುತ್ತಿರುವ ಅಂಕಗಳಿಗೂ ಭಾರಿ ವ್ಯತ್ಯಾಸವಿದೆ. ಇಂತಹ ಪರಿಸ್ಥಿತಿಯಲ್ಲಿ ಪದವಿ ಕಾಲೇಜುಗಳ ಬೋಧನೆಯನ್ನೇ ನಂಬಿಕೊಂಡು ಬದುಕು ಕಟ್ಟಿಕೊಂಡಿರುವ ಅವರಿಗೆ ಕಾಲೇಜು ಶಿಕ್ಷಣ ಇಲಾಖೆಯ ಹೊಸ ನಿಯಮಗಳು ಸಂಕಷ್ಟ ಸೃಷ್ಟಿಸಿವೆ. ತಾವೇ ಪಾಠ ಮಾಡಿದ್ದ ಶಿಷ್ಯರ ಎದುರು ಸ್ಪರ್ಧಿಸಲಾಗದೆ ಪ್ರತಿ ವರ್ಷವೂ 500ಕ್ಕೂ ಹೆಚ್ಚು ಮಂದಿ ಕೆಲಸ ಕಳೆದುಕೊಳ್ಳುತ್ತಿದ್ದಾರೆ.

70ರ ವಯೋಮಾನದವರೆಗೂ ಅತಿಥಿ ಉಪನ್ಯಾಸಕರ ಸೇವೆ ಪಡೆಯಬಹುದು ಎಂದು ಯುಜಿಸಿ ಹೇಳಿದೆ. ಆದರೆ, ಸರ್ಕಾರ ನಿರಾಸಕ್ತಿ ತೋರುತ್ತಿದೆ
ಸೋಮಶೇಖರ ಶಿಮೊಗ್ಗಿ, ಅಧ್ಯಕ್ಷ, ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ರಾಜ್ಯ ಸಮನ್ವಯ ಸಮಿತಿ

ಅರ್ಹತೆ	ಅಂಕಗಳು
ಸ್ನಾತಕೋತ್ತರ ಪದವಿ	25 (ಗರಿಷ್ಠ)
ಪಿಎಚ್‌.ಡಿ	12
ಎನ್‌ಇಟಿ/ಕೆಸೆಟ್	09
ಎಂ.ಫಿಎಲ್	06
ಸೇವಾನುಭವ	48 (ಗರಿಷ್ಠ)

ಅತಿಥಿಗಳ ಸೇವೆಗೂ ವಯೋಮಿತಿ

ಕಾಲೇಜು ಶಿಕ್ಷಣ ಇಲಾಖೆ ಅತಿಥಿ ಉಪನ್ಯಾಸಕರಿಗೂ 60 ವರ್ಷಗಳ ವಯೋಮಿತಿ ನಿಗದಿ ಮಾಡಿದೆ. ಹಾಗಾಗಿ, ಇಡೀ ಬದುಕು ಬೋಧಕ ವೃತ್ತಿಯಲ್ಲಿ ಕಳೆದವರು ಕೆಲಸ ಕಾಯಂ ಆಗದೇ ಮನೆಗೆ ಮರಳುವಂತಾಗಿದೆ. ಪ್ರಸಕ್ತ ವರ್ಷ ನಿಗದಿತ ವಯೋಮಿತಿ ದಾಟಿದ 375 ಮಂದಿ ಬೋಧನಾ ಕಾರ್ಯಕ್ಕೆ ವಿದಾಯ ಹೇಳುತ್ತಿದ್ದಾರೆ.

ಸೆ.4 ರಿಂದ ಎಂಜಿನಿಯರಿಂಗ್ ತರಗತಿಗಳು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) 2023–24ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಬಿಡುಗಡೆ ಮಾಡಿದ್ದು, ಸೆ.4ರಿಂದಲೇ ಎಂಜಿನಿಯರಿಂಗ್ ಕಾಲೇಜುಗಳ ಮೊದಲ ಸೆಮಿಸ್ಟರ್ ತರಗತಿಗಳು ಆರಂಭವಾಗಲಿವೆ.

ಮೊದಲ 10 ದಿನಗಳು ವಿದ್ಯಾರ್ಥಿಗಳಿಗೆ ಪುನಶ್ಚೇತನ ತರಗತಿಗಳು ನಡೆಯಲಿವೆ. ಸೆ.15ರಿಂದ ಅಧಿಕೃತವಾಗಿ ಮೊದಲ ಸೆಮಿಸ್ಟರ್ ಪಾಠಗಳು ಆರಂಭವಾಗಲಿವೆ. ಜ.6ರ ಒಳಗೆ ಬೋಧನಾ ಕಾರ್ಯ ಪೂರ್ಣಗೊಳಿಸಬೇಕು. ಜ.8 ರಿಂದ 19ರವರೆಗೆ ಪ್ರಾಯೋಗಿಕ ಪರೀಕ್ಷೆಗಳು, 22ರಿಂದ ಫೆ.17ರವರೆಗೆ ಲಿಖಿತ ಪರೀಕ್ಷೆಗಳು ನಡೆಯಲಿವೆ. ಫೆ. 19ರಿಂದ ಎರಡನೇ ಸೆಮಿಸ್ಟರ್ ಆರಂಭವಾಗಲಿವೆ.

ಪೋಷಕರ ದೂರು: ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಆ.30ರಿಂದ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಆರಂಭವಾಗಿದೆ.ಸೆ.4ರಂದು ಪರೀಕ್ಷಾ ಪ್ರಾಧಿಕಾರ ಈ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸುತ್ತಿದೆ. ಆದರೆ, ಖಾಸಗಿ ಕಾಲೇಜುಗಳು ಈಗಾಗಲೇ ತರಗತಿಗಳನ್ನು ಆರಂಭಿಸಿದ್ದು, ತಡವಾಗಿ ಪ್ರವೇಶ ಪಡೆಯುವ ಮಕ್ಕಳಿಗೆ ಅನ್ಯಾಯವಾಗುತ್ತದೆ ಎಂದು ಹಲವು ಪೋಷಕರು ದೂರಿದ್ದಾರೆ.

ಹುನಗುಂದ ನೇಮಕಕ್ಕೆ ಆಕ್ಷೇಪ: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಮಾಜಿ ಸದಸ್ಯ ಸಿ.ಜಿ.ಹುನಗುಂದ ಅವರನ್ನು ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನ್ಯಾಯಾಂಗ ಸದಸ್ಯರನ್ನಾಗಿ ನೇಮಕ ಮಾಡಿರುವ ಕ್ರಮ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ವಕೀಲ ಎಸ್. ಉಮಾಪತಿ ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ, ಪ್ರತಿ ವಾದಿಗಳಾದ ರಾಜ್ಯ ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಭೂ ಕಬಳಿಕೆ ವಿಶೇಷ ನ್ಯಾಯಾಲಯದ ರಿಜಿಸ್ಟ್ರಾರ್, ಕಾನೂನು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಸಿ.ಜಿ.ಹುನಗುಂದ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ. ಅರ್ಜಿಗೆ ಸಂಬಂಧಿಸಿ 3 ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: ಸಿ.ಜಿ.ಹುನಗುಂದ ಅವರು ರಾಮನಗರ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾಗಿ ನಿವೃತ್ತರಾದ 2012ರ ನ.29 ರಿಂದ 2017ರ ನ. 28ರವರೆಗೆ 5 ವರ್ಷ ಕಾಲ ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿದ್ದರು. ಮಾನವ ಹಕ್ಕುಗಳ ಸಂರಕ್ಷಣಾ ಕಾಯ್ದೆಯ ಕಲಂ 24(3)ರ ಪ್ರಕಾರ ಆಯೋಗದ ಅಧ್ಯಕ್ಷರು ಅಥವಾ ಸದಸ್ಯರಾಗಿದ್ದವರು ತದನಂತರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಯಾವುದೇ ಹುದ್ದೆ ಹೊಂದುವಂತಿಲ್ಲ. ಕಾಯ್ದೆಯ ಅಂಶಗಳನ್ನು ಮರೆಮಾಚಿ ಹುನಗುಂದ ಅವರನ್ನು 2022ರ ಅ. 21ರಂದು ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನ್ಯಾಯಾಂಗ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

'ನೇಮಕಾತಿ ರದ್ದುಪಡಿಸಬೇಕು. ಅರ್ಜಿ ಇತ್ಯರ್ಥವಾಗುವತನಕ 2022ರ ಅ. 21ರಂದು ಹೊರಡಿಸಲಾದ ಅಧಿಸೂಚನೆಯ ಕಾರ್ಯಾಚರಣೆಗೆ ತಡೆ ನೀಡಬೇಕು' ಎಂದು ಕೋರಿದ್ದಾರೆ.

ಹೊಸ ವಿಧಾನದಡಿ ಕ್ರಿಯಾ ಯೋಜನೆ ರೂಪಿಸಿದ ಬಿಬಿಎಂಪಿ: ಹೈಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಕೆ

ಅಕ್ರಮ ಜಾಹೀರಾತು: 264 ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಜಾಹೀರಾತು ಅಳವಡಿಸಿದ್ದ ವ್ಯಕ್ತಿಗಳ ವಿರುದ್ಧ ಒಟ್ಟು 264 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ' ಎಂದು ಬಿಬಿಎಂಪಿ ಹೈಕೋರ್ಟ್‌ಗೆ ತಿಳಿಸಿದೆ.

'ಹೋರ್ಡಿಂಗ್, ಫ್ಲೆಕ್ಸ್, ಬ್ಯಾನರ್ ಸೇರಿದಂತೆ ಅಕ್ರಮ ಜಾಹೀರಾತುಗಳ ಹಾವಳಿಯನ್ನು ತಡೆಯುವ ನಿಟ್ಟಿನಲ್ಲಿ ಪ್ರತಿಯೊಂದು ಅಕ್ರಮ ಜಾಹೀರಾತು ಅಳವಡಿಕೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ರಾಜ್ಯ ಸರ್ಕಾರಕ್ಕೆ ತಲಾ ₹ 50 ಸಾವಿರ ದಂಡ ವಿಧಿಸಲು ಹೈಕೋರ್ಟ್ ನೀಡಿರುವ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ' ಎಂದು ಹೇಳಿದೆ.

ಈ ಸಂಬಂಧ ಮಾಯಿಗೇಗೌಡ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲ ಎನ್.ಕೆ.ರಮೇಶ್ ಅವರು ಈ ಸಂಬಂಧ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿ, ಕೈಗೊಂಡಿರುವ ಕ್ರಮ ಮತ್ತು ಯೋಜನೆಗಳನ್ನು ವಿವರಿಸಿದರು.


ಪ್ರಮಾಣ ಪತ್ರದಲ್ಲೇನಿದೆ?: 'ಅಕ್ರಮ ಜಾಹೀರಾತುಗಳ ಅಳವಡಿಕೆ ಮಹಾನಗರದಲ್ಲಿ ಒಂದು ಉಪಟಳವಾಗಿ ಪರಿಣಮಿಸಿದೆ. ಇದನ್ನು ತಡೆಯಲು ಬಿಬಿಎಂಪಿ ಅಧಿಕಾರಿಗಳು ಹೊಸ ವಿಧಾನಗಳಡಿ ಮತ್ತು ಕಟ್ಟುನಿಟ್ಟಾದ ಕ್ರಿಯಾ ಯೋಜನೆಯನ್ನು ರೂಪಿಸಿದ್ದಾರೆ. ಈ ಮೂಲಕ ಭವಿಷ್ಯದಲ್ಲಿ ಅನಧಿಕೃತ ಫ್ಲೆಕ್ಸ್‌ಗಳು, ಬ್ಯಾನರ್‌ಗಳನ್ನು ಅಕ್ರಮವಾಗಿ ಅಳವಡಿಸುವುದನ್ನು ಸಂಪೂರ್ಣವಾಗಿ ತಡೆಯಲು ಶ್ರಮಿಸುತ್ತಿದ್ದಾರೆ' ಎಂದು ಪ್ರಮಾಣ ಪತ್ರದಲ್ಲಿ ವಿವರಿಸಲಾಗಿದೆ.

ಅಂಕಿ ಅಂಶ: 2023ರ ಆಗಸ್ಟ್ 2ರಿಂದ ಒಟ್ಟು 923 ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳು ಮತ್ತು ಇತರ ಅಕ್ರಮ ಜಾಹೀರಾತುಗಳನ್ನು ಗುರುತಿಸಲಾಗಿದೆ. 923 ಅನಧಿಕೃತ ಜಾಹೀರಾತುಗಳನ್ನು ತೆಗೆದುಹಾಕಲಾಗಿದೆ. 369 ದೂರು ಹಾಗೂ 264 ಎಫ್‌ಐಆರ್ ದಾಖಲಾಗಿವೆ.

ಕ್ರಮಕ್ಕೆ ಚಾಲನೆ: 'ಬಿಬಿಎಂಪಿಯ ಎಂಟೂ ವಲಯಗಳ ವಿಶೇಷ ಆಯುಕ್ತರು ಮತ್ತು ವಲಯ ಆಯುಕ್ತರೊಂದಿಗೆ ಇದೇ 21ರಂದು ವಿಡಿಯೊ ಕಾನ್ಫರೆನ್ಸ್ ನಡೆಸಲಾಗಿದೆ. ನಿರ್ದಿಷ್ಟ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಲು ವಾರ್ಡ್‌ವಾರು ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ಎಫ್‌ಐಆರ್, ದಂಡ ವಿಧಿಸುವುದು ಮತ್ತು ಅನಧಿಕೃತ ಜಾಹೀರಾತುಗಳನ್ನು ತೆಗೆದುಹಾಕುವಂತೆ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಲಾಗಿದೆ. ತಪ್ಪಿತಸ್ಥ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಚಾಲನೆ ನೀಡಲಾಗಿದೆ' ಎಂದು ವಿವರಿಸಲಾಗಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ಅಕ್ರಮ ಜಾಹೀರಾತುಗಳು ಇನ್ನೂ ಅಸ್ತಿತ್ವದಲ್ಲಿವೆ ಎಂಬ ಬಗ್ಗೆ ಫೋಟೊ ಸಹಿತವಾದ ಮೆಮೊ ಅನ್ನು ಸಲ್ಲಿಸುವ ಮೂಲಕ ಬಿಬಿಎಂಪಿ ನ್ಯಾಯಾಲಯದ ಆದೇಶವನ್ನು ಪಾಲಿಸಿಲ್ಲ' ಎಂದು ದೂರಿದರು. ಈ ಮೆಮೊಗೆ ಆಕ್ಷೇಪಣೆ ಸಲ್ಲಿಸುವಂತೆ ಬಿಬಿಎಂಪಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿತು.

ಹೈಕೋರ್ಟ್ ಏನು ಹೇಳಿತ್ತು?



ಈ ಹಿಂದಿನ ವಿಚಾರಣೆ ವೇಳೆ ನ್ಯಾಯಪೀಠವು, ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಸಲ್ಲಿಸಿದ್ದ ಅನುಪಾಲನಾ ವರದಿಯನ್ನು 'ಕಣ್ಣೊರೆಸುವ ತಂತ್ರ' ಎಂದು ಜರಿದಿತ್ತು. 'ಅನಧಿಕೃತ ಫ್ಲೆಕ್ಸ್, ಬ್ಯಾನರ್, ಧ್ವಜಗಳು, ಬಂಟಿಂಗ್... ಮುಂತಾದವುಗಳನ್ನು ತೆರವುಗೊಳಿಸುವ ಬಗ್ಗೆ 134 ದೂರುಗಳನ್ನು ಪರಿಗಣಿಸಿ ಕೇವಲ 40 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ' ಎಂಬ ಅಂಶಕ್ಕೆ ಕಿಡಿ ಕಾರಿತ್ತು.

'ನಗರದಲ್ಲಿ ಒಂದೇ ಒಂದು ಅನಧಿಕೃತ ಫ್ಲೆಕ್ಸ್ ಕಂಡು ಬಂದರೆ ಪಾಲಿಕೆ ಮತ್ತು ರಾಜ್ಯ ಸರ್ಕಾರ ತಲಾ ₹ 50 ಸಾವಿರ ಠೇವಣಿ ಇರಿಸಬೇಕು' ಎಂದು ನಿರ್ದೇಶಿಸಿತ್ತು. 'ಅನಧಿಕೃತ ಜಾಹೀರಾತು ಫಲಕ ಅಳವಡಿಸಲು ಅವಕಾಶ ನೀಡುವ ಕಟ್ಟಡದ ಮಾಲೀಕರ ವಿರುದ್ಧವೂ ಕಾನೂನು ಕ್ರಮ ಜರುಗಿಸುವುದು ಹಾಗೂ ಜಾಹೀರಾತು ಅಳವಡಿಸಿದ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದು ನಿರ್ದೇಶಿಸಿತ್ತು.

ಬಿಬಿಎಂಪಿ ಅಧಿಕಾರಿಗಳ ವರ್ಗಾವಣೆಗೆ ತಡೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಟಿಪ್ಪಣಿ ಆಧರಿಸಿ ಕೈಗೊಳ್ಳಲಾಗಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಹೆಬ್ಬಾಳ ವಿಭಾಗದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕಿಯಾಗಿರುವ ಅನೀಸ್ ಫಾತಿಮಾ ಸೇರಿದಂತೆ ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ-ಕಿರಿಯ ಆರೋಗ್ಯ ಪರಿವೀಕ್ಷಕರು, ಎಸ್‌ಡಿಎ, ಎಫ್‌ಡಿಎ, ಸಹಾಯಕ ಎಂಜಿನಿಯರ್ ಹುದ್ದೆಯ 17 ಅಧಿಕಾರಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್. ಎಸ್. ಸಂಜಯ್ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವಿ. ಶ್ರೀನಿವಾಸ್ ವಾದ ಆಲಿಸಿದ ನ್ಯಾಯಪೀಠ, 'ಬೆಂಗಳೂರು ನಗರ ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಶಿವಕುಮಾರ್ 2023ರ ಆಗಸ್ಟ್ 10ರಂದು ಬರೆದಿರುವ ಟಿಪ್ಪಣಿ ಆಧರಿಸಿ ಯಾವುದೇ ವರ್ಗಾವಣೆ ಅಥವಾ ನಿಯೋಜನೆ ಕೈಗೊಳ್ಳುವಂತಿಲ್ಲ' ಎಂದು ಎಲ್ಲ ಪ್ರತಿವಾದಿಗಳಿಗೆ ನಿರ್ದೇಶಿಸಿತು ಮತ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಕೋರಿಕೆ ಏನು?: 'ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆಗೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಟಿಪ್ಪಣಿ ಹೊರಡಿಸಿರುವುದು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರ ಆಡಳಿತಾತ್ಮಕ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಿದಂತಾಗಿದೆ. ಇದೊಂದು ರಾಜಕೀಯ ಒತ್ತಡದ ಕ್ರಮವಾಗಿದೆ. ವೃಂದ ಮತ್ತು ನೇಮಕಾತಿಗೆ ವಿರುದ್ಧವಾಗಿದೆ. ಇನ್ನೊಂದು ಅರ್ಜಿಯಲ್ಲಿ ನ್ಯಾಯಾಲಯ ಉಪಮುಖ್ಯಮಂತ್ರಿಯವರು ಆಗಸ್ಟ್ 10ರಂದು ನೀಡಿರುವ ಟಿಪ್ಪಣಿಗೆ ಈಗಾಗಲೇ ತಡೆ ನೀಡಿದೆ. ಹೀಗಿದ್ದರೂ, ಒಂದೇ ದಿನಾಂಕದಂದು ಎರಡು ಟಿಪ್ಪಣಿಗಳನ್ನು ಹೊರಡಿಸಲಾಗಿದೆ. ಆದ್ದರಿಂದ, ಅಧಿಕಾರಿಗಳ ವರ್ಗಾವಣೆ ಮತ್ತು ನಿಯೋಜನೆಗೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಆಗಸ್ಟ್ 10ರಂದು ಹೊರಡಿಸಿರುವ ಟಿಪ್ಪಣಿ ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ರುದ್ರಗೌಡ ಆಕ್ಷೇಪ ತಳ್ಳಿ ಹಾಕಿದ ಪ್ರಾಸಿಕ್ಯೂಷನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಒಂದೇ ಆರೋಪದಡಿ ವಿವಿಧೆಡೆ ಪ್ರಕರಣ ದಾಖಲಿಸಲಾಗಿದೆ' ಎಂದು ಪ್ರಮುಖ ಆರೋಪಿ ರುದ್ರಗೌಡ ಡಿ.ಪಾಟೀಲ ಆಕ್ಷೇಪಿಸಿರುವುದನ್ನು ರಾಜ್ಯ ಪ್ರಾಸಿಕ್ಯೂಷನ್ ತಳ್ಳಿಹಾಕಿದೆ. ಈ ಸಂಬಂಧ ರುದ್ರಗೌಡ ಪಾಟೀಲ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ಕಲಬುರಗಿ ಪೀಠದಲ್ಲಿನ ನ್ಯಾಯಮೂರ್ತಿ ವೆಂಕಟೇಶ್ ಟಿ.ನಾಯಕ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಈ ವೇಳೆ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ-1) ಬಿ.ಎ. ಬೆಳ್ಳಿಯಪ್ಪ ವಾದ ಮಂಡಿಸಿ, 'ಪರೀಕ್ಷೆಗಳು ಎಲ್ಲಾ ಕಡೆ ಒಂದೇ ದಿನ ನಡೆದಿವೆ. ಹೀಗಾಗಿ, ತನಿಖೆ ವೇಳೆ ಎಲ್ಲೆಲ್ಲಿ ಅಕ್ರಮ ನಡೆದಿದೆ ಎಂಬುದು ದೃಢಪಟ್ಟಿದೆಯೋ ಅಲ್ಲೆಲ್ಲಾ ಎಫ್‌ಐಆರ್ ದಾಖಲಾಗಿದೆ. ರುದ್ರಗೌಡ 3ನೇ ಸಂಖ್ಯೆಯ ಆರೋಪಿಯಾದರೂ ಇಡೀ ಹಗರಣದ ಪ್ರಮುಖ ಸೂತ್ರಧಾರ ಎನಿಸಿದ್ದಾರೆ. ಆದ ಕಾರಣಕ್ಕಾಗಿಯೇ ವಿವಿಧೆಡೆ ಪ್ರಕರಣ ದಾಖಲಿಸಲಾಗಿದೆ' ಎಂದು ಪ್ರಾಸಿಕ್ಯೂಷನ್ ನಡೆಯನ್ನು ಬಲವಾಗಿ ಸಮರ್ಥಿಸಿದರು.

'ಎಫ್‌ಐಆರ್ ದಾಖಲಿಸುವ ಮುನ್ನವೇ ತನಿಖೆ ನಡೆಸಲಾಗಿದೆ' ಎಂಬ ಅರ್ಜಿದಾರರ ಮತ್ತೊಂದು ಆಕ್ಷೇಪಣೆಯನ್ನೂ ತಳ್ಳಿ ಹಾಕಿದ ಬೆಳ್ಳಿಯಪ್ಪ, 'ಆ ರೀತಿ ಯಾವುದೇ ತನಿಖೆ ನಡೆಸಲಾಗಿಲ್ಲ. ಪ್ರಕರಣ ದಾಖಲಿಸಿಕೊಂಡ ಬಳಿಕವೇ ತನಿಖೆ ಕೈಗೆತ್ತಿಕೊಳ್ಳಲಾಗಿದೆ. ಅಂತೆಯೇ, ಒಟ್ಟು ಹನ್ನೊಂದು ಕೇಸುಗಳಲ್ಲಿ ಏಳು ಪ್ರಕರಣಗಳನ್ನು ಮ್ಯಾಜಿಸ್ಟ್ರೇಟ್ ವಿಚಾರಣಾ ಪರಿಧಿಯಿಂದ ವಿಶೇಷ ಕೋರ್ಟ್‌ಗೆ ವರ್ಗಾಯಿಸಿ ವಿಶೇಷ ಕೋರ್ಟ್‌ನಲ್ಲಿಯೂ ಇರುವ ಪ್ರಕರಣಗಳ ಜೊತೆಗೆ ಜಂಟಿಯಾಗಿ ವಿಚಾರಣೆ ಮುಂದುವರಿಸುವುದರಲ್ಲಿ ಅಭ್ಯಂತರವಿಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದರು. ವಿಚಾರಣೆಯನ್ನು ಸೆಪ್ಟೆಂಬರ್ 12ಕ್ಕೆ ಮುಂದೂಡಲಾಗಿದೆ.



ಹಿರಿಯರಿಗೆ ಗೌರವ

77ನೇ ಸ್ವಾತಂತ್ರ್ಯೋತ್ಸವ ಮತ್ತು ಚಂದ್ರಯಾನ - 3ರ ಯಶಸ್ಸು ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆಗಸ್ಟ್ ತಿಂಗಳಲ್ಲಿ ಜನಿಸಿದ ಹಿರಿಯ ನಾಗರಿಕರ ಜನ್ಮದಿನವನ್ನು 'ಹಿರಿಯರ ಚಾವಡಿ' ವತಿಯಿಂದ ಆಚರಿಸಲಾಯಿತು

'ಕಾವೇರಿ ಪ್ರಾಧಿಕಾರದ ಆದೇಶ ಜಾರಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಸೆ. 12ರವರೆಗೆ ನಿತ್ಯ 5,000 ಕ್ಯುಸೆಕ್ ನೀರು ಹರಿಸಬೇಕು ಎಂಬ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ರಾಜ್ಯ ಸರ್ಕಾರ ಒಪ್ಪಬಾರದು ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಆಗ್ರಹಿಸಿದ್ದಾರೆ.

'ಈ ಆದೇಶ ಅನ್ಯಾಯ ಮಾತ್ರವಲ್ಲ ಅವಾಸ್ತವವಾಗಿದೆ. ರಾಜ್ಯದಲ್ಲಿ ತೀವ್ರ ಬರದ ಸ್ಥಿತಿ ನಿರ್ಮಾಣವಾಗಿದೆ. ರೈತರು ಮಳೆ ಇಲ್ಲದೆ ಕಂಗಾಲಾಗಿದ್ದಾರೆ. ಇಂಥ ಸ್ಥಿತಿಯಲ್ಲಿ ದಿನಕ್ಕೆ 5,000 ಕ್ಯುಸೆಕ್ ನೀರು ಎಲ್ಲಿಂದ ತರಲು ಸಾಧ್ಯ? ಇಂಥ ಅನ್ಯಾಯದ ಆದೇಶಗಳನ್ನು ಪ್ರಾಧಿಕಾರ ನೀಡಲು ಏನು ಕಾರಣ' ಎಂದು ಪ್ರಶ್ನಿಸಿದ್ದಾರೆ.

ಬೆಂಗಳೂರು ನಗರದ ಮುಕ್ಕಾಲು ಭಾಗಕ್ಕೆ ಕುಡಿಯುವ ನೀರು ಕಾವೇರಿ ನದಿಯಿಂದಲೇ ಬರಬೇಕು. ಹೀಗಿರುವಾಗ ಪ್ರಾಧಿಕಾರ ಹೇಳಿದಷ್ಟು ನೀರು ಬಿಟ್ಟರೆ ಬೆಂಗಳೂರಿನ ಜನಜೀವನವೇ ಅಸ್ತವ್ಯಸ್ಥವಾಗಲಿದೆ. ಒಂದು ವೇಳೆ ಪ್ರಾಧಿಕಾರದ ಆದೇಶದಂತೆ ರಾಜ್ಯ ಸರ್ಕಾರ ನೀರು ಬಿಟ್ಟರೆ ಕರ್ನಾಟಕ ರಕ್ಷಣಾ ವೇದಿಕೆಯಿಂದ ರಾಜ್ಯದಾದ್ಯಂತ ಹೋರಾಟ ಸಂಘಟಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ನಿಧನ ವಾರ್ತೆ



ಕೆ.ಎನ್. ಬಸವರಾಜು

ಬೆಂಗಳೂರು: ರಾಜ್ಯ ಅಬಕಾರಿ ಇಲಾಖೆಯ ವಿಧಿ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದ ಕೆ.ಎನ್. ಬಸವರಾಜು (74) ಅವರು ಬೆಂಗಳೂರಿನ ಸ್ವಗೃಹದಲ್ಲಿ ಬುಧವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ತುಮಕೂರು ಜಿಲ್ಲೆಯ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

18ನೇ ಶ್ರೀಮದ್ಭಾಗವತ ಸಪ್ತಾಹ: ಮೂಲಪಾರಾಯಣ, ಆಯೋಜನೆ ಹಾಗೂ ಸ್ಥಳ: ರಾಧಾಕೃಷ್ಣ ದೇವಸ್ಥಾನ ಭಕ್ತ ಮಂಡಳಿ ಟ್ರಸ್ಟ್, ಸಂಜಯನಗರ, ಬೆಳಿಗ್ಗೆ 6.30ರಿಂದ

ವಚನ ಶ್ರಾವಣ: ವಚನ ವಾಚನ: ಶಾಲಾ ವಿದ್ಯಾರ್ಥಿಗಳಿಂದ ವಚನ ಗಾಯನ: ನಾಗರತ್ನಾ ಶಿವಣ್ಣ, ವಚನ ಚಿಂತನ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಬಿ.ಎನ್, ಈಶ್ವರಯ್ಯ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಥಕ್ಕರ್ ಬಾಪಾ ಪ್ರೌಢಶಾಲೆ, ಬಾಪಾ ಗ್ರಾಮ, ಮಾಚೋಹಳ್ಳಿ, ಬೆಳಿಗ್ಗೆ 9.30

'ಫ್ರೋಜನ್ ಮೆಮೋರಿಸ್' ಛಾಯಾಚಿತ್ರ ಪ್ರದರ್ಶನ: ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಗೌರವ ಅತಿಥಿಗಳು: ಕೃಷ್ಣ ಬೈರೇಗೌಡ, ಎಸ್.ಪಿ. ದಯಾನಂದ್, ಆಯೋಜನೆ: ಫೋಟೊ ಜರ್ನಲಿಸ್ಟ್ಸ್ ಅಸೋಸಿಯೇಷನ್ ಆಫ್ ಬೆಂಗಳೂರು, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಭಾರತೀಯ ಸೈಬರ್ ಸುರಕ್ಷತಾ ಶೃಂಗ: ಉದ್ಘಾಟನೆ: ಜಿ. ಪರಮೇಶ್ವರ, ಮುಖ್ಯ ಅತಿಥಿಗಳು: ಪಿ. ರವೀಂದ್ರನಾಥ್, ಬಿ. ದಯಾನಂದ್, ಗೌರವ ಅತಿಥಿಗಳು: ಅಮರ್ ಕುಮಾರ್ ಪಾಂಡೆ, ಎಂ.ಎನ್. ಅನುಚೇತ್, ಎಂ.ಜಿ. ಬಾಲಕೃಷ್ಣ, ಹರಿ ಬಾಲಚಂದ್ರನ್, ಅಧ್ಯಕ್ಷತೆ: ಜೋಸೆಫ್ ಸಿ.ಸಿ., ಆಯೋಜನೆ ಹಾಗೂ ಸ್ಥಳ: ಕ್ರೈಸ್ಟ್ ವಿಶ್ವವಿದ್ಯಾಲಯ, ಕೆಂಗೇರಿ, ಬೆಳಿಗ್ಗೆ 9.30

ಬೆಂಗಳೂರು ರಾಯಭಾರಿ ಮಿತ್ರ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಉದ್ಘಾಟನೆ: ಮಹೇಶ ಜೋಶಿ, ಗೌರವಾಧ್ಯಕ್ಷತೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆಯೋಜನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣಾ ಪರಿಷತ್, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ರಾಷ್ಟ್ರೀಯ ವಿಜ್ಞಾನ ಮೇಳ: ಉದ್ಘಾಟನೆ: ಪ್ರೊ.ಎಸ್. ಅಯ್ಯಪ್ಪನ್, ಮುಖ್ಯ ಅತಿಥಿಗಳು: ಎಂ.ಎನ್. ಶ್ರೀನಿವಾಸ್, ಎಚ್.ಆರ್. ಮಹದೇವಸ್ವಾಮಿ, ಅಧ್ಯಕ್ಷತೆ: ಭೀಮಸೇನ್ ಸೊರಗಾಂವ್, ಆಯೋಜನೆ ಹಾಗೂ ಸ್ಥಳ: ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್, ವಿಷ್ಣುವರ್ಧನ್ ರಸ್ತೆ, ಬೆಳಿಗ್ಗೆ 11

ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಮಹೋತ್ಸವ: ಸಾನ್ನಿಧ್ಯ: ಮುಮ್ಮಡಿ ನಿರ್ವಾಣ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಮುಖ್ಯ ಅತಿಥಿಗಳು: ಗಂಗಾಧರ ಸ್ವಾಮಿ, ಪ್ರಮೀಳ ಗರಡಿ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಜೆಎಸ್‌ಎಸ್ ಮಹಾವಿದ್ಯಾಪೀಠ, ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು, ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಗಳು, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜಯನಗರ, ಬೆಳಿಗ್ಗೆ 11

ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗಗಳ ಏಕತೆಗಾಗಿ ರಾಜ್ಯಮಟ್ಟದ ಬೃಹತ್ ಸಮಾವೇಶ: ಉದ್ಘಾಟನೆ: ಸಿದ್ದರಾಮಯ್ಯ, 'ಮಹಾನಾಯಕ ಡಿ.ಜಿ. ಸಾಗರ್' ಪುಸ್ತಕ ಬಿಡುಗಡೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಡಿ.ಜಿ. ಸಾಗರ್, ಆಯೋಜನೆ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಸ್ಥಳ: ಟೌನ್ ಹಾಲ್ (ಪುರಭವನ), ಜೆ.ಸಿ. ರಸ್ತೆ, ಮಧ್ಯಾಹ್ನ 12

ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತ್ಯೋತ್ಸವ ಪ್ರಯುಕ್ತ ನಾರಾಯಣ ಗುರುಗಳ ಪುತ್ಥಳಿಯೊಂದಿಗೆ ಮೆರವಣಿಗೆ: ಆಯೋಜನೆ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಸ್ಥಳ: ಕಂಠೀರವ ಕ್ರೀಡಾಂಗಣದಿಂದ ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 1

ಶ್ರೀನಿವಾಸ್ ವಿ. ಅವರ 'ಕ್ವಾಂಟಮ್ ಆಫ್ ಕಾಂಪನ್ಸೇಷನ್' ಪುಸ್ತಕ ಬಿಡುಗಡೆ: ಟಿ.ಜಿ. ಶಿವಶಂಕರ್ ಗೌಡ, ಅಧ್ಯಕ್ಷತೆ: ವಿವೇಕ್ ಸುಬ್ಬಾ ರೆಡ್ಡಿ, ಆಯೋಜನೆ: ದಿ ಅಡ್ವೊಕೇಟ್ಸ್ ಅಸೋಸಿಯೇಷನ್, ಲಾಯರ್ಸ್ ಲಾ ಬುಕ್, ಸ್ಥಳ: ಹಾಲ್ 1, ಹೈಕೋರ್ಟ್, ಮಧ್ಯಾಹ್ನ 1.30

ಬ್ರಹ್ಮಶ್ರೀ ನಾರಾಯಣ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ವಿಖ್ಯಾತಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

100ನೇ ಸಿಎನ್‌ಜಿ ಸ್ಟೇಷನ್ ಉದ್ಘಾಟನೆ: ಸಂದೀಪ್ ಕುಮಾರ್ ಗುಪ್ತ, ಆಯೋಜನೆ: ಗೇಲ್ ಗ್ಯಾಸ್ ಲಿಮಿಟೆಟ್, ಸ್ಥಳ: ಶ್ರೀ ಲಕ್ಷ್ಮೀ ವೆಂಕಟೇಶ್ವರ ಫ್ಯೂಯಲ್ ಬಂಕ್, ಮಾಕಳಿ, ತುಮಕೂರು ರಸ್ತೆ, ಸಂಜೆ 4.30

ದತ್ತಿ ಪ್ರಶಸ್ತಿಗಳ ಪ್ರದಾನ ಸಮಾರಂಭ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಪಿ.ವಿ. ನಾರಾಯಣ, ಮುಖ್ಯ ಅತಿಥಿ: ವನಮಾಲಾ ವಿಶ್ವನಾಥ, ಉಪಸ್ಥಿತಿ: ಬಿ. ಸರೋಜಾದೇವಿ, ವ.ಚ. ಚನ್ನೇಗೌಡ, ಪ್ರಶಸ್ತಿ ಪುರಸ್ಕೃತರು: ಜಿ.ಕೆ. ಸತ್ಯ, ಪ್ರಭು ಚನ್ನಬಸಪ್ಪ ಸ್ವಾಮೀಜಿ, ಶಿವಾನಂದ ಕಳವೆ, ಹೆಲನ್, ಎ. ಪುಷ್ಪ ಅಯ್ಯಂಗಾರ್, ಜಯಲಕ್ಷ್ಮಿ ಪಾಟೀಲ, ಗುಣಸಾಗರಿ ನಾಗರಾಜ್, ಡಿ.ಎನ್. ಗೀತಾ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಪಿ.ವಿ. ನಾರಾಯಣ

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ಪ್ರೊ. ಲಿಂಗರಾಜ್ ಗಾಂಧಿ, ಪ್ರೊ.ಎನ್.ಆರ್. ಶೆಟ್ಟಿ, ರೋಹಿತ್ ಪೂಂಜಾ, ಆಯೋಜನೆ ಹಾಗೂ ಸ್ಥಳ: ನಿಟ್ಟೆ ಸ್ಕೂಲ್ ಆಫ್ ಫ್ಯಾಷನ್ ಟೆಕ್ನಾಲಜಿ ಆ್ಯಂಡ್ ಇಂಟೀರಿಯರ್ ಡಿಸೈನ್, ಯಲಹಂಕ, ಸಂಜೆ 5

'ಏಕರೂಪ ನಾಗರಿಕ ಸಂಹಿತೆ' ಬಗ್ಗೆ ಉಪನ್ಯಾಸ: ಜೆ. ಸಾಯಿ ದೀಪಕ್, ಅಧ್ಯಕ್ಷತೆ: ಎಚ್.ಎಲ್. ವಿಶಾಲ್ ರಘು, ಉಪಸ್ಥಿತಿ: ವಿನಯ್ ಬಿ. ಮಂಗಳೇಕರ್, ಎಸ್. ಬಸವರಾಜ್, ಆಯೋಜನೆ: ಲಾ ಅಕಾಡೆಮಿ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಸಂಜೆ 5.30

ರಾಘವೇಂದ್ರ ಸ್ವಾಮಿಗಳ ಆರಾಧನೆ ಮಹೋತ್ಸವ: ಆಯೋಜನೆ ಹಾಗೂ ಸ್ಥಳ: ವ್ಯಾಸರಾಜ ಮಠ, ಸುಬ್ರಹ್ಮಣ್ಯ ನಗರ, ಸಂಜೆ 6

ಗುರುರಾಘವೇಂದ್ರ ಗುರುಸಾರ್ವಭೌಮರ 352ನೇ ವರ್ಷದ ಆರಾಧನಾ ಮಹೋತ್ಸವ ಪ್ರಯುಕ್ತ ಹರಿನಾಮ ಘೋಷ: ಗಾಯನ: ರಮ್ಯಾ ಸುಧೀರ್, ವಾದ್ಯ ಸಹಕಾರ: ಲೋಕೇಶ್, ಕೇದಾರನಾಥ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಚಾಮರಾಜಪೇಟೆ, ಸಂಜೆ 6

ಎಂ.ಜೆ. ಶ್ರೀನಿವಾಸ್ ಅಯ್ಯಂಗಾರ್ ಶತಮಾನೋತ್ಸವ ಸಮಾರಂಭದ ಪ್ರಯುಕ್ತ ಸಂಗೀತ ಕಛೇರಿ: ನಿರ್ಮಲಾ ರಾಜಶೇಖರ್, ಬಿ.ಕೆ. ರಘು, ಚೆಲುವರಾಜು ಸಿ., ಸುಕನ್ಯಾ ರಾಂಗೋಪಾಲ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 6

'ವೈಜ್ಞಾನಿಕತೆ ಎಲ್ಲರಿಗಲ್ಲವೇ?' ಸಂವಾದ: ಭಾಷಣಕಾರರು: ಪ್ರಜ್ವಲ್ ಶಾಸ್ತ್ರಿ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30



ಪ್ರಜ್ವಲ್ ಶಾಸ್ತ್ರಿ

ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ: ಸಾಮೂಹಿಕ ವೇದ ಪಾರಾಯಣ, ಬೆಳಿಗ್ಗೆ 8.30, ಪ್ರವಚನ: ಕಲ್ಲಾಪುರ ಪವಮಾನಾಚಾರ್, ಬೆಳಿಗ್ಗೆ 10, ಗಾಯನ: ಲಲಿತಾ ಆರ್., ಪಿಟೀಲು: ಸಾವಿತ್ರಿ ಶ್ರೀನಿವಾಸಮೂರ್ತಿ, ಮೃದಂಗ, ಶ್ರೀನಿವಾಸಮೂರ್ತಿ, ಖಂಜಿರ: ಅಶುತೋಶ್ ಪಿ., ಬೆಳಿಗ್ಗೆ 11, ಭರತನಾಟ್ಯ: ವೀಣಾ ಶ್ರೀಧರ್ ಮೊರಬ್ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಸಂಜಯನಗರ, ಸಂಜೆ 6.30

ರಾಘವೇಂದ್ರ ಸ್ವಾಮಿಗಳ ಆರಾಧನೆ ಮಹೋತ್ಸವ ಪ್ರಯುಕ್ತ ಗಾಯನ: ಪ್ರವೀಣ್ ಬಿ.ವಿ., ಪ್ರದೀಪ್ ಬಿ.ವಿ., ಆಯೋಜನೆ ಹಾಗೂ ಸ್ಥಳ: ಗುರುರಾಘವೇಂದ್ರ ಸೇವಾ ಟ್ರಸ್ಟ್, ಕೋಣನಕುಂಟೆ, ಸಂಜೆ 6.30

ರಾಘವೇಂದ್ರ ಸ್ವಾಮಿಗಳ ಆರಾಧನೆ ಮಹೋತ್ಸವ: ಗಾನಸುಧಾ: ಗುರುಪ್ರಸಾದ್ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಶಾಕಾಂಬರಿನಗರ, ಸಂಜೆ 6.30

'ಕೆನಡದಲ್ಲಿ ಕನ್ನಡಿಗರ ವಿಶಿಷ್ಟ ಸೇವೆ' ಕುರಿತು ಉಪನ್ಯಾಸ: ಚುಟುಕುಸಿರಿ ರತ್ನಹಾಲಪ್ಪಗೌಡ, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ್ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30


ರಾಘವೇಂದ್ರ ಸ್ವಾಮಿಗಳ ಆರಾಧನೆ ಪ್ರಯುಕ್ತ ವೀಣಾ ವಾದನ: ಅನುರಾಧ ಮಧುಸೂದನ್ ಮತ್ತು ಸಂಗಡಿಗರು, ಆಯೋಜನೆ: ಗುರು ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 10ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಸಂಜೆ 7

ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಪಂಚರಾತ್ರೋತ್ಸವ: ಸಂಗೀತ ಕಾರ್ಯಕ್ರಮ: ಡಿ.ಆರ್. ಚಂದ್ರಿಕಾ ಪ್ರಹ್ಲಾದ್ ಮತ್ತು ಶಿಷ್ಯ ವೃಂದ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರಸ್ವಾಮಿಗಳ ಮಠ, ಶೇಷಾದ್ರಿಪುರ

ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 352ನೇ ಆರಾಧನಾ ಸಪ್ತರಾತ್ರೋತ್ಸವ: ದಾಸವಾಣಿ: ಸಂಗೀತಾ ಕಟ್ಟಿ ಮತ್ತು ವೃಂದ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7

ರಾಘವೇಂದ್ರ ಗುರುಸಾರ್ವಭೌಮರ 352ನೇ ಪೂರ್ವಾರಾಧನೆ ಪ್ರಯುಕ್ತ ದಾಸರ ಪದಗಳ ರಸಧಾರೆ: ಭವಾನಿ, ಸುಮಲತಾ ಮಂಜುನಾಥ್, ವಾದ್ಯ ಸಹಕಾರ: ರಮೇಶ್, ಮೋಹನ್, ಆಯೋಜನೆ: ಬನಶಂಕರಿ ಸರ್ವಜ್ಞ ಸೇವಾ ಬಳಗ, ಸ್ಥಳ: ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಿ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಸಂಜೆ 7

ನುಲಿಯ ಚಂದಯ್ಯ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಸಂಜೆ 5.30



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ತರಕಾರಿ, ಹಣ್ಣಿನ ಬೀಜಗಳಿಂದ ತಯಾರಿ • ಆನ್‌ಲೈನ್ ಮಾರುಕಟ್ಟೆಯಲ್ಲಿ ಉತ್ತಮ ಸ್ಪಂದನೆ

ಪರಿಸರ ಸ್ನೇಹಿ ರಾಖಿಗೆ ಹೆಚ್ಚಿದ ಬೇಡಿಕೆ

• ವರುಣ ಹೆಗಡೆ

ಬೆಂಗಳೂರು: ರಕ್ಷಾ ಬಂಧನ ಹಬ್ಬದ ಪ್ರಯುಕ್ತ ವೈವಿಧ್ಯಮಯ ವಿನ್ಯಾಸದ ಪ್ಲಾಸ್ಟಿಕ್ ರಾಖಿಗಳು ಮಾರುಕಟ್ಟೆಗೆ ಬಂದಿದ್ದರೂ ಈ ಬಾರಿ 'ಪರಿಸರ ಸ್ನೇಹಿ ರಾಖಿ'ಗಳು ಬೇಡಿಕೆ ಹೆಚ್ಚಿಸಿಕೊಂಡಿದ್ದು, ಆನ್‌ಲೈನ್ ಮಾರುಕಟ್ಟೆಯಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಸಹೋದರ ಮತ್ತು ಸಹೋದರಿಯ ಪ್ರೀತಿಯ ಹಾಗೂ ರಕ್ಷಣೆಯ ಪ್ರತೀಕವಾಗಿ ರಕ್ಷಾ ಬಂಧನವನ್ನು ಆಚರಿಸಲಾಗುತ್ತಿದೆ. ಪರಿಸರ ಸ್ನೇಹಿ ಹಬ್ಬಗಳ ಆಚರಣೆಗೆ ಸಂಬಂಧಿಸಿದಂತೆ ವಿವಿಧ ಸರ್ಕಾರೇತರ ಸಂಘ–ಸಂಸ್ಥೆಗಳು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಗರದಲ್ಲಿ ಜಾಗೃತಿ ಮೂಡಿಸುತ್ತಿದೆ. ಇದರಿಂದಾಗಿ ನಗರದ ಜನರು ಪರಿಸರಸ್ನೇಹಿ ವಸ್ತುಗಳ ಬಳಕೆಗೆ ಇತ್ತೀಚೆಗೆ ಒಲವು ತೋರುತ್ತಿದ್ದಾರೆ. ಹೀಗಾಗಿ, ಕೆಲ ಸಂಸ್ಥೆಗಳು ಮಣ್ಣಿನಲ್ಲಿ ಕರಗುವ ರಾಖಿಗಳನ್ನು ತಯಾರಿಸಿ, ಮಾರುಕಟ್ಟೆಗೆ ಪರಿಚಯಿಸಿವೆ. ಇಲ್ಲಿನ ಸೀಡ್ ಪೇಪರ್ ಇಂಡಿಯಾ ಸಂಸ್ಥೆಯು ಈ ಬಾರಿ 50 ಸಾವಿರಕ್ಕೂ ಅಧಿಕ ಪರಿಸರ ಸ್ನೇಹಿ ರಾಖಿಗಳನ್ನು ಮಾರಾಟ ಮಾಡಿದೆ.

ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಪೇಪರ್, ಅಡಿಕೆ ಹಾಳೆಯಂತಹ ಕಚ್ಚಾ ವಸ್ತುಗಳಿಂದ ಮರು ಬಳಕೆ ಮಾಡಬಹುದಾದ ವಸ್ತುಗಳನ್ನು ಪರಿಚಯಿಸುತ್ತಿರುವ ಸಂಸ್ಥೆಗಳು ರಾಖಿಗಳನ್ನೂ ತಯಾರಿಸಿ, ಆನ್‌ಲೈನ್ ವೇದಿಕೆಗಳಲ್ಲಿ ಮಾರಾಟ ಮಾಡುತ್ತಿವೆ. ಹಣ್ಣು ಹಾಗೂ ತರಕಾರಿಯ ಬೀಜಗಳನ್ನೂ ರಾಖಿ ತಯಾರಿಸಲು ಬಳಸಿಕೊಳ್ಳಲಾಗುತ್ತಿದ್ದು, ಈ ಬೀಜಗಳನ್ನು ಪಾಟ್‌ಗಳಲ್ಲಿ ಹಾಕಿ ಪೋಷಿಸುವಂತೆ ಜಾಗೃತಿಯನ್ನೂ ಮೂಡಿಸುತ್ತಿವೆ. ಮೈಸೂರು, ಮಂಗಳೂರು ಸೇರಿ ವಿವಿಧ ನಗರಗಳಿಂದಲೂ ಪರಿಸರ ಸ್ನೇಹಿ ರಾಖಿಗಳು ಇಲ್ಲಿಗೆ ಪೂರೈಕೆಯಾಗುತ್ತಿದ್ದು, ಇದಕ್ಕೆ ಆನ್‌ಲೈನ್ ವೇದಿಕೆ ಮಾರುಕಟ್ಟೆ ಒದಗಿಸಿದೆ.



ಸೀಡ್ ಪೇಪರ್ ಇಂಡಿಯಾ ಸಂಸ್ಥೆ ತಯಾರಿಸಿದ ಪರಿಸರ ಸ್ನೇಹಿ ರಾಖಿ

ಮಣ್ಣಿನಲ್ಲಿ ಮೊಳಕೆ: ಗುಲಾಬಿ ಸೇರಿ ವಿವಿಧ ಹೂವುಗಳ ಒಣಗಿದ ದಳಗಳು, ದಪ್ಪನೆಯ ಪೇಪರ್‌ಗಳಿಂದ ರಾಖಿಗಳನ್ನು ಸಿದ್ಧಪಡಿಸಲಾಗಿದ್ದು, ಮಧ್ಯದಲ್ಲಿ ತುಳಸಿ, ಸೂರ್ಯಕಾಂತಿ, ಟೊಮೆಟೊ ಸೇರಿ ವಿವಿಧ ಹೂವು–ಹಣ್ಣಿನ ಬೀಜಗಳನ್ನು ಹಾಕಲಾಗುತ್ತಿದೆ. ಇದರಿಂದಾಗಿ ರಾಖಿಯನ್ನು ಬಿಚ್ಚಿದ ನಂತರ ಬಿಸಾಡುವ ಬದಲು, ಅದನ್ನು ಹೂವಿನ ಕುಂಡಗಳಲ್ಲಿ ಹಾಕುವಂತೆ ತಯಾರಕರು ಜಾಗೃತಿಯನ್ನೂ ಮೂಡಿಸುತ್ತಿದ್ದಾರೆ. ರಾಖಿಗಳ ವಿನ್ಯಾಸದ ಅನುಸಾರ ₹ 20 ರಿಂದ ₹ 250 ರವರೆಗೆ ಮಾರಾಟ ಮಾಡಲಾಗುತ್ತಿದೆ.

'ವರ್ಷದಿಂದ ವರ್ಷಕ್ಕೆ ಪರಿಸರ ಸ್ನೇಹಿ ರಾಖಿಗಳಿಗೆ ಬೇಡಿಕೆ ಹೆಚ್ಚುತ್ತಿದೆ. ತರಕಾರಿ ಬೀಜಗಳಿಂದ ರಾಖಿಗಳನ್ನು ಸಿದ್ಧಪಡಿಸಿ, ವಿತರಿಸಲಾಗಿದೆ. ರಾಜ್ಯದ ಹಲವೆಡೆ ಬೇಡಿಕೆ ಅನುಸಾರ ಪಾರ್ಸಲ್ ಕೂಡ ಮಾಡಲಾಗಿದೆ. ಹೆಚ್ಚಿನ ಬೇಡಿಕೆಗಳು ಬೆಂಗಳೂರಿನಿಂದ ಬರುತ್ತಿದೆ' ಎಂದು ಮಂಗಳೂರಿನ ಪೇಪರ್ ಸೀಡ್ ವಿಲೇಜ್ ಸಂಸ್ಥೆಯ ಮಾರುಕಟ್ಟೆ ವಿಭಾಗದ ಪ್ರತಿನಿಧಿಯೊಬ್ಬರು ತಿಳಿಸಿದರು.

ಕುಂಡ ಸಹಿತ ಗಿಫ್ಟ್ ಬಾಕ್ಸ್

ಸೀಡ್ ಪೇಪರ್ ಇಂಡಿಯಾ ಸಂಸ್ಥೆಯು ರಕ್ಷಾ ಬಂಧನದ ಪ್ರಯುಕ್ತ ಪರಿಸರ ಸ್ನೇಹಿ ರಾಖಿ ಒಳಗೊಂಡ ಗಿಫ್ಟ್ ಬಾಕ್ಸ್ ಪರಿಚಯಿಸಿದೆ. ಇದರಲ್ಲಿ ಕುಂಕುಮ, ಅಕ್ಕಿ, ಮಣ್ಣು, ಸಾವಯವ ಗೊಬ್ಬರ, ತೆಂಗಿನ ನಾರಿನಿಂದ ತಯಾರಿಸಿದ ಕುಂಡವೂ ಇರಲಿದೆ. ರಾಖಿಗೆ ಸಹ ನೈಸರ್ಗಿಕ ಬಣ್ಣವನ್ನೇ ಬಳಸಲಾಗಿದೆ. 10 ವಿನ್ಯಾಸಗಳಲ್ಲಿ ಆಕರ್ಷಕ ಪರಿಸರ ಸ್ನೇಹಿ ರಾಖಿಗಳನ್ನು ಸಿದ್ಧಪಡಿಸಿ, ವಿತರಿಸುತ್ತಿದೆ. ಈ ರಾಖಿಯನ್ನು ಕುಂಡದಲ್ಲಿ ಹಾಕಿ, ನಿಯಮಿತವಾಗಿ ನೀರು ಹಾಕಿ ಪೋಷಿಸಿದಲ್ಲಿ ಅದರಲ್ಲಿನ ಬೀಜ ಮೊಳಕೆಯೊಡೆಯಲಿದೆ. ಅವು ಗಿಡವಾದ ನಂತರ ಹೂವು, ಹಣ್ಣುಗಳನ್ನು ಪಡೆಯಬಹುದು.



'ಹೂವು, ಹಣ್ಣುಗಳು ಮತ್ತು ಅವುಗಳ ಬೀಜದಿಂದ ರಾಖಿಗಳನ್ನು ತಯಾರಿಸಲಾಗುತ್ತಿದೆ. ಇದಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಐಟಿ–ಬಿಟಿ ಉದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಾಖಿಗಳನ್ನು ಖರೀದಿಸಿದ್ದಾರೆ. ಸೈನಿಕರಿಗೂ ಪೂರೈಕೆ ಮಾಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಈ ಬಾರಿ ಮಾರಾಟ ದುಪ್ಪಟ್ಟಾಗಿದೆ. ಹೊಸ ಹೊಸ ಅನ್ವೇಷಣೆಯನ್ನೂ ಮಾಡುತ್ತಿದ್ದೇವೆ' ಎಂದು ಸೀಡ್ ಪೇಪರ್ ಇಂಡಿಯಾ ಸಂಸ್ಥೆ ಸಂಸ್ಥಾಪಕ ರೋಶನ್ ರೇ ತಿಳಿಸಿದರು.

> **ರಕ್ಷಾ ಬಂಧನ ಹಬ್ಬದ ಅರ್ಥಪೂರ್ಣ ಆಚರಣೆ ಹಾಗೂ ಪರಿಸರದ ಬಗ್ಗೆ ಅರಿವು ಮೂಡಿಸಲು ಪರಿಸರ ಸ್ನೇಹಿ ರಾಖಿ ಸಹಾಯಕ. ಆದ್ದರಿಂದ ಈ ಬಗ್ಗೆ ನಗರದಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ**
>
> **ರೋಶನ್ ರೇ,** ಸೀಡ್ ಪೇಪರ್ ಇಂಡಿಯಾ ಸಂಸ್ಥೆ ಸಂಸ್ಥಾಪಕ



ರಕ್ಷಾ ಬಂಧನ — ರಕ್ಷಾ ಬಂಧನದ ಅಂಗವಾಗಿ ಬೆಂಗಳೂರಿನಲ್ಲಿ ಬಾಲಕಿಯರು ಸಹೋದರರಿಗೆ ಬುಧವಾರ ರಾಖಿ ಕಟ್ಟಿ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಮೀನುಗಳ ಸಾವು: ಉಲ್ಲಾಳು ಕೆರೆಗೆ ಜೈವಿಕ ರಾಸಾಯನಿಕ ಸಿಂಪಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಗೆ ಬರುವ ಉಲ್ಲಾಳು ಕೆರೆಯಲ್ಲಿ ಸಾವಿರಾರು ಮೀನುಗಳು ಸತ್ತಿರುವ ಹಿನ್ನೆಲೆಯಲ್ಲಿ ಕೆರೆಯನ್ನು ಸ್ವಚ್ಛಗೊಳಿಸಲು ಜೈವಿಕ ರಾಸಾಯನಿಕ ಹಾಕುವ ಕಾರ್ಯ ಆರಂಭಗೊಂಡಿದೆ.

ಉದ್ಯಾನದ ಮಣ್ಣು, ಸೂಕ್ಷ್ಮ ಜೀವಾಣುಗಳು, ಕಾಕಂಬಿ, ಭತ್ತದ ತೌಡು ಮಿಶ್ರಣ ಮಾಡಿದ ಬೊಕಾಶಿ ಬಾಲ್ ಹಾಕಿ ಸ್ವಚ್ಛಗೊಳಿಸುವ ಪ್ರಕ್ರಿಯೆ ಕೂಡ ನಡೆಯುತ್ತಿದೆ ಎಂದು ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದ್ದಾರೆ.

ಬಿಬಿಎಂಪಿ ಕೆರೆ ವಿಭಾಗ, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಜಲಮಂಡಳಿಯ ಅಧಿಕಾರಿಗಳು ಬುಧವಾರ ಭೇಟಿ ನೀಡಿದ್ದರು. ಕೆರೆಯಲ್ಲಿ ನೀರು ಕಡಿಮೆಯಾಗಿ, ಇರುವ ನೀರು ಕಲುಷಿತಗೊಂಡು ಮೀನುಗಳು ಸತ್ತಿದ್ದವು. ಒಂದು ವಾರದಿಂದ ಮೀನು ಸಾಯುತ್ತಿದ್ದರೂ ಯಾರೂ ಭೇಟಿ ನೀಡಿ ಪರಿಶೀಲಿಸುವ, ಸತ್ತ ಮೀನು ತೆರವುಗೊಳಿಸುವ ಕಾರ್ಯ ಮಾಡಿರಲಿಲ್ಲ. ಇದರಿಂದ ದುರ್ವಾಸನೆ ಉಂಟಾಗಿತ್ತು.

ಸತ್ತ ಮೀನುಗಳನ್ನು ಜೆಸಿಬಿ ಬಳಸಿ ತೆರವುಗೊಳಿಸಲಾಯಿತು. ಕೆರೆಯ ಮಣ್ಣನ್ನು ಪರೀಕ್ಷೆಗೆ ಒಯ್ಯಲಾಯಿತು. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಉಪ ಪರಿಸರ ಅಧಿಕಾರಿ ನವೀನ್, ಎಇಇ ಮಹೇಶ್, ಜಲಮಂಡಳಿ ಎಇಇ ಸೈಯದ್ ಇದ್ದರು.

ಪ್ರಿಯಾಂಕ್ ಖರ್ಗೆಗೆ ₹ 5,000 ದಂಡ!

ಕಲಬುರಗಿ: ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಸ್ಥಳದಲ್ಲಿ ಅನಧಿಕೃತವಾಗಿ ಬ್ಯಾನರ್ ಹಾಕಿದ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ₹5,000 ದಂಡ ಹಾಕಲಾಗಿದೆ.

ಅನಧಿಕೃತವಾಗಿ ಬ್ಯಾನರ್ ಹಾಕುವವರ ವಿರುದ್ಧ ಕ್ರಮಕ್ಕೆ ಮುಂದಾಗುವಂತೆ ಕೆಲವು ದಿನಗಳ ಹಿಂದೆ ಅಧಿಕಾರಿಗಳಿಗೆ ಪ್ರಿಯಾಂಕ್ ಸೂಚಿಸಿದ್ದರು. ಬೆಂಬಲಿಗರು ಪಾಲಿಕೆಯ ಅನುಮತಿ ಪಡೆಯದೇ ಬ್ಯಾನರ್ ಹಾಕಿದ್ದರಿಂದ ಈಗ ಸಚಿವರು ದಂಡ ಪಾವತಿಸಬೇಕಾಗಿದೆ.

'ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಬೆಂಬಲಿಗರು ಪಾಲಿಕೆಯ ಅನುಮತಿ ಪಡೆಯದೆ ನಗರದ ಸಾರ್ವಜನಿಕ ಸ್ಥಳದಲ್ಲಿ ಬ್ಯಾನರ್ ಹಾಕಿದ್ದು ಕಂಡುಬಂದಿದೆ. ಹೀಗಾಗಿ, ಪಾಲಿಕೆಯಿಂದ ಸಚಿವರಿಗೆ ₹5,000 ದಂಡ ವಿಧಿಸಲಾಗಿದೆ' ಎಂದು ಪಾಲಿಕೆಯ ಅಧಿಕಾರಿ ಹೇಳಿದ್ದಾರೆ.

ಈ ವಿಷಯವನ್ನು ಮನಗಂಡ ಸಚಿವರು, ಪಾಲಿಕೆಯ ಕ್ರಮವನ್ನು ಬೆಂಬಲಿಸಿ ದಂಡದ ಮೊತ್ತವನ್ನು ಪಾವತಿಸಲು ಒಪ್ಪಿಕೊಂಡಿದ್ದಾರೆ ಎಂದಿದ್ದಾರೆ.

ಮೆಟ್ರೊ: 'ವಮಿಕ' ಕಾರ್ಯ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಮಾರ್ಗ ವಿಸ್ತರಣೆಗಾಗಿ ನಡೆಯುತ್ತಿರುವ ಸುರಂಗ ಮಾರ್ಗಗಳ ಕಾಮಗಾರಿ ವೇಗವಾಗಿ ನಡೆಯುತ್ತಿದ್ದು, ಲಕ್ಕಸಂದ್ರದಿಂದ ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದ ವರೆಗೆ ಸುರಂಗ ಕೊರೆಯುವ ಕಾರ್ಯವನ್ನು 'ವಮಿಕ' ಪೂರ್ಣಗೊಳಿಸಿದೆ.

ಲಕ್ಕಸಂದ್ರ ಮೆಟ್ರೊ ನಿಲ್ದಾಣದಿಂದ ಏ.21ರಂದು ಕಾಮಗಾರಿ ಆರಂಭವಾಗಿತ್ತು. 721 ಮೀಟರ್ ಉದ್ದ ಸುರಂಗ ಕೊರೆಯುವುದನ್ನು ನಾಲ್ಕು ತಿಂಗಳಲ್ಲಿ ಸುರಂಗ ಕೊರೆಯುವ ಯಂತ್ರ (ವಮಿಕ) ಪೂರ್ಣಗೊಳಿಸಿತು.

ಹಂತ–2ರ ಯೋಜನೆಯಡಿ ರೀಚ್–6 ಮಾರ್ಗ ಇದಾಗಿದ್ದು, 20.99 ಕಿಲೋಮೀಟರ್ ಸುರಂಗ ನಿರ್ಮಾಣವಾಗಬೇಕು. ಅದರಲ್ಲಿ ಈಗ 17.62 ಕಿ.ಮೀ. ಸುರಂಗ ನಿರ್ಮಾಣ ಪೂರ್ಣಗೊಂಡಿದ್ದು, 3.37 ಕಿ.ಮೀ. ಕಾಮಗಾರಿ ನಡೆಯುತ್ತಿದೆ.

ಕಾಳೇನ ಅಗ್ರಹಾರದಿಂದ ನಾಗವಾರದವರೆಗಿನ 9 ಸುರಂಗಗಳಿರುವ ಮಾರ್ಗದಲ್ಲಿ 'ವರದ', 'ಅವನಿ', 'ಊರ್ಜ್ವಾ', 'ವಿಂಧ್ಯಾ', 'ಲವಿ' ಸುರಂಗ ಕೊರೆಯುವ ಕಾರ್ಯವನ್ನು ಈಗಾಗಲೇ ಪೂರ್ಣಗೊಳಿಸಿವೆ. ಇದೀಗ 'ವಮಿಕ' ಕೂಡ ಕೆಲಸ ಮುಗಿಸಿದೆ. ವೆಂಕಟೇಶ ಪುರದಿಂದ ಕಾಡಗೊಂಡನ ಹಳ್ಳಿವರೆಗೆ ಹಾಗೂ ಸೌತ್ ರ್‍ಯಾಂಪ್ ನಿಲ್ದಾಣದಿಂದ ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣದವರೆಗಿನ ಸುರಂಗ ಕೊರೆಯುವ ಕಾಮಗಾರಿಗಳನ್ನು 'ತುಂಗಾ', 'ಭದ್ರಾ', 'ರುದ್ರ' ಯಂತ್ರಗಳು ನಡೆಸುತ್ತಿದ್ದು, ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



ಮೆಟ್ರೊ ರೈಲು ಮಾರ್ಗ ವಿಸ್ತರಣೆಗಾಗಿ ಲಕ್ಕಸಂದ್ರದಿಂದ ಲ್ಯಾಗ್‌ಫೋರ್ಡ್ ಟೌನ್ ನಿಲ್ದಾಣದವರೆಗಿನ ಕಾಮಗಾರಿಯನ್ನು ಬುಧವಾರ 'ವಮಿಕ' ಪೂರ್ಣಗೊಳಿಸಿದೆ

ಹೆಚ್ಚುವರಿ ಟ್ರಿಪ್

ಮೆಜೆಸ್ಟಿಕ್ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಮಹಾತ್ಮ ಗಾಂಧಿ ರಸ್ತೆ ಮೆಟ್ರೊ ನಿಲ್ದಾಣಗಳ ನಡುವೆ (ನೇರಳೆ ಮಾರ್ಗ) ಬೆಳಿಗ್ಗೆ ಜನದಟ್ಟಣೆಯನ್ನು ಕಡಿಮೆ ಮಾಡಲು ವಾರಕ್ಕೆ 5 ದಿನ ಹೆಚ್ಚುವರಿ ಟ್ರಿಪ್‌ಗಳನ್ನು ನಡೆಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಸೆ.1ರಿಂದ ಈ ಪ್ರಾಯೋಗಿಕ ಟ್ರಿಪ್ ಜಾರಿಯಾಗಲಿದೆ. ಸೋಮವಾರದಿಂದ ಶುಕ್ರವಾರದವರೆಗೆ ಮಾತ್ರ ಇರಲಿದ್ದು, ಶನಿವಾರ, ಭಾನುವಾರ ಇರುವುದಿಲ್ಲ. ಪ್ರಯಾಣಿಕರ ಸ್ಪಂದನೆಯನ್ನು ನೋಡಿಕೊಂಡು ಹೆಚ್ಚುವರಿ ಟ್ರಿಪ್‌ಗಳನ್ನು ಮುಂದುವರಿಸುವ ಇಲ್ಲವೇ ಸ್ಥಗಿತಗೊಳಿಸುವ ನಿರ್ಧಾರ ಮುಂದೆ ಕೈಗೊಳ್ಳಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ಸರ್ಕಾರದ ಸಾಧನೆ ವರ್ಗಾವಣೆ ಮಾತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ 100 ದಿನಗಳ ಸಾಧನೆ ಎಂದರೆ ವರ್ಗಾವಣೆ ಮಾತ್ರ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಎಲ್ಲ ಅಭಿವೃದ್ಧಿ ಕೆಲಸಗಳು ಸ್ಥಗಿತ ಆಗಿವೆ. ನಮ್ಮ ಅವಧಿಯ ಕಾಮಗಾರಿಗಳನ್ನೆಲ್ಲ ಸ್ಥಗಿತಗೊಳಿಸಲಾಗಿದೆ' ಎಂದು ಅವರು ದೂರಿದರು.

'ಅಧಿಕಾರ ಬರುವ ಪೂರ್ವದಲ್ಲಿ ಗ್ಯಾರಂಟಿಗಳೆಲ್ಲ ಉಚಿತ ಮತ್ತು ಖಚಿತ ಎಂದು ಕಾಂಗ್ರೆಸ್ ನಾಯಕರು ಹೇಳಿದ್ದರು. ಆದರೆ, ಈಗ ಹಲವು ಷರತ್ತುಗಳನ್ನು ಹಾಕಿದ್ದಾರೆ. ಅವರ ಯಾವುದೇ ಯೋಜನೆಗಳೂ ಪೂರ್ಣ ಪ್ರಮಾಣದಲ್ಲಿ ಜನರಿಗೆ ಸಿಗಲ್ಲ' ಎಂದರು.

'ವಿರೋಧ ಪಕ್ಷದ ನಾಯಕನ ಆಯ್ಕೆಗೂ, ಪಕ್ಷ ಬಿಡುಗಡೆ ಮಾಡಿರುವ ಸರ್ಕಾರದ ವಿರುದ್ಧದ ಚಾರ್ಜ್‌ಶೀಟ್‌ಗೂ ಸಂಬಂಧ ಇಲ್ಲ. ನೂರು ದಿನಗಳ ವೈಫಲ್ಯಗಳು ಯಾವವು ಎಂದು ಚಾರ್ಜ್‌ಶೀಟ್‌ನಲ್ಲಿದೆ. ಅದಕ್ಕೆ ಮೊದಲು ಉತ್ತರ ಕೊಡಲಿ. ನೆಪ ಹೇಳಿ ಜಾರಿಕೊಳ್ಳಬಾರದು' ಎಂದು ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದರು.

'ಪಕ್ಷ ಬಿಡುತ್ತೇವೆಂದು ಕೆಲವರು ಬೆದರಿಕೆ ಹಾಕುತ್ತಿರುವುದು ಸರಿಯಲ್ಲ. ಬಿಜೆಪಿಯ ಒಳಗೇ ಇದ್ದುಕೊಂಡು ಹೇಳಿಕೆ ಕೊಡುವುದು ಸಲ್ಲದು' ಎಂದ ಅವರು, ಕರ್ನಾಟಕದಲ್ಲಿ ಬಿಜೆಪಿ ಮುಗಿದು ಹೋಯಿತೇ? ಬಿಜೆಪಿ ಕಥೆ ಮುಗಿದು ಹೋಯಿತು ಎನ್ನುವ ಪ್ರಿಯಾಂಕ್ ಖರ್ಗೆ ಹೇಳಿಕೆ ಬಾಲಿಶ. ವಿಶ್ವದಲ್ಲಿಯೇ ಅತೀ ದೊಡ್ಡ ಪಕ್ಷ ಬಿಜೆಪಿ. ಮೋದಿಯಂಥವರು ಇದ್ದಾಗಲೂ ಹೀಗೆ ಹೇಳುವುದು ಕೆಳಮಟ್ಟದ ಹೇಳಿಕೆ ಎಂದರು.

ರೇಣುಕಾಚಾರ್ಯ ಪಕ್ಷ ಬಿಡುತ್ತಾರೆಂಬ ವದಂತಿಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅವರು ಪಕ್ಷ ಬಿಡುವುದಿಲ್ಲ. ಅವರಿಗೆ ಯಾಕೋ ಮನಸ್ಸಿಗೆ ಬೇಜಾರಾಗಿದೆ. ಹೈಕಮಾಂಡ್ ಎಲ್ಲವನ್ನು ಗಮನಿಸುತ್ತಿದೆ. ಒಳ್ಳೆಯ ದಿನ ಬರುತ್ತದೆ. ಗಡಿಬಿಡಿ ಯಾಕೆ' ಎಂದರು.

'ದಾವಣಗೆರೆ ಲೋಕಸಭೆಗೆ ಅಲ್ಲಿನ ಸಂಸದರು ಸ್ಪರ್ಧಿಸುವುದಿಲ್ಲ ಎನ್ನುತ್ತಿದ್ದಾರೆ. ರೇಣುಕಾಚಾರ್ಯ ಟಿಕೆಟ್ ಕೇಳಿದ್ದಾರೆ. ಅದರಲ್ಲಿ ತಪ್ಪೇನಿದೆ? ಇನ್ನು ಶಿವಕುಮಾರ ಉದಾಸಿ ಕೂಡಾ ನಿಲ್ಲುವುದಿಲ್ಲ ಎಂದಿದ್ದಾರೆ. ಸಹಜವಾಗಿ ಟಿಕೆಟ್ ಕೇಳಿದ್ದಾರೆ, ತಪ್ಪೇನು' ಎಂದರು.

'ರಾಜ್ಯ ಘಟಕದ ಅಧ್ಯಕ್ಷರು ಆದಷ್ಟು ಬೇಗ ತಮ್ಮ ಸ್ಥಾನದಿಂದ ಮುಕ್ತ ಆಗಬೇಕು ಎಂದು ಹೇಳುತ್ತಿದ್ದಾರೆ. ಆದರೆ, ಹೈಕಮಾಂಡ್ ಅವರನ್ನು ಬಿಡುತ್ತಿಲ್ಲ. ಹೀಗಾಗಿ, ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲು ಅವರಿಗೆ ಆಗುತ್ತಿಲ್ಲ. ಅವರು ಒಳ್ಳೆಯ ಮನುಷ್ಯ. ಸೋತಾಗ ನೂರು ಮಂದಿ ಕಲ್ಲು ಹಾಕುತ್ತಾರೆ. ಪಕ್ಷ ಗೆಲ್ಲುತ್ತಿದ್ದರೆ, ಅವರನ್ನೇ ಮುಂದುವರಿಸುತ್ತಿದ್ದರು' ಎಂದು ಯತ್ನಾಳ ಹೇಳಿದರು.

ಒಂದು ತಿಂಗಳಲ್ಲಿ 59 ಮಿ.ಮೀ. ಮಾತ್ರ ಮಳೆ • ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳ

ಆಗಸ್ಟ್‌ನಲ್ಲಿ ಶೇ 73ರಷ್ಟು ಮಳೆ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆಗಸ್ಟ್ ತಿಂಗಳಲ್ಲಿ ತಾಪಮಾನ ಹೆಚ್ಚಳವಾಗಿದ್ದು, ಮಳೆಯ ಪ್ರಮಾಣದಲ್ಲಿ ಭಾರಿ ಇಳಿಕೆ ಕಂಡಿದೆ. ಇದರಿಂದಾಗಿ ಶೇ 73 ರಷ್ಟು ಮಳೆ ಕೊರತೆಯಾಗಿದೆ.

ಈ ಬಾರಿ ವಾಡಿಕೆಗಿಂತಲೂ ಮಳೆ ಪ್ರಮಾಣ ತೀರಾ ಕಡಿಮೆ ಇದೆ. ಇದರಿಂದಾಗಿ ರೈತರು ಕಂಗಾಲಾಗಿದ್ದಾರೆ. ಮಳೆ ಕೊರತೆಯಿಂದಾಗಿ ತಾಪಮಾನ ಏರಿಕೆ ಕಾಣುತ್ತಿದೆ. ಈ ತಿಂಗಳ ಗರಿಷ್ಠ ಉಷ್ಣಾಂಶ ಸಾಮಾನ್ಯಕ್ಕಿಂತ ಎರಡು ಮೂರು ಡಿಗ್ರಿ ಸೆಲ್ಸಿಯಸ್ ರಾಜ್ಯದ ಬಹುತೇಕ ಕಡೆ ಹೆಚ್ಚಳವಾಗಿದೆ. ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ ಆಗಸ್ಟ್ ತಿಂಗಳ ವಾಡಿಕೆ ಮಳೆ ಪ್ರಮಾಣ 215 ಮಿ.ಮೀ. ಇರಬೇಕು. ಆದರೆ, 59 ಮಿ.ಮೀ.ನಷ್ಟು ಮಾತ್ರ ಮಳೆ ಸುರಿದಿದೆ.

ಕಳೆದ ಒಂದು ವಾರದ ವಾಡಿಕೆ ಮಳೆ ಪ್ರಮಾಣವು 38 ಮಿ.ಮೀ. ಆಗಿತ್ತು. ಆದರೆ, 9 ಮಿ.ಮೀ.ನಷ್ಟು ಮಾತ್ರ ಮಳೆ ಸುರಿದಿದೆ. ಇದರಿಂದಾಗಿ ಶೇ 78ರಷ್ಟು ಮಳೆ ಕೊರತೆಯಾಗಿದೆ. ವಾರದಿಂದ ವಾರಕ್ಕೆ ಕೊರತೆ ಪ್ರಮಾಣ ಹೆಚ್ಚಳ ಆಗುತ್ತಿದೆ. ಈ ವರ್ಷ ಆರಂಭದಿಂದಲೂ ನೈರುತ್ಯ ಮುಂಗಾರು ಅನಿಶ್ಚಿತವಾಗಿದೆ. ಜೂನ್ 1ರಿಂದ ಆಗಸ್ಟ್ 30 ರವರೆಗೆ ವಾಡಿಕೆ ಮಳೆ ಪ್ರಮಾಣವು 686 ಮಿ.ಮೀ ಆಗಿತ್ತು. ಬದಲಿಗೆ 496 ಮಿ.ಮೀ.ನಷ್ಟು ಮಳೆ ಸುರಿದಿದ್ದು, ಮುಂಗಾರು ಅಭಾವ ಸೃಷ್ಟಿಸಿದೆ. ಒಟ್ಟಾರೆ ಶೇ 28 ರಷ್ಟು ಮಳೆ ಕೊರತೆಯಾಗಿದೆ.

ಎಲ್ಲಾ ಜಿಲ್ಲೆಗಳಲ್ಲಿ ಕೊರತೆ: ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಳೆ ಕೊರತೆಯಾಗಿದೆ. ಆಗಸ್ಟ್‌ನಲ್ಲಿ ಬೀದರ್ ಜಿಲ್ಲೆಯಲ್ಲಿ ಗರಿಷ್ಠ (ಶೇ 89) ಮಳೆ ಕೊರತೆಯಾಗಿದೆ. ಆರು ಜಿಲ್ಲೆಗಳಲ್ಲಿ ವಾಡಿಕೆಗಿಂತ ಶೇ 80 ಹಾಗೂ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆ ಅಭಾವವಾಗಿದೆ. ಕರಾವಳಿ ಭಾಗದಲ್ಲಿ ಶೇ 72 ರಷ್ಟು, ಮಲೆನಾಡಿನಲ್ಲಿ ಶೇ 80 ರಷ್ಟು, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನಲ್ಲಿ ಶೇ 71 ರಷ್ಟು ಮಳೆ ಕೊರತೆಯಾಗಿದೆ.

'ಈ ವರ್ಷ ನೈರುತ್ಯ ಮುಂಗಾರು ನಿರಾಸೆಯನ್ನುಂಟು ಮಾಡಿದೆ. ಸೆಪ್ಟೆಂಬರ್‌ನಲ್ಲಿ ಪರಿಸ್ಥಿತಿ ಬದಲಾಗಿ, ಉತ್ತಮ ಮಳೆಯಾಗುವ ನಿರೀಕ್ಷೆಯಲ್ಲಿದ್ದೇವೆ' ಎಂದು ಹವಾಮಾನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಧಿಕ ಮಳೆ ಕೊರತೆ ಎದುರಿಸಿದ ಜಿಲ್ಲೆಗಳು (ಆಗಸ್ಟ್‌ನಲ್ಲಿ)

ಜಿಲ್ಲೆ	ವಾಡಿಕೆ (ಮಿ.ಮೀ)	ಸುರಿದ ಮಳೆ (ಮಿ.ಮೀ)	ಕೊರತೆ (%)
ಬೀದರ್	185	21	89
ಚಿಕ್ಕಬಳ್ಳಾಪುರ	106	16	85
ಚಿತ್ರದುರ್ಗ	65	11	83
ಕೊಡಗು	560	100	82
ಶಿವಮೊಗ್ಗ	545	106	81
ಬೆಂಗಳೂರು ನಗರ	120	24	80

28 ಜಿಲ್ಲೆಗೆ 'ಯೆಲ್ಲೊ ಅಲರ್ಟ್'

ರಾಜ್ಯ ಹವಾಮಾನ ಇಲಾಖೆಯು ಕಲಬುರಗಿ, ಬೀದರ್ ಹಾಗೂ ಯಾದಗಿರಿ ಹೊರತುಪಡಿಸಿ 28 ಜಿಲ್ಲೆಗಳಿಗೆ ಗುರುವಾರ 'ಯೆಲ್ಲೊ ಅಲರ್ಟ್' ಘೋಷಿಸಿದೆ. ರಾಜ್ಯದಾದ್ಯಂತ ಕೆಲವು ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮುಂದಿನ ಐದು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಸಾಧಾರಣ ಮಳೆ ಸಾಧ್ಯತೆ

ತಿರುವನಂತಪುರ (ಪಿಟಿಐ): ಒಂದು ತಿಂಗಳ ಕಾಲ ಒಣ ಹವೆ ಮುಂದುವರಿಕೆಯ ಬಳಿಕ ಕೇರಳದ ಕೆಲವು ಜಿಲ್ಲೆಗಳಲ್ಲಿ ಸಾಧಾರಣ ಪ್ರಮಾಣದ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಬುಧವಾರ ಮುನ್ಸೂಚನೆ ನೀಡಿದೆ.

ಮುಂಗಾರು ಆರಂಭದ ಜೂನ್ 1ರಿಂದ ಆಗಸ್ಟ್ 29ರ ವರೆಗೆ ಶೇ 48ರಷ್ಟು ಮಳೆ ಕೊರತೆಯಾಗಿದೆ ಎಂದು ಹೇಳಿದೆ.

ಸುದ್ದಿ 2 ನಿಮಿಷ

ಕಸಾಪ ಸಭೆ ಸೆ. 3ರಂದು

ಹಾಸನ: 'ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರ ಸಭೆಯನ್ನು ಜಿಲ್ಲೆಯ ಹಳೇಬೀಡಿನ ಪುಷ್ಪಗಿರಿ ಮಠದಲ್ಲಿ ಸೆ.3 ರಂದು ಆಯೋಜಿಸಲಾಗಿದೆ' ಎಂದು ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಮಲ್ಲೇಶ್ ಗೌಡ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಪರಿಷತ್ತಿನ ಕೇಂದ್ರ ಘಟಕದ ಅಧ್ಯಕ್ಷ ಮಹೇಶ್ ಜೋಷಿ, ಜಿಲ್ಲಾ ಘಟಕಗಳ ಪ್ರಮುಖರು ಸೇರಿ ಒಂದೂವರೆ ಸಾವಿರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ' ಎಂದರು.

'ಇದೇ ಸಂದರ್ಭದಲ್ಲಿ ಸದಸ್ಯರ ನೋಂದಣಿ ಆಂದೋಲನವೂ ನಡೆಯಲಿದ್ದು, ಸದಸ್ಯತ್ವ ಪಡೆಯುವವರು ₹ 410 ಶುಲ್ಕ ಪಾವತಿಸಬೇಕು. ಸೈನಿಕರು ಹಾಗೂ ಅಂಗವಿಕಲರಿಂದ ಅರ್ಜಿ ಶುಲ್ಕ ₹ 10ನ್ನು ಮಾತ್ರ ಪಡೆಯಲಾಗುವುದು' ಎಂದರು.

ಶ್ರೀಗಂಧ ಮರಗಳ್ಳರಿಗೆ ಗುಂಡೇಟು ಒಬ್ಬ ಸಾವು, ಮತ್ತೊಬ್ಬ ಪರಾರಿ

ಆನೇಕಲ್: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಕಲ್ಕೆರೆ ಬೀಟ್‌ನ ವೀವರ್ಸ್ ಕಾಲೊನಿಯಲ್ಲಿ ಬುಧವಾರ ಬೆಳಗಿನ ಜಾವ 3.30ಕ್ಕೆ ಶ್ರೀಗಂಧ ಮರ ಕದಿಯಲು ಬಂದವರ ಮೇಲೆ ಅರಣ್ಯ ಇಲಾಖೆ ಸಿಬ್ಬಂದಿ ಹಾರಿಸಿದ ಗುಂಡು ತಗುಲಿ ಆರೋಪಿಯೊಬ್ಬ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮತ್ತೊಬ್ಬ ಪರಾರಿಯಾಗಿದ್ದಾನೆ.

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ನಟ್ಟೂರಹಳ್ಳಿಯ ತಿಮ್ಮರಾಯಪ್ಪ(40) ಮೃತ ಆರೋಪಿ. ವೀವರ್ಸ್ ಕಾಲೋನಿಗೆ ಹೊಂದಿಕೊಂಡಿರುವ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ರಾತ್ರಿ ಗಸ್ತು ತಿರುಗುತ್ತಿದ್ದ ವೇಳೆ ಮರ ಕಡಿಯುವ ಶಬ್ದ ಕೇಳಿ ಬಂದಿದೆ. ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಶ್ರೀಗಂಧ ಮರ ಕಡಿಯುತ್ತಿರುವುದು ಕಂಡು ಬಂದಿದೆ. ಶರಣಾಗುವಂತೆ ಅರಣ್ಯ ಸಿಬ್ಬಂದಿ ಸೂಚಿಸಿದರೂ ಇಬ್ಬರೂ ಪರಾರಿಯಾಗಲು ಯತ್ನಿಸಿದ್ದಾರೆ. ಈ ವೇಳೆ ಅರಣ್ಯ ರಕ್ಷಕ ವಿನಯ್ ಕುಮಾರ್ ಗುಂಡು ಹಾರಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆ ನಡೆಸಿದರು. ಮರ ಕಡಿಯಲು ತಂದಿದ್ದ ಗರಗಸ ಹಾಗೂ ಮಾರಕಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್.ಪಿ. ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ. ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಜಿ–ಸಿಇಟಿ: ಸೆ.23ಕ್ಕೆ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸ್ನಾತಕೋತ್ತರ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯನ್ನು(ಪಿಜಿ-ಸಿಇಟಿ) ಸೆ.23, 24ಕ್ಕೆ ಮುಂದೂಡಿದೆ.

ಎಂಇ, ಎಂಟೆಕ್, ಎಂಸಿಎ ಸೇರಿದಂತೆ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಸೆ. 9, 10ರಂದು ಪರೀಕ್ಷೆ ನಿಗದಿ ಮಾಡಲಾಗಿತ್ತು. ಕೆಲ ವಿಶ್ವವಿದ್ಯಾಲಯಗಳಲ್ಲಿ ಪದವಿ ತರಗತಿಗಳ ಅಂತಿಮ ಸೆಮಿಸ್ಟರ್ ಪರೀಕ್ಷೆಗಳು ಪೂರ್ಣಗೊಳ್ಳದ ಕಾರಣ ಪಿಜಿ-ಸಿಇಟಿ ಮುಂದೂಡಲಾಗಿದೆ. ಮಾಹಿತಿಗೆ http://kea.kar.nic.in ಸಂಪರ್ಕಿಸಬಹುದು ಎಂದು ಕೆಇಎ ಮಾಹಿತಿ ನೀಡಿದೆ.



ಸೂಪರ್ ಮೂನ್

ಪೂರ್ಣಚಂದ್ರ– ಮಂಗಳೂರಿನ ಮಿಲಾಗ್ರಿಸ್ ಚರ್ಚ್ ಬಳಿ ಬುಧವಾರ ಕ್ಯಾಮೆರಾದಲ್ಲಿ ಸೆರೆಯಾದ 'ಸೂಪರ್‌ಮೂನ್'

–ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

'ಪಟಾಕಿ ದುರಂತ; ತನಿಖೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಹಾವೇರಿ: 'ಆಲದಕಟ್ಟಿಯ ಗೋದಾಮಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಟಾಕಿ ದಾಸ್ತಾನು ಮಾಡಲಾಗಿತ್ತು. ಇಲ್ಲಿ ಸೂಕ್ತ ಸುರಕ್ಷತಾ ಕ್ರಮಗಳು ಇಲ್ಲ. ಜನವಸತಿ ಪ್ರದೇಶದಲ್ಲಿ ಪಟಾಕಿ ಗೋದಾಮಿಗೆ ಹೇಗೆ ಪರವಾನಗಿ ಸಿಕ್ಕಿತು ಎಂಬುದೂ ಸೇರಿ ಘಟನೆ ಕುರಿತು ಎಲ್ಲ ಆಯಾಮಗಳಿಂದ ಸಮಗ್ರ ತನಿಖೆ ನಡೆಸುತ್ತೇವೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ತಾಲ್ಲೂಕಿನ ಆಲದಕಟ್ಟಿಯ ಸಮೀಪ ಪಟಾಕಿ ದುರಂತ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದುರ್ಘಟನೆಯಲ್ಲಿ ಮೃತರಾದವರಿಗೆ ತಲಾ 5 ಲಕ್ಷ ಪರಿಹಾರ ಘೋಷಿಸಲಾಗಿದ್ದು, ಗಾಯಗೊಂಡವರ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಭವಿಷ್ಯದಲ್ಲಿ ಇಂತಹ ಘಟನೆಗಳು ಎಲ್ಲಿಯೂ ಮರುಕಳಿಸದಂತೆ ಕಠಿಣ ಕಾನೂನು ತರುತ್ತೇವೆ' ಎಂದು ತಿಳಿಸಿದರು.

'ಪಟಾಕಿ ಗೋದಾಮಿಗೆ 2020ರಲ್ಲಿ ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯಲಾಗಿದೆ. ಪರವಾನಗಿ ನವೀಕರಣಕ್ಕೆ ಜಿಲ್ಲಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದ ಬಗ್ಗೆ ಮಾಹಿತಿ ಇದೆ. ಜನವಸತಿ ಪ್ರದೇಶದಲ್ಲಿ ಇಂತಹದ್ದಕ್ಕೆ ಅನುಮತಿ ನೀಡಬಾರದು. ಆದರೆ ಗ್ರಾಮ ಪಂಚಾಯಿತಿಯವರು ಯಾಕೆ ಅನುಮತಿ ನೀಡಿದ್ದಾರೆ ಎಂಬುದನ್ನು ಸೂಕ್ತ ತನಿಖೆಯಿಂದ ತಿಳಿದುಕೊಳ್ಳಲಾಗುವುದು' ಎಂದು ಅವರು ಹೇಳಿದರು.



ಹಾವೇರಿ ತಾಲ್ಲೂಕಿನ ಆಲದಕಟ್ಟಿ ಸಮೀಪದ ಗೋದಾಮಿನ ಪಟಾಕಿ ಅವಘಡದ ಸ್ಥಳಕ್ಕೆ ಬುಧವಾರ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಭೇಟಿ ನೀಡಿ, ಪರಿಶೀಲಿಸಿದರು. ವಿಧಾನ ಪರಿಷತ್ ಮುಖ್ಯಸಚೇತಕ ಸಲೀಂ ಅಹಮದ್ ಇದ್ದಾರೆ

ನಾಲ್ವರ ವಿರುದ್ಧ ಎಫ್‌ಐಆರ್; ಇಬ್ಬರು ವಶಕ್ಕೆ

'ಪಟಾಕಿ ಗೋದಾಮಿನಲ್ಲಿ ಬೆಂಕಿ ಅವಘಡ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಕಟ್ಟಡದ ಮಾಲೀಕ ಸಿ.ಜಿ.ವೀರೇಶ ಮತ್ತು ಕುಮಾರಪ್ಪ ಸಾತೇನಹಳ್ಳಿ ಎಂಬುವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಧಿಕಾರ ದುರ್ಬಳಕೆ: ಕೆಪಿಎಸ್‌ಸಿ ಅಧ್ಯಕ್ಷ

ಒಂದನೇ ಪುಟದಿಂದ...

ಟೆಂಡರ್ ಬಗ್ಗೆ ದೆಹಲಿಯ ಎಕ್ಸೆರ್ಜಿ ಸಲ್ಯೂಷನ್ಸ್ ಸಂಸ್ಥೆಯವರು ಕೆಲವು ಆಕ್ಷೇಪಣೆಗಳನ್ನು ಆಗಸ್ಟ್ 23ರಂದು ಸಲ್ಲಿಸಿದಾಗ ಈ ವಿಷಯ ಗಮನಕ್ಕೆ ಬಂದಿದೆ. ಸಂಸ್ಥೆಯ ಆಕ್ಷೇಪಣೆಗಳಿಗೆ ಉತ್ತರಿಸಲು ಕಾರ್ಯದರ್ಶಿಗೆ ಸೂಚಿಸಿದ್ದು, ಕೆಲವು ಮಾಹಿತಿಗಳನ್ನು ಅವರು ಟಿಪ್ಪಣಿಯಲ್ಲಿ ನೀಡಿದ್ದಾರೆ. ಅವುಗಳನ್ನು ಆಯೋಗ ಪರಿಶೀಲಿಸುತ್ತಿದೆ' ಎಂದು ತಿಳಿಸಿದ್ದಾರೆ.

'ಆಕ್ಷೇಪಣೆಗಳು ಬಂದಿರುವುದರಿಂದ ಟೆಂಡರ್ ಪ್ರಕ್ರಿಯೆಯನ್ನು ಮುಂದಿನ ಸೂಚನೆಯವರೆಗೆ ತಡೆಹಿಡಿಯುವಂತೆ ಕಾರ್ಯದರ್ಶಿಗೆ ಸೂಚಿಸಲಾಗಿದೆ. ಕಾರ್ಯದರ್ಶಿ ನೀಡಿರುವ ಟಿಪ್ಪಣಿ ಪರಿಶೀಲಿಸುತ್ತಿದ್ದು, ಇನ್ನೂ ಕೆಲವು ಅಂಶಗಳ ಬಗ್ಗೆ ಮಾಹಿತಿ ಪಡೆಯಬೇಕಿದೆ. ಎಲ್ಲ ಮಾಹಿತಿಗಳು ಬಂದ ಬಳಿಕ ಕಾರ್ಯದರ್ಶಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಲಾಗುವುದು' ಎಂದಿದ್ದಾರೆ.

'ಕಾರ್ಯದರ್ಶಿ ಹಲವು ಬಾರಿ ಏಕಪಕ್ಷೀಯ ನಿರ್ಧಾರಗಳನ್ನು ಕೈಗೊಂಡಿದ್ದಾರೆ' ಎಂದು ಆರೋಪಿಸಿರುವ ಸಾಹುಕಾರ್, 'ಆ ವಿವರಗಳ ಬಗ್ಗೆ ಮುಖ್ಯ ಕಾರ್ಯದರ್ಶಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಆದರೂ ಕಾರ್ಯದರ್ಶಿಯವರು ತಮ್ಮ ನಡವಳಿಕೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಕೊಂಡಿಲ್ಲ' ಎಂದೂ ದೂರಿದ್ದಾರೆ.

'ಕಾರ್ಯದರ್ಶಿಯ ಅಧಿಕಾರ ವ್ಯಾಪ್ತಿಯಲ್ಲಿದೆ'

ಒಂದನೇ ಪುಟದಿಂದ...

ಟೆಂಡರ್‌ಗೆ ಅನುಮೋದನೆ ಪಡೆಯದಿರುವುದಕ್ಕೆ ಸ್ಪಷ್ಟನೆ ನೀಡಿರುವ ಅವರು, 'ಈ ಟೆಂಡರ್ ವಿವಿಧ ಪೂರಕ ಸೇವೆಗಳಿಗೆ ಏಜೆನ್ಸಿಗಳನ್ನು ನಿಯೋಜಿಸಲು ಎಂದು ಟೆಂಡರ್ ದಾಖಲೆಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ವಿವಿಧ ಸೇವೆಗಳು ಇರುವುದರಿಂದ ಅನೇಕ ಏಜೆನ್ಸಿಗಳು ನಿಯೋಜನೆಯಾಗುವ ಸಾಧ್ಯತೆಗಳಿರುತ್ತವೆ. ಕೆಲಸದ ಕಾರ್ಯಾದೇಶವು ಪ್ರತಿ ಪರೀಕ್ಷೆಗಳಿಗೆ ಪ್ರತ್ಯೇಕವಾಗಿರುತ್ತದೆ ಎಂದೂ ಟೆಂಡರ್ ದಾಖಲೆಗಳಲ್ಲಿ ನಮೂದಿಸಲಾಗಿದೆ. ಈ ಹಿಂದೆ ವಿವಿಧ ಪೂರಕ ಸೇವೆಗಳಿಗೆ ಪ್ರತಿ ಪರೀಕ್ಷೆಯ ವೆಚ್ಚವು ₹1 ಕೋಟಿಯಿಂದ ₹1.5 ಕೋಟಿವರೆಗೆ ಆಗಿದೆ. ಇದು ಕಾರ್ಯದರ್ಶಿಯ ಅಧಿಕಾರದ ವ್ಯಾಪ್ತಿಯಲ್ಲಿ ಇರುವುದರಿಂದ, ಮೇಲಿನ ವಿಷಯಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಹಿಂದಿನಂತೆ ಟೆಂಡರ್ ಕರೆಯಲಾಗಿದೆ' ಎಂದಿದ್ದಾರೆ.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬುಧವಾರ ನಡೆದ ರಾಜ್ಯ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳ ಸಾವಿರಾರು ಮಹಿಳೆಯರು ಭಾಗವಹಿಸಿದರು ಪ್ರಜಾವಾಣಿ ಚಿತ್ರ

'ಗೃಹಲಕ್ಷ್ಮಿ'ಗೆ ಅದ್ದೂರಿ ಚಾಲನೆ

ಒಂದನೇ ಪುಟದಿಂದ...

ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಉಪಸ್ಥಿತಿ ಗಮನ ಸೆಳೆಯಿತು. ಅವರು ಕೆಲ ನಿಮಿಷ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರೊಂದಿಗೆ ಚರ್ಚಿಸಿದರು.

'ವಂದಿತಾ ಶರ್ಮ ಅವರು ಮಹಿಳೆಯಾಗಿ, ರಾಜ್ಯದ ಮುಖ್ಯ ಕಾರ್ಯದರ್ಶಿ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸ್ವಾಗತ ಭಾಷಣದಲ್ಲಿ ಶ್ಲಾಘಿಸಿದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಸಭಿಕರಿಗೆ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದವರೆಲ್ಲರೂ ಬಿಜೆಪಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಜಿ. ಪರಮೇಶ್ವರ, ಎನ್.ಎಸ್.ಬೋಸರಾಜು, ಎನ್.ಚಲುವರಾಯಸ್ವಾಮಿ, ಕೆ.ಎಚ್.ಮುನಿಯಪ್ಪ, ಕೃಷ್ಣ ಬೈರೇಗೌಡ, ಕೆ.ಎನ್.ರಾಜಣ್ಣ, ಕೆ.ವೆಂಕಟೇಶ್, ಬೈರತಿ ಸುರೇಶ್, ಸತೀಶ ಜಾರಕಿಹೊಳಿ ಹಾಗೂ ವಿವಿಧ ಜಿಲ್ಲೆಗಳ ಶಾಸಕರು ಉಪಸ್ಥಿತರಿದ್ದರು.

ಎಲ್ಲೆಲ್ಲೂ ಮಹಿಳೆಯರು: ವೇದಿಕೆ ಮುಂಭಾಗ ಹಾಕಲಾಗಿದ್ದ ಸಾವಿರಾರು ಕುರ್ಚಿಗಳು ಭರ್ತಿಯಾಗಿದ್ದರಿಂದ, ವೇದಿಕೆಯ ಎಡ–ಬಲದಲ್ಲಿ ಮಹಿಳೆಯರು ನಿಂತುಕೊಂಡೇ ಕಾರ್ಯಕ್ರಮ ವೀಕ್ಷಿಸಿದರು.

ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳಿಂದ ಸರ್ಕಾರಿ ಬಸ್‌ಗಳಲ್ಲಿ ಕರೆತಂದಿದ್ದ ಮಹಿಳೆಯರಲ್ಲಿ ನೂರಾರು ಮಂದಿಗೆ ವೇದಿಕೆ ಬಳಿಗೂ ಬರಲಾಗದೆ, ಮೈದಾನದ ಹೊರ ಆವರಣದ ರಸ್ತೆ ಬದಿ ಮರಗಳಡಿ ಕುಳಿತುಕೊಂಡಿದ್ದರು. ವೇದಿಕೆ ಸುತ್ತಮುತ್ತ ಮಹಿಳಾ ದಟ್ಟಣೆಯನ್ನು ನಿರ್ವಹಿಸುವಲ್ಲಿ ಪೊಲೀಸರೂ ಸುಸ್ತಾದರು. ಮೈದಾನಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳಲ್ಲೂ ಸಾವಿರಾರು ಮಹಿಳೆಯರು ಕಂಡು ಬಂದರು.

ರಾಜ್ಯದ 12 ಸಾವಿರಕ್ಕೂ ಹೆಚ್ಚಿನ ಸ್ಥಳಗಳಲ್ಲಿ ಕಾರ್ಯಕ್ರಮದ ನೇರಪ್ರಸಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಕಲುಷಿತ ಆಹಾರ: ದೃಷ್ಟಿ ಕಳೆದುಕೊಂಡ ವ್ಯಕ್ತಿ

ಬೆಳಗಾವಿ: ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ಗ್ರಾಮದಲ್ಲಿ ಮದುವೆಯಲ್ಲಿ ಕಲುಷಿತ ಆಹಾರ ಸೇವಿಸಿದ ವ್ಯಕ್ತಿಯೊಬ್ಬರಿಗೆ ಕುರುಡುತನ ಉಂಟಾಗಿದೆ. ಹೆಚ್ಚಿನ ಚಿಕಿತ್ಸೆಗೆ ಬುಧವಾರ ಸಂಜೆ ಅವರನ್ನು ಬೆಳಗಾವಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

'ಹಿರೇಕೋಡಿಯ ಬಾಬಾಸಾಬ್ ಕುತುಮುದ್ದೀನ್ ಬೇಗ್ (37) ದೃಷ್ಟಿ ಕಳೆದುಕೊಂಡವರು. ಮದುವೆಯಲ್ಲಿ ಊಟ ಮಾಡಿದ ಬಳಿಕ ವಾಂತಿ-ಭೇದಿ ಶುರುವಾಯಿತು. ಚಿಕ್ಕೋಡಿ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಬುಧವಾರ ಇದ್ದಕ್ಕಿದ್ದಂತೆ ಅವರ ದೃಷ್ಟಿ ಕ್ಷೀಣಿಸಿತು' ಎಂದು ಬಾಬಾಸಾಬ್ ಅವರ ಪತ್ನಿ ರುಕ್ಸಾನಾ ತಿಳಿಸಿದರು.

'ವಿಪರೀತ ವಾಂತಿ–ಭೇದಿಯಿಂದ ದೇಹದಲ್ಲಿ ನಿರ್ಜಲೀಕರಣ ಆಗಿದೆ. ಇದರಿಂದ ರಕ್ತ ಹೆಪ್ಪುಗಟ್ಟಿ ನೇತ್ರದ ನರಗಳು ಕ್ಷೀಣಿಸಿರಬಹುದು. ಸದ್ಯ ಅವರಿಗೆ ಕಣ್ಣು ಕಾಣುತ್ತಿಲ್ಲ. ಪೂರ್ಣಪ್ರಮಾಣದಲ್ಲಿ ತಪಾಸಣೆ ನಡೆಸಿದ ಬಳಿಕ ನಿಖರ ಕಾರಣ ತಿಳಿಯಲಿದೆ ' ಎಂದು ಜಿಲ್ಲಾಸ್ಪತ್ರೆಯ ನೇತ್ರ ವಿಭಾಗದ ವೈದ್ಯ ಡಾ. ಎ.ಬಿ.ಪಾಟೀಲ ತಿಳಿಸಿದ್ದಾರೆ. ಕಲುಷಿತ ಆಹಾರ ಸೇವಿಸಿ ವಾಂತಿ–ಭೇದಿಯಿಂದ ಬಳಲಿದ 162 ಮಂದಿ ಬುಧವಾರ ಕೂಡ ಚಿಕ್ಕೋಡಿ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಎಲ್ಲರ ಆರೋಗ್ಯ ಸ್ಥಿರವಾಗಿದೆ.

70 ಕಿ.ಮೀ ಹಿಂಬಾಲಿಸಿದ ಶ್ವಾನ

ಪ್ರಜಾವಾಣಿ ವಾರ್ತೆ

ಕೊಟ್ಟಿಗೆಹಾರ (ಚಿಕ್ಕಮಗಳೂರು): ಸೌಜನ್ಯಾ ಅತ್ಯಾಚಾರ, ಕೊಲೆ ಪ್ರಕರಣ ಖಂಡಿಸಿ, ಕೆಆರ್‌ಎಸ್ ಪಕ್ಷದಿಂದ ಬೆಳ್ತಂಗಡಿಯಿಂದ– ಬೆಂಗಳೂರಿಗೆ ನಡೆಯುತ್ತಿರುವ ಪಾದಯಾತ್ರೆಯಲ್ಲಿ ಶ್ವಾನವೊಂದು ಪಕ್ಷದ ಕಾರ್ಯಕರ್ತರ ಜತೆ ಹೆಜ್ಜೆ ಹಾಕುತ್ತಾ ಗಮನ ಸೆಳೆಯುತ್ತಿದೆ.

ಸದ್ಯ ಪಾದಯಾತ್ರೆಯು ಮೂಡಿಗೆರೆ ಗಡಿ ಭಾಗಕ್ಕೆ ತಲುಪಿದೆ.

ಪಾದಯಾತ್ರಿಕರು ಈ ಹೆಣ್ಣು ಶ್ವಾನಕ್ಕೆ 'ಪ್ರಕೃತಿ' ಎಂದು ಹೆಸರಿಟ್ಟಿದ್ದಾರೆ. 'ನಾವು ಬೆಳ್ತಂಗಡಿಯಿಂದ ಧರ್ಮಸ್ಥಳಕ್ಕೆ ಹೋಗಿ ವಾಪಾಸ್ ಬರುವಾಗ ನೇತ್ರಾವತಿ ಸ್ನಾನಘಟ್ಟದ ಬಳಿಯಿಂದ ಇದು ನಮ್ಮನ್ನು ಹಿಂಬಾಲಿಸಿಕೊಂಡು ಬಂದಿದೆ. ಚಾರ್ಮಾಡಿ ಘಾಟ್ ಮೂಲಕ 70 ಕಿ.ಮೀ ನಮ್ಮೊಂದಿಗೆ ನಡೆದುಕೊಂಡು ಬಂದಿರುವುದು ನೋಡಿದರೆ ಅಚ್ಚರಿ ಎನಿಸುತ್ತದೆ' ಎಂದು ಪಾದಯಾತ್ರೆಯಲ್ಲಿ ಭಾಗವಹಿಸಿರುವ ಸಿ.ಎನ್.ದೀಪಕ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.



ಕೆಆರ್‌ಎಸ್ ಪಕ್ಷದ ಪಾದಯಾತ್ರೆಯಲ್ಲಿ ಕಂಡ 'ಪ್ರಕೃತಿ'

ಆಕ್ಷೇಪಾರ್ಹ ಬರಹ: ಎರಡು ಪ್ರತ್ಯೇಕ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಬರಹ ಪೋಸ್ಟ್ ಮಾಡಿದ ಆರೋಪದ ಮೇಲೆ ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಅವರ ಕುಟುಂಬದ ಸದಸ್ಯರ ಬಗ್ಗೆ ವಾಟ್ಸ್‌ಆ್ಯಪ್ ಗ್ರೂಪ್‌ವೊಂದರಲ್ಲಿ ಆಕ್ಷೇಪಾರ್ಹ ಬರಹ ಹಾಕಿದ ಆರೋಪದ ಮೇಲೆ ಸುರೇಶ್ ರಾಜ್ ಎಂಬುವರ ವಿರುದ್ಧ ಬೆಳ್ತಂಗಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಆರೋಪಿಯ ವಿರುದ್ಧ ಐಪಿಸಿ ಕಲಂ 505 (ಸಾರ್ವಜನಿಕ ಕಿಡಿಗೇಡಿತನಕ್ಕೆ ಕಾರಣವಾಗುವ ಹೇಳಿಕೆ) ಮತ್ತು 509 (ಮಹಿಳೆಯ ನಮ್ರತೆ ಅವಮಾನಿಸುವ ಉದ್ದೇಶ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಫೇಸ್‌ಬುಕ್ ಪೋಸ್ಟ್: ಕೊಲೆಯಾದ ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯಾ ಅವರ ತಾಯಿಯ ಬಗ್ಗೆ ಫೇಸ್‌ಬುಕ್‌ನಲ್ಲಿ ಆಕ್ಷೇಪಾರ್ಹ ಟೀಕೆ ಮಾಡಿರುವ ಆರೋಪದ ಮೇಲೆ ರಾಘವೇಂದ್ರ ಭಟ್ ಎಂಬುವರ ವಿರುದ್ಧ ಐಪಿಸಿ ಕಲಂ 509ರ ಅಡಿಯಲ್ಲಿ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉಪನಗರ: ಜಮೀನು ಗುರುತಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗೃಹ ಮಂಡಳಿ ಅಭಿವೃದ್ಧಿಪಡಿಸುವ ಉಪನಗರ ಹಾಗೂ ವಿಲ್ಲಾ ಯೋಜನೆಗಳಿಗೆ ಅಗತ್ಯ ಜಮೀನು ಗುರುತಿಸುವ ಕಾರ್ಯವನ್ನು ತಕ್ಷಣ ಆರಂಭಿಸುವಂತೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಸೂಚಿಸಿದರು.

ಗೃಹಮಂಡಳಿ ಕಚೇರಿಯಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ರಾಜಧಾನಿಯ ಐದು ಕಡೆ ತಲಾ ಎರಡು ಸಾವಿರ ಎಕರೆಯಲ್ಲಿ ಉಪನಗರ ಹಾಗೂ ತಲಾ 500 ಎಕರೆಯಲ್ಲಿ ನಾಲ್ಕು ಕಡೆ ವಿಲ್ಲಾ ಯೋಜನೆ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಅದಕ್ಕಾಗಿ ಅಧಿಕಾರಿಗಳ ವಿಶೇಷ ತಂಡ ರಚಿಸಬೇಕು ಎಂದರು.

ರಾಜಧಾನಿಯ ನಾಲ್ಕು ಭಾಗಗಳಲ್ಲಿ ಮೆಟ್ರೊ ಸೌಲಭ್ಯ ಸೇರಿದಂತೆ ಸೂಕ್ತ ಸಾರಿಗೆ ಸಂಪರ್ಕ ಹಾಗೂ ಇತರೆ ಮೂಲಸೌಕರ್ಯ ವ್ಯವಸ್ಥೆಗೆ ಅನುಕೂಲವಾಗುವಂತಹ ಜಮೀನು ಗುರುತಿಸಬೇಕು. 50:50ರ ಅನುಪಾತದಲ್ಲಿ ಜಮೀನು ಪಡೆಯಲು ಮಾಲೀಕರ ಜತೆ ಒಪ್ಪಂದ ಮಾಡಿಕೊಳ್ಳಬೇಕು ಎಂದು ಸೂಚಿಸಿದರು. ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇತರೆ ಭಾಗಗಳಲ್ಲಿ ಬಿಪಿಎಲ್ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ನಿವೇಶನ ಅಥವಾ ಮನೆ ನಿರ್ಮಿಸಿಕೊಡುವ ಯೋಜನೆ ರೂಪಿಸುವ ಚಿಂತನೆ ಇದೆ ಎಂದರು.

ಆಸ್ಪತ್ರೆಗೆ ಎಚ್‌ಡಿಕೆ ಆರೋಗ್ಯದಲ್ಲಿ ಚೇತರಿಕೆ

ಬೆಂಗಳೂರು: ಜಯನಗರದ ಅಪೊಲೊ ಆಸ್ಪತ್ರೆಗೆ ದಾಖಲಾಗಿದ್ದ ಶಾಸಕ ಎಚ್.ಡಿ.ಕುಮಾರಸ್ವಾಮಿ ಅವರ ಆರೋಗ್ಯ ಸುಧಾರಿಸಿದ್ದು, ಸೆ.1ರಂದು ಮನೆಗೆ ಮರಳಲಿದ್ದಾರೆ.

ಜ್ವರ, ನಿಶ್ಯಕ್ತಿ, ಆಯಾಸದಿಂದ ಬಳಲುತ್ತಿದ್ದ ಅವರನ್ನು ಬುಧವಾರ ಬೆಳಗಿನ ಜಾವ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಆರೋಗ್ಯದಲ್ಲಿ ಸುಧಾರಣೆ ಕಂಡುಬಂದಿದೆ. 2 ದಿನಗಳ ವಿಶ್ರಾಂತಿಯ ನಂತರ ಮನೆಗೆ ಕಳುಹಿಸಲಾಗುವುದು ಎಂದು ವೈದ್ಯ ಡಾ.ಪಿ.ಸತೀಶ್ ಚಂದ್ರ ಮಾಹಿತಿ ನೀಡಿದ್ದಾರೆ. 'ವಿದೇಶದಿಂದ ಮರಳಿದ ನಂತರ ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದರು. ಜ್ವರದ ಕಾರಣ ಆಸ್ಪತ್ರೆಗೆ ಕರೆತಂದೆವು' ಎಂದು ಅವರ ಪತ್ನಿ ಅನಿತಾ ಕುಮಾರಸ್ವಾಮಿ ಹೇಳಿದ್ದಾರೆ.

ಕೆಆರ್‌ಎಸ್ ಅಣೆಕಟ್ಟೆ ಬಳಿ ರೈತಸಂಘದ ಸದಸ್ಯರ ಅಹೋರಾತ್ರಿ ಧರಣಿ ಆರಂಭ

ತಮಿಳುನಾಡಿಗೆ ನೀರು ಬಿಡುಗಡೆ

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ನಿತ್ಯ 5 ಸಾವಿರ ಕ್ಯುಸೆಕ್ ನೀರು ಬಿಡಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೂಚಿಸಿದ ಬೆನ್ನಲ್ಲೇ ಕಾವೇರಿ ನೀರಾವರಿ ನಿಗಮ ಮಂಗಳವಾರ ರಾತ್ರಿಯಿಂದಲೇ ನದಿಗೆ ನೀರು ಹರಿಸುತ್ತಿದೆ. ಬುಧವಾರ ನದಿಗೆ 7,279 ಕ್ಯುಸೆಕ್ ನೀರು ಬಿಟ್ಟಿದ್ದು ತಮಿಳುನಾಡಿಗೆ ಹರಿದು ಹೋಗುತ್ತಿದೆ.

ಮಂಗಳವಾರ ರಾತ್ರಿ 8 ಗಂಟೆಯವರೆಗೂ 2,292 ಕ್ಯುಸೆಕ್ ನೀರು ನದಿಗೆ ಹರಿಯುತ್ತಿತ್ತು, ಬುಧವಾರ ಬೆಳಿಗ್ಗೆ 6 ಗಂಟೆ ವೇಳೆಗೆ 4,398 ಕ್ಯುಸೆಕ್‌ಗೆ ಏರಿಕೆಯಾಗಿತ್ತು, ರಾತ್ರಿ 8 ಗಂಟೆ ವೇಳೆಗೆ 7,279 ಕ್ಯುಸೆಕ್‌ಗೆ ಏರಿಸಲಾಗಿದೆ. ಜಲಾಶಯಕ್ಕೆ 2,357 ಕ್ಯುಸೆಕ್ ಒಳಹರಿವು, 7329 ಹೊರಹರಿವು ದಾಖಲಾಗಿದೆ.

ಈ ಕುರಿತು ಮಾಹಿತಿ ನೀಡಲು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ನಿರಾಕರಿಸಿದರು.

ಜಿಲ್ಲೆಯಾದ್ಯಂತ ಹೋರಾಟ: ಬರ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸುತ್ತಿರುವುದಕ್ಕೆ ಜಿಲ್ಲೆಯಾದ್ಯಂತ ವಿವಿಧ ಸಂಘಟನೆಗಳು ಹೋರಾಟಕ್ಕೆ ಕರೆ ನೀಡಿವೆ. ಬುಧವಾರ ಮಂಡ್ಯ ಯೂತ್ ಗ್ರೂಪ್ ಸದಸ್ಯರು ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಪ್ರತಿಭಟನೆ ನಡೆಸಿದರು. 'ಸಂಕಷ್ಟ ಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಹರಿಸಬಾರದು' ಎಂದು ಒತ್ತಾಯಿಸಿದರು. ಗ್ರೂಪ್ ಅಧ್ಯಕ್ಷ ಡಾ.ಅನಿಲ್ ಆನಂದ್ ಹೋರಾಟದ ನೇತೃತ್ವ ವಹಿಸಿದ್ದರು. ಶ್ರೀರಂಗಪಟ್ಟಣದಲ್ಲಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ರಾಜ್ಯ ಸರ್ಕಾರದ ವಿರುದ್ಧ ಪಂಜಿನ ಮೆರವಣಿಗೆ ನಡೆಸಿದರು.

ಜೆಡಿಎಸ್ ನಾಯಕರ ಗಡುವು: ಜೆಡಿಎಸ್ ನಾಯಕರು ಪತ್ರಿಕಾಗೋಷ್ಠಿ ನಡೆಸಿ, ಸೆ.1ರ ಒಳಗೆ ನೀರು ನಿಲ್ಲಿಸದಿದ್ದರೆ ಜಿಲ್ಲೆಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಮುಖಂಡ ಸುರೇಶ್‌ಗೌಡ ಮಾತನಾಡಿ, 'ರಾತ್ರಿ 10 ಸಾವಿರ ಕ್ಯುಸೆಕ್, ಬೆಳಿಗ್ಗೆ 5 ಸಾವಿರ ಕ್ಯುಸೆಕ್ ಹರಿಸಲಾಗಿದೆ. ರಾಜ್ಯ ಸರ್ಕಾರ ತಮಿಳುನಾಡು ರಾಜ್ಯವನ್ನು ಓಲೈಸುತ್ತಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದ ಶಾಸಕರು ರಾಜೀನಾಮೆ ನೀಡಿ ಹೋರಾಟಕ್ಕೆ ಬರಬೇಕು' ಎಂದು ಒತ್ತಾಯಿಸಿದರು.

ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸೇರಿದಂತೆ ವಿವಿಧ ರೈತ ಸಂಘಟನೆಗಳ ಸದಸ್ಯರು ಗುರುವಾರ ಹೋರಾಟಕ್ಕೆ ಕರೆ ನೀಡಿದ್ದಾರೆ.



ಕೆಆರ್‌ಎಸ್ ಅಣೆಕಟ್ಟೆ ಬಳಿ ರೈತಸಂಘದ ಸದಸ್ಯರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸ್ಥಳಕ್ಕೆ ಬುಧವಾರ ರಾತ್ರಿ ಜಿಲ್ಲಾಧಿಕಾರಿ ಕುಮಾರ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಭೇಟಿ ನೀಡಿ ಪ್ರತಿಭಟನಾಕಾರರ ಅಹವಾಲು ಆಲಿಸಿದರು.

'ನೀರು ನಿಲ್ಲದಿದ್ದರೆ ಧರಣಿ ನಿಲ್ಲದು'

ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತಸಂಘದ ಸದಸ್ಯರು ಕೆಆರ್‌ಎಸ್ ಜಲಾಶಯದ ನಾರ್ತ್‌ಬ್ಯಾಂಕ್ ಬಳಿ ಬುಧವಾರ ಅಹೋರಾತ್ರಿ ಧರಣಿ ಆರಂಭಿಸಿದರು.

ರೈತಸಂಘ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ 'ಯಾವ ಮಾನದಂಡದ ಆಧಾರದ ಮೇಲೆ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ ಎಂಬುದನ್ನು ರಾಜ್ಯ ಸರ್ಕಾರ ಸ್ಪಷ್ಟಪಡಿಸಬೇಕು. ಸಂಕಷ್ಟ ಸಂದರ್ಭದಲ್ಲಿ ಕಾವೇರಿ ಅಚ್ಚುಕಟ್ಟು ಪ್ರದೇಶ ಬರ ಪರಿಸ್ಥಿತಿ ಎದುರಿಸುತ್ತಿದೆ. ಕೂಡಲೇ ಸಂಕಷ್ಟ ಸೂತ್ರ ಜಾರಿಯಾಗಬೇಕು, ನೀರು ನಿಲುಗಡೆಯಾಗುವವರೆಗೂ ಧರಣಿ ನಿಲ್ಲುವುದಿಲ್ಲ' ಎಂದರು.

ಅಹವಾಲಿಗೆ ‘ಸಿಎಂಒ’ ಶೀಘ್ರ ಸ್ಪಂದನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪ್ರಶಂಸೆಗೆ ಪಾತ್ರವಾದ ‘ಸಾರ್ವಜನಿಕ ಕುಂದು ಕೊರತೆ ಕೋಶ’
- ವರ್ಷದ ಹಿಂದೆ ಸಲ್ಲಿಕೆಯಾದ ದೂರುಗಳಿಗೂ ಪ್ರತಿಕ್ರಿಯೆ
- ಕೆಲವೇ ಗಂಟೆಗಳಲ್ಲಿ ಪರಿಹಾರ

ಬೆಂಗಳೂರು: ಜನಸಾಮಾನ್ಯರ ಅಹವಾಲು, ಕುಂದುಕೊರತೆಗಳಿಗೆ ತಕ್ಷಣ ಸ್ಪಂದಿಸುವ ಮೂಲಕ ಮುಖ್ಯಮಂತ್ರಿ ಕಚೇರಿಯ (ಸಿಎಂಒ) ‘ಸಾರ್ವಜನಿಕ ಕುಂದುಕೊರತೆ ಕೋಶ’ ಪ್ರಶಂಸೆಗೆ ಪಾತ್ರವಾಗಿದೆ. ವರ್ಷದ ಹಿಂದೆ ಸಲ್ಲಿಕೆಯಾದ ದೂರುಗಳಿಗೂ ಸಂಬಂಧಪಟ್ಟ ಇಲಾಖೆಗಳಿಂದ ಕೆಲವೇ ಗಂಟೆಗಳಲ್ಲಿ ಪರಿಹಾರ ಒದಗಿಸಿರುವ ನಿದರ್ಶನಗಳೂ ಇವೆ.

ಸಾರ್ವಜನಿಕರಿಂದ ಸಾಮಾಜಿಕ ಮಾಧ್ಯಮಗಳು, ಪತ್ರಗಳು, ಮೊಬೈಲ್ ಕರೆಗಳು ಮತ್ತು ಇ–ಮೇಲ್ ಮೂಲಕ ಬರುವ ಕುಂದುಕೊರತೆಗಳನ್ನು ಕ್ರೋಡೀಕರಿಸಿ, ತ್ವರಿತವಾಗಿ ಪರಿಹರಿಸುವಂತೆ ಆಯಾ ಇಲಾಖೆಗಳಿಗೆ ಕಳುಹಿಸುವ ಜೊತೆಗೆ ಅವುಗಳು ಪರಿಹರಿಸಲ್ಪಟ್ಟಿವೆಯೇ ಎಂದೂ ಈ ಕೋಶ ಗಮನಹರಿಸುತ್ತಿದೆ.

ಈ ಬಗ್ಗೆ ಮಾಹಿತಿ ನೀಡಿದ ಮುಖ್ಯಮಂತ್ರಿಯ ವಿಶೇಷ ಕರ್ತವ್ಯಾಧಿಕಾರಿ (ಒಎಸ್‌ಡಿ) ಕೆ. ವೈಷ್ಣವಿ, ‘ಜನಸಾಮಾನ್ಯರ ಯಾವುದೇ ಸಮಸ್ಯೆಗಳನ್ನು ಪರಿಶೀಲಿಸಲು ಮತ್ತು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಲು ಮಾಧ್ಯಮಗಳಲ್ಲಿ ಪ್ರಕಟವಾಗುವ ಸುದ್ದಿಗಳ ಮೇಲೆ ನಿಗಾ ವಹಿಸುತ್ತೇವೆ. ಬಳಿಕ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ’ ಎಂದರು.

‘ಸ್ವೀಕರಿಸಿದ ಪ್ರತಿಯೊಂದು ದೂರುಗಳನ್ನು ಇ-ಫೈಲ್ ಮಾಡಿ, ಸಂಬಂಧಿಸಿದ ಇಲಾಖೆಗಳಿಗೆ ರವಾನಿಸಲಾಗುತ್ತದೆ. ಬಳಿಕ ಅಧಿಕಾರಿಗಳನ್ನು ಸಂಪರ್ಕಿಸಿ ಸಮಸ್ಯೆಗಳನ್ನು ಪರಿಹರಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲಾಗುತ್ತದೆ. ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ದೂರು ಕಡತಗಳನ್ನು ತಳ್ಳುವ ಕಚೇರಿಯಾಗಲು ನಾವು ಬಯಸುವುದಿಲ್ಲ. ಅದರ ಬದಲು ಇಲಾಖೆಗಳ ಜೊತೆ ಸಮನ್ವಯ ಸಾಧಿಸಿ ಕೆಲಸ ಮಾಡುತ್ತೇವೆ’ ಎಂದೂ ಅವರು ತಿಳಿಸಿದರು.

‘ನಾನು ಮುಖ್ಯಮಂತ್ರಿ ಕಚೇರಿಗೆ ಸಲ್ಲಿಸಿದ ಸುಮಾರು 20-25 ದೂರುಗಳು ಕೆಲವೇ ಗಂಟೆಗಳಲ್ಲಿ ಪರಿಹಾರ ಆಗಿವೆ. ಉದಾಹರಣೆಗೆ, ಕನಕಪುರ ಮುಖ್ಯರಸ್ತೆಯಲ್ಲಿ ಸುಮಾರು 140 ಬೀದಿ ದೀಪಗಳು ಸುಮಾರು ಏಳು ತಿಂಗಳಿನಿಂದ ಕಾರ್ಯನಿರ್ವಹಿಸುತ್ತಿಲ್ಲ ಎಂದು ಬಿಬಿಎಂಪಿಗೆ ಅಹವಾಲು ಸಲ್ಲಿಸಿದ್ದೆವು. ಮುಖ್ಯಮಂತ್ರಿ ಕಚೇರಿ ಮಧ್ಯಪ್ರವೇಶಿಸಿದ ಕೆಲವೇ ಗಂಟೆಗಳಲ್ಲಿ ಸಮಸ್ಯೆ ಪರಿಹಾರ ಆಗಿದೆ’ ಎಂದು ನಿವಾಸಿಗಳ ಕಲ್ಯಾಣ ಸಂಘಗಳ ಒಕ್ಕೂಟದ ಕನಕಪುರದ ಚೇಂಜ್ ಮೇಕರ್‌ಗಳ ಕಾರ್ಯದರ್ಶಿ ಶ್ರೀವತ್ಸ ವಾಜಪೇಯಂ ಹೇಳಿದರು.

‘ಪ್ರತಿ ದೂರನ್ನು ಮೊದಲು ವರ್ಗೀಕರಿಸುತ್ತೇವೆ. ಈ ಪೈಕಿ ಕೆಲವು ದೂರುಗಳನ್ನು ತಕ್ಷಣ ಪರಿಹರಿಸಲು ಸಾಧ್ಯವಾಗುತ್ತದೆ. ಇನ್ನೂ ಕೆಲವು ದೂರುಗಳ ಪರಿಹಾರಕ್ಕೆ ಹೆಚ್ಚಿನ ಸಮಯ ಅಗತ್ಯವಿರುತ್ತದೆ. ಅಂತಹ ಸಂದರ್ಭಗಳಲ್ಲಿ ದೂರುಗಳನ್ನು ನೇರವಾಗಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ರವಾನಿಸಲಾಗುತ್ತದೆ’ ಎಂದೂ ವೈಷ್ಣವಿ ವಿವರಿಸಿದರು.

ಸಾರ್ವಜನಿಕರು ದೂರುಗಳನ್ನು ಇ- ಮೇಲ್ (officeofosdtocm@gmail.com), ಕರೆ 080–22033347 ಅಥವಾ ‘ಎಕ್ಸ್’ (ಟ್ವಿಟರ್) @osd_cmkarnataka ಕೂಡಾ ಮಾಡಬಹುದು.

ನಿವೃತ್ತ ಪೊಲೀಸ್ ಅಧಿಕಾರಿ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಜಮೀನು ಸರ್ವೆ ಕಾರ್ಯಕ್ಕೆ ಅಡ್ಡಿಪಡಿಸಿ ಅಧಿಕಾರಿಗಳನ್ನು ನಿಂದಿಸಿದ ಆರೋಪಕ್ಕೆ ಸಂಬಂಧಿಸಿದಂತೆ ನಿವೃತ್ತ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಲ್.ಜಿ. ಕೃಷ್ಣಪ್ಪ ವಿರುದ್ಧ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನೆಲಮಂಗಲ ಪಟ್ಟಣದ ಸರ್ವೆ ನಂ. 202ರ ಸರ್ಕಾರಿ ಗೋಮಾಳ ಅಳತೆಗೆ ಉಪ ವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಅಧಿಕಾರಿಗಳ ತಂಡವು ತೆರಳಿತ್ತು. ಖಾತೆದಾರರಾದ ಕೀರ್ತಿರೇಖಾ ಅವರ ತಂದೆ ಎಲ್.ಜಿ.ಕೃಷ್ಣಪ್ಪ ಅವರು ಅಳತೆ ಕೆಲಸಕ್ಕೆ ಅಡ್ಡಿಪಡಿಸಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಹಾಗೂ ಜೀವ ಬೆದರಿಕೆ ಹಾಕಿದ್ದಾರೆ ಎಂದು ತಹಶೀಲ್ದಾರ್ ಕೆ.ಅರುಂದತಿ ದೂರು ನೀಡಿದ್ದರು. ದೂರು ಆಧರಿಸಿ, ನೆಲಮಂಗಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಮಂಗಳವಾರ ಮಧ್ಯಾಹ್ನ ಜಮೀನು ಅಳತೆಗೆ ತೆರಳಿದ್ದಾಗ ಈ ಘಟನೆ ನಡೆದಿದೆ.

‘ಅಕ್ಕಪಕ್ಕದವರಿಗೆ ನೋಟಿಸ್ ನೀಡದೇ ಏಕಾಏಕಿ ಅಳತೆಗೆ ಬಂದಿದ್ದರು. ಪಕ್ಕದ ಜಮೀನಿನವರಿಗೆ ಅನುಕೂಲ ಮಾಡಿಕೊಡಲು ಸರ್ವೆ ಕಾರ್ಯ ಕೈಗೊಂಡಿದ್ದರು. 2005ರಲ್ಲಿ ನನ್ನ ಮಗಳು ಕೀರ್ತಿರೇಖಾಗೆ ಅನುಕಂಪದ ಆಧಾರದಲ್ಲಿ ಜಮೀನು ಮಂಜೂರಾಗಿದ್ದು, ನಕ್ಷೆಯನ್ನೂ ಮಾಡಿಕೊಟ್ಟಿದ್ದಾರೆ. ಅದೇ ನಕ್ಷೆ ಕಂದಾಯ ಇಲಾಖೆ ಕಚೇರಿಯಲ್ಲಿ ಇಲ್ಲ ಎನ್ನುತ್ತಾರೆ. ತಹಶೀಲ್ದಾರ್ ಹಾಗೂ ಇತರೆ ಅಧಿಕಾರಿಗಳು ನಮ್ಮ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ’ ಎಂದು ಎಲ್.ಜಿ.ಕೃಷ್ಣಪ್ಪ ಅವರು ದೂರಿದ್ದಾರೆ.

ಕೊಲೆ, ಸುಲಿಗೆ: ರೌಡಿಶೀಟರ್ ಬಂಧನ


ಇರ್ಫಾನ್

ಬೆಂಗಳೂರು: ಹತ್ತು ವರ್ಷಗಳಿಂದ ಸುಲಿಗೆ, ಕೊಲೆ ಪ್ರಯತ್ನ ಸೇರಿದಂತೆ ವಿವಿಧ ಅಪರಾಧ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ ರೌಡಿಶೀಟರ್ ಇರ್ಫಾನ್ ಅಲಿಯಾಸ್ ರಹೀಮುಲ್ಲಾನನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಅಶೋಕನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈತ ರೌಡಿ ಚಟುವಟಿಕೆಯಲ್ಲಿ ಭಾಗಿಯಾಗುತ್ತಿದ್ದ. ಕಳೆದ 10 ವರ್ಷಗಳಲ್ಲಿ ಭಾಗಿಯಾಗಿರುವ ಎಲ್ಲ ಅಪರಾಧ ಪ್ರಕರಣಗಳ ದಾಖಲೆಗಳನ್ನು ಸಂಗ್ರಹಿಸಿ ಪ್ರತಿಬಂಧಕ ಕಾಯ್ದೆ ಅಡಿಯಲ್ಲಿ ಬಂಧಿಸಲು ಸಿಸಿಬಿ ಸಂಘಟಿತ ಅಪರಾಧ ದಳದ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದರು. ಇರ್ಫಾನ್‌ನನ್ನು ಪತ್ತೆಹಚ್ಚಿ ಬಂಧಿಸುವಂತೆ ಆಗಸ್ಟ್ 25ರಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಆದೇಶಿಸಿದ್ದರು ಎಂದು ಮೂಲಗಳು ಹೇಳಿವೆ.

ಇರ್ಫಾನ್ ವಿರುದ್ಧ 15 ಪ್ರಕರಣಗಳು ದಾಖಲಾಗಿವೆ. ಜಾಮೀನು ಪಡೆದು ಜೈಲಿನಿಂದ ಬಿಡುಗಡೆಯಾದ ಮೇಲೆ 6 ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ನ್ಯಾಯಾಲಯದಲ್ಲಿ ಈತನ ವಿರುದ್ಧ ವಾರಂಟ್‌ಗಳು ಬಾಕಿಯಿದ್ದವು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಅಪಘಾತ: ಪಾದಚಾರಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರು ಡಿಕ್ಕಿಯಿಂದ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪಾದಚಾರಿ ಸುಬ್ರಮಣಿಯನ್ (63) ಎಂಬುವರು ಬುಧವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಜೂನ್ 10ರಂದು ಅಪಘಾತ ನಡೆದಿತ್ತು. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೆಂಗೇರಿ ಉಪನಗರದ ಮುಖ್ಯರಸ್ತೆಯಲ್ಲಿ ಶಿರ್ಕೆ ಕಡೆಯಿಂದ ನಾಗದೇವನಹಳ್ಳಿ ಕಡೆಗೆ ರಸ್ತೆಬದಿಯಲ್ಲಿ ಅಂದು ಬೆಳಿಗ್ಗೆ ನಡೆದು ತೆರಳುತ್ತಿದ್ದರು. ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ಎದುರು ದಿಕ್ಕಿನಿಂದ ಬಂದ ಕಾರು (ಕೆಎ 42 ಎನ್ 9158) ಅವರಿಗೆ ಡಿಕ್ಕಿ ಹೊಡೆದಿತ್ತು. ಅಜಾಗರೂಕತೆಯಿಂದ ಚಾಲಕ ಕಾರನ್ನು ಚಲಾಯಿಸಿದ್ದರಿಂದ ಅಪಘಾತ ನಡೆದಿತ್ತು. ಸುಬ್ರಮಣಿಯನ್ ಅವರಿಗೆ ತಲೆ, ಬಲಗೈ ಹಾಗೂ ಬಲ ಕಾಲಿಗೆ ತೀವ್ರ ಪೆಟ್ಟು ಬಿದ್ದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಮಾರಕಾಸ್ತ್ರಗಳಿಂದ ಹಲ್ಲೆ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದ ರೌಡಿಶೀಟರ್ ಸೇರಿದಂತೆ ಐವರು ಆರೋಪಿಗಳನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗುಟ್ಟೆಪಾಳ್ಯದ ನಿವಾಸಿಗಳಾದ ಅರವಿಂದ್, ರಾಜ, ಶ್ರೀನಿವಾಸ್, ಗಣೇಶ್ ಸೇರಿ ಒಬ್ಬ ಬಾಲಕನನ್ನು ಬಂಧಿಸಲಾಗಿದೆ. ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಭಾನುವಾರ ರಾತ್ರಿ ಹೊಂಬೇಗೌಡ ನಗರದ ಬಾರ್ ಸಮೀಪ ಗಣೇಶ್ ಎಂಬುವವರ ಮೇಲೆ ಆರೋಪಿಗಳು ಹಲ್ಲೆ ನಡೆಸಿದ್ದರು.

‘ಅಂದು ರಾತ್ರಿ ಮುರುಗನ್ ದೇವಸ್ಥಾನದ ಹಬ್ಬದ ಅಂಗವಾಗಿ ಮೆರವಣಿಗೆ ನಡೆಯುತ್ತಿತ್ತು. ನೃತ್ಯ ಮಾಡುತ್ತಿದ್ದ ವೇಳೆ ಯುವತಿಯೊಬ್ಬರನ್ನು ರೇಗಿಸಿದ ವಿಚಾರಕ್ಕೆ ಗಣೇಶ್ ಹಾಗೂ ಆರೋಪಿಗಳ ನಡುವೆ ಗಲಾಟೆ ನಡೆದಿತ್ತು. ಅದಾದ ಮೇಲೆ ಆರೋಪಿಗಳು ಗಣೇಶ್ ಮನೆ ಬಳಿಗೆ ಹೋಗಿ ಎಚ್ಚರಿಕೆ ನೀಡಿ ತೆರಳಿದ್ದರು. ಮದ್ಯ ಸೇವಿಸಲು ಗಣೇಶ್ ಹೊಂಬೇಗೌಡ ನಗರದ ಬಾರ್ ಬಳಿಗೆ ತೆರಳಿದ್ದಾಗ ಆರೋಪಿಗಳು ಹಲ್ಲೆ ನಡೆಸಿ ಪರಾರಿಯಾಗಿದ್ದರು. ಹಲ್ಲೆಯಿಂದ ಅವರು ತೀವ್ರವಾಗಿ ಗಾಯಗೊಂಡಿದ್ದರು’

‘ತಾವು ವಾಸಿಸುತ್ತಿರುವ ಪ್ರದೇಶದಲ್ಲಿ ಪ್ರಾಬಲ್ಯ ಸಾಧಿಸುವ ವಿಚಾರಕ್ಕೆ ಆರೋಪಿಗಳು ಹಾಗೂ ದೂರುದಾರನ ನಡುವೆ ಈ ಹಿಂದೆಯೂ ಗಲಾಟೆಗಳು ನಡೆದಿದ್ದವು. ಅದೇ ವೈಷಮ್ಯದಿಂದ ಮತ್ತೆ ಗಲಾಟೆ ನಡೆದಿದೆ. ಉಳಿದ ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಲಿಸುತ್ತಿದ್ದ ಕಾರಿನಲ್ಲಿ ಬೆಂಕಿ: ಚಲಿಸುತ್ತಿದ್ದ ಕಾರಿನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದೆ.

ಕಬ್ಬನ್‌ಪಾರ್ಕ್ ಪೊಲೀಸ್ ಠಾಣಾ ವ್ಯಾಪ್ತಿಯ ಸಿಟಿಒ ವೃತ್ತದ ಸಮೀಪ ಮಂಗಳವಾರ ರಾತ್ರಿ ಕಾರು ಚಲಿಸುತ್ತಿದ್ದಾಗ ಏಕಾಏಕಿ ಬೆಂಕಿ ಕಾಣಿಸಿಕೊಂಡಿತ್ತು. ಎಚ್ಚೆತ್ತ ಚಾಲಕ ಕಾರನ್ನು ರಸ್ತೆ ಬದಿಗೆ ನಿಲುಗಡೆ ಮಾಡಿ ಕೆಳಗಿಳಿದರು. ನೋಡುತ್ತಿದ್ದಂತೆಯೇ ಕಾರು ಸುಟ್ಟು ಹೋಗಿದೆ. ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಘಟನೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಬ್ಯಾಟರಿಯಲ್ಲಿ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ತಗುಲಿರುವ ಸಾಧ್ಯತೆಯಿದೆ ಎಂದು ಪೊಲೀಸರು ತಿಳಿಸಿದರು. ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿ–2ರಿಂದ ಅಂತರರಾಷ್ಟ್ರೀಯ ವಿಮಾನ ಹಾರಾಟ ಸದ್ಯಕ್ಕಿಲ್ಲ


ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2ರಲ್ಲಿ ಬುಧವಾರದಿಂದ ಆರಂಭವಾಗಬೇಕಿದ್ದ ಅಂತರರಾಷ್ಟ್ರೀಯ ವಿಮಾನಯಾನವನ್ನು ಅನಿರ್ದಿಷ್ಟ ಅವಧಿವರೆಗೆ ಮುಂದೂಡಲಾಗಿದೆ.

ಮುಂದಿನ ಸೂಚನೆ ಬರುವವರೆಗೂ ಮುಂಚಿನಂತೆ ಯಥಾರೀತಿ ಟರ್ಮಿನಲ್–1ರಲ್ಲಿಯೇ ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ಮುಂದುವರೆಯಲಿದೆ ಎಂದು ಬಿಐಎಎಲ್ ಪ್ರಕಟಣೆ ತಿಳಿಸಿದೆ.

ಈ ಮೊದಲು ಬುಧವಾರದಿಂದ (ಆಗಸ್ಟ್ 30) ಅಂತರರಾಷ್ಟ್ರೀಯ ವಿಮಾನ ಸಂಚಾರವನ್ನು ಟರ್ಮಿನಲ್–2 ಗೆ ಸ್ಥಳಾಂತರಿಸಲು ದಿನ ನಿಗದಿ ಮಾಡಲಾಗಿತ್ತು. ಕಾರಣಾಂತರಗಳಿಂದ ಅಂತಿಮ ಕ್ಷಣದಲ್ಲಿ ಸ್ಥಳಾಂತರ ಕಾರ್ಯ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ಶೀಘ್ರ ಘೋಷಿಸಲಾಗುವುದು ಎಂದು ಬಿಐಎಎಲ್ ಹೇಳಿದೆ.

‘ಪ್ರಯಾಣಿಕರಿಗೆ ಸೂಕ್ತ ಮತ್ತು ತಡೆರಹಿತ ಸೇವೆ ಒದಗಿಸುವ ಸಲುವಾಗಿ ಅಂತಿಮ ಸಿದ್ಧತೆಯ ಪರಿಶೀಲನೆಯ ವೇಳೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅನಾನುಕೂಲತೆಗಾಗಿ ವಿಷಾದಿಸುತ್ತೇವೆ’ ಎಂದು ಪ್ರಕಟಣೆ ಹೇಳಿದೆ.



ಪುಸ್ತಕ ಬಿಡುಗಡೆ

ಥಿಂಕರ್ಸ್ ಫೋರಂ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ರಶ್ಮಿ ಸಾಮಂತ್ (ಬಲಗಡೆಯವರು) ಅವರ ‘ಎ ಹಿಂದು ಇನ್ ಆಕ್ಸ್‌ಫರ್ಡ್’ ಪುಸ್ತಕವನ್ನು ಮಣಿಪಾಲ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಟಿ.ವಿ.ಮೋಹನ್ ದಾಸ್ ಪೈ (ಎಡಗಡೆಯವರು) ಲೋಕಾರ್ಪಣೆ ಮಾಡಿದರು. ಶಿಕ್ಷಣ ತಜ್ಞ ಪಿ.ವಿ ಕೃಷ್ಣ ಭಟ್ ಇದ್ದಾರೆ -ಪ್ರಜಾವಾಣಿ ಚಿತ್ರ

700 ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ

‘ಪೊಲೀಸ್ ಮಾರ್ಷಲ್’ಗಳ ಆಯ್ಕೆ

ಪ್ರಜಾವಾಣಿ ವಾರ್ತೆ


ಪೊಲೀಸ್ ಮಾರ್ಷಲ್‌ಗಳಿಗೆ ಪ್ರಮಾಣಪತ್ರ ವಿತರಣೆ ಸಮಾರಂಭದಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಬೆಂಗಳೂರು: ನಗರ ಪೊಲೀಸ್ ಇಲಾಖೆಯ ಈಶಾನ್ಯ ವಿಭಾಗದಲ್ಲಿ ‘ಪೊಲೀಸ್ ಮಾರ್ಷಲ್’ಗಳಾಗಿ 700 ಮಂದಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅವರಿಗೆ ಪ್ರಮಾಣಪತ್ರವಿತರಣೆಮಾಡಲಾಯಿತು.

ಆರೋಹಣ ಸಂಸ್ಥೆ ಹಾಗೂ ಪೊಲೀಸ್ ಇಲಾಖೆ ಸಹಯೋಗದಲ್ಲಿ ಈಶಾನ್ಯ ವಿಭಾಗ ವ್ಯಾಪ್ತಿಯ ಕಾಲೇಜುಗಳಲ್ಲಿ ಈ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ತರಬೇತಿ ನೀಡಲಾಗಿದೆ.

‘ಪೊಲೀಸ್ ಮಾರ್ಷಲ್’ಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, ‘ಮಾದಕ ವಸ್ತುಗಳನ್ನು ಸೇವಿಸಿದರೆ ಅದರಿಂದ ಆಗುವ ದುಷ್ಪರಿಣಾಮ ಕುರಿತು ಮಾರ್ಷಲ್‌ಗಳು ಜಾಗೃತಿ ಮೂಡಿಸಲಿದ್ದಾರೆ. ಬೀದಿ ನಾಟಕದ ಮೂಲಕ ಎಚ್ಚರಿಸಬೇಕು’ ಎಂದು ಹೇಳಿದರು.


‘ಪದವಿ ವಿದ್ಯಾರ್ಥಿಗಳನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ. ಇವರು ಪೊಲೀಸರು ಅಲ್ಲ. ಆದರೆ ಜಾಗೃತಿ ಮೂಡಿಸುವ ಕೆಲಸ ಮಾಡಲಿದ್ದಾರೆ. ಮಾದಕ ವಸ್ತುಗಳ ಬೇಡಿಕೆಯನ್ನೇ ತಗ್ಗಿಸಿದರೆ ಪೂರೈಕೆಯೂ ಕಡಿಮೆಯಾಗಲಿದೆ. ಇದರಿಂದ ಸಮಾಜದ ಸ್ವಾಸ್ಥ್ಯ ಕಾಪಾಡಲು ಸಾಧ್ಯವಾಗಲಿದೆ’ ಎಂದು ಹೇಳಿದರು.

ಪೂರ್ವವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ರಮಣ್ ಗುಪ್ತ ಮಾತನಾಡಿ, ‘ಇದು ಇಲಾಖೆಯ ಅತ್ಯುತ್ತಮ ಕಾರ್ಯಕ್ರಮ. ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಮಾದಕ ವಸ್ತು ಸೇವನೆ ಮಾಡುತ್ತಿದ್ದಾರೆ ಎಂಬ ಆರೋಪವಿದೆ. ಹೀಗಾಗಿ, ವಿದ್ಯಾರ್ಥಿಗಳನ್ನೇ ಬಳಸಿಕೊಂಡು ಜಾಗೃತಿ ಮೂಡಿಸಲಾಗುತ್ತಿದೆ. ಈಶಾನ್ಯ ವಿಭಾಗದಲ್ಲಿ ಯಶಸ್ವಿಯಾದರೆ ರಾಜ್ಯದಾದ್ಯಂತ ಪೊಲೀಸ್ ಮಾರ್ಷಲ್ ವ್ಯವಸ್ಥೆ ಅನುಷ್ಠಾನಕ್ಕೆ ತರುವ ಸಾಧ್ಯತೆಯಿದೆ’ ಎಂದು ಹೇಳಿದರು.

ಡಿಸಿಪಿ ಲಕ್ಷ್ಮಿಪ್ರಸಾದ್, ನಿಮ್ಹಾನ್ಸ್ ನಿರ್ದೇಶಕಿ ಪ್ರತಿಮಾ ಮೂರ್ತಿ ಇದ್ದರು.

ಬೆಂಕಿ ಅವಘಡ: ಮುಖ್ಯ ಎಂಜಿನಿಯರ್ ಸಾವು

ಪ್ರಜಾವಾಣಿ ವಾರ್ತೆ



ಸಿ.ಎಂ. ಶಿವಕುಮಾರ್

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿ ಯಲ್ಲಿರುವ ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಸಂಭವಿಸಿದ ಬೆಂಕಿ ಅನಾಹುತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮುಖ್ಯ ಎಂಜಿನಿಯರ್ ಸಿ.ಎಂ. ಶಿವಕುಮಾರ್ (45) ಅವರು ಬುಧವಾರಮೃತಪಟ್ಟರು.

ಆಗಸ್ಟ್ 11ರಂದು ಬೆಂಕಿ ಅನಾಹುತ ಸಂಭವಿಸಿತ್ತು. ಅಂದಿನಿಂದಲೂ ತೀವ್ರ ನಿಗಾ ಘಟಕದಲ್ಲೇ ಶಿವಕುಮಾರ್ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಉಸಿರಾಟದ ತೀವ್ರ ಸಮಸ್ಯೆ ಎದುರಿಸುತ್ತಿದ್ದ ಅವರಿಗೆ ವಿಕ್ಟೋರಿಯಾದಲ್ಲಿ 10 ದಿನ ಚಿಕಿತ್ಸೆ ನೀಡಲಾಗಿತ್ತು. ಆ.21ರಂದು ಶೇಷಾದ್ರಿಪುರದಲ್ಲಿರುವ ಅಪೊಲೊ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಸೇರಿಸಲಾಗಿತ್ತು.

‘ಸುಟ್ಟಗಾಯಗಳಿಂದ ಉಸಿರಾಟದ ಸಮಸ್ಯೆ ಹೆಚ್ಚಾಗಿತ್ತು. ಜೊತೆಗೆ ಬಹು ಅಂಗಾಂಗಳ ವೈಫಲ್ಯದಿಂದ ಶಿವಕುಮಾರ್ ಅವರು ಆ.30ರಂದು ಸಂಜೆ 6.59ಕ್ಕೆ ಮೃತಪಟ್ಟರು’ ಎಂದು ಶೇಷಾದ್ರಿಪುರದ ಅಪೊಲೊ ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಹುಟ್ಟೂರು ನಂಜನಗೂಡಿನ ಚಂದ್ರವಾಡಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದರು.

ಶಿವಕುಮಾರ್ ಸೇರಿದಂತೆ ಒಂಬತ್ತು ಮಂದಿ ಈ ಅವಘಡದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಆಪರೇಟರ್ ಜ್ಯೋತಿ ಅವರಿಗೆ ಅಪೊಲೊ ಆಸ್ಪತ್ರೆ ಯಲ್ಲೇ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದ ಏಳು ಮಂದಿಗೆ ವಿಕ್ಟೋರಿಯಾದಲ್ಲಿ ಚಿಕಿತ್ಸೆ ನೀಡಲಾಗಿತ್ತು. ಅವರೆಲ್ಲ ಪಿಎಂಎಸ್‌ಎಸ್‌ವೈ ಆಸ್ಪತ್ರೆಯ ವಾರ್ಡ್‌ನಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ.

2005ರಿಂದ: ಶಿವಕುಮಾರ್ ಅವರ ಹುಟ್ಟಿದ್ದು ನಂಜನಗೂಡಿನಲ್ಲಿ. ಬಿ.ಇ ಪದವೀಧರರಾದ ಅವರು 2005ರಲ್ಲಿ ಬಿಬಿಎಂಪಿಗೆ ಸೇರಿದ್ದರು. ರಾಜರಾಜೇಶ್ವರಿನಗರದಲ್ಲಿ ವಾಸವಿದ್ದ ಅವರು ಬೃಹತ್ ನೀರುಗಾಲುವೆ ವಿಭಾಗದ ಅಧೀಕ್ಷಕ ಎಂಜಿನಿಯರ್, ಗುಣ ನಿಯಂತ್ರಣ ವಿಭಾಗದ ಮುಖ್ಯ ಎಂಜಿನಿಯರ್ ಆಗಿದ್ದರು. ಪತ್ನಿ ಉಮಾ ಮಹೇಶ್ವರಿ, ಪುತ್ರಿಯರಾದ 12 ವರ್ಷದ ವಿಭಾ ನಿಧಿ ಶಿವಂ, 10 ವರ್ಷದ ನಿರ್ವಿ ನೇಹ ಶಿವಂ ಇದ್ದಾರೆ.



ಬಿಬಿಎಂಪಿ ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಆಗಸ್ಟ್ 11ರಂದು ಸಂಭವಿಸಿದ್ದ ಬೆಂಕಿ ಅವಘಡ

ಪ್ರಾರ್ಥನೆ ಫಲ ನೀಡಲಿಲ್ಲ: ‘ಮುಖ್ಯ ಇಂಜಿನಿಯರ್ ಶಿವಕುಮಾರ್ ಅವರ ಅಗಲಿಕೆ ಸುದ್ದಿ ಕೇಳಿ ಬೇಸರವಾಗಿದೆ. ಕೆಲ ದಿನಗಳ ಹಿಂದಷ್ಟೇ ನಾನು ಆಸ್ಪತ್ರೆಗೆ ಭೇಟಿ ನೀಡಿ ಅವರ ಆರೋಗ್ಯ ವಿಚಾರಿಸಿದ್ದೆ. ವೈದ್ಯರು ಉತ್ತಮ ಚಿಕಿತ್ಸೆ ನೀಡಿದರೂ ಅವರ ಸ್ಥಿತಿ ಚಿಂತಾಜನಕವಾಗಿತ್ತು. ನಮ್ಮ ಪ್ರಾರ್ಥನೆ ಫಲ ನೀಡಲಿಲ್ಲ. ಚಿಕ್ಕ ವಯಸ್ಸಿನಲ್ಲಿ ಈ ಅವಘಡದಿಂದ ಪ್ರಾಣ ಕಳೆದುಕೊಂಡಿರುವುದು ಮನಸ್ಸಿಗೆ ನೋವು ಉಂಟು ಮಾಡಿದೆ’ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

‘ವಿಕ್ಟೋರಿಯಾ, ಅಪೊಲೊ ಆಸ್ಪತ್ರೆ ವೈದ್ಯರು ಹೆಚ್ಚಿನ ರೀತಿಯನ್ನು ಕಾಳಜಿ ವಹಿಸಿ ಚಿಕಿತ್ಸೆ ನೀಡಿದ್ದರು. ಬೆಂಕಿ ಅವಘಡದ ಸಂದರ್ಭದಲ್ಲಿ ಇತರರನ್ನು ರಕ್ಷಿಸಲು ಶಿವಕುಮಾರ್ ಸಾಕಷ್ಟು ಪ್ರಯತ್ನ ಪಟ್ಟಿದ್ದರು. ಪರಿಹಾರ ವಿತರಣೆ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪರಿಹಾರಕ್ಕೆ ಮನವಿ: ‘ಮುಖ್ಯ ಎಂಜಿನಿಯರ್ ಕುಟುಂಬಕ್ಕೆ ಬಿಬಿಎಂಪಿ ವತಿಯಿಂದ ಹೆಚ್ಚಿನ ಪರಿಹಾರ ನೀಡಬೇಕು. ಇದನ್ನು ಶೀಘ್ರ ವಿತರಿಸಬೇಕು.

ಅಲ್ಲದೆ, ಚಿಕಿತ್ಸೆ ಪಡೆಯುತ್ತಿರುವ ಎಲ್ಲರಿಗೂ ₹10 ಲಕ್ಷ ಪರಿಹಾರ ನೀಡಬೇಕು. ಜೊತೆಗೆ ಅವರು ಶೇ 100ರಷ್ಟು ಚೇತರಿಸಿಕೊಳ್ಳುವವರೆಗೂ ವಿಶೇಷ ರಜೆ ನೀಡಬೇಕು. ಎಲ್ಲರಿಗೂ ಸಂಪೂರ್ಣ ಚಿಕಿತ್ಸೆ ವೆಚ್ಚವನ್ನು ಪಾಲಿಕೆ ವತಿಯಿಂದಲೇ ಭರಿಸಬೇಕು’ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಮನವಿ ಮಾಡಿದ್ದಾರೆ.

ದಟ್ಟ ಹೊಗೆ: ಪ್ರಯೋಗಾಲಯದಲ್ಲಿ ಆ.11ರಂದು ಬಿಟುಮಿನ್ ಪರೀಕ್ಷೆ ಮಾಡುವಾಗ, ಬೆಂಜೀನ್ ಹಾಕಿ, ಸ್ವಚ್ಛಗೊಳಿಸುವ ಸಂದರ್ಭದಲ್ಲಿ ರಾಸಾಯನಿಕ ಸೋರಿ ಬೆಂಕಿ ಕಾಣಿಸಿಕೊಂಡಿತ್ತು. ಕ್ಷಣದಲ್ಲಿ ಅದು ಬೃಹತ್ ಪ್ರಮಾಣದಲ್ಲಿ ಹರಡಿಕೊಂಡಿದ್ದರಿಂದ ಸಿಬ್ಬಂದಿಗೆ ಕೂಡಲೇ ಹೊರಬರಲು ಸಾಧ್ಯವಾಗಿರಲಿಲ್ಲ. ಸುಮಾರು ಅರ್ಧ ತಾಸು ಅಲ್ಲೇ ಒಳಗೆ ಇದ್ದರು. ದಟ್ಟವಾದ ಹೊಗೆ ಆವರಿಸಿತ್ತು. ಹೀಗಾಗಿ ಹೆಚ್ಚು ಹೊಗೆ ಸೇವಿಸಿದ್ದರು. ಬೆಂಕಿಯಲ್ಲೇ ಹೊರಗೆ ಬರುವಾಗ ಹೆಚ್ಚಿನ ಗಾಯಗಳಾಗಿದ್ದವು.

ಸಿಬ್ಬಂದಿ ರಕ್ಷಿಸಿದ್ದ ಶಿವಕುಮಾರ್

ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಸಂಭವಿಸಿದ ಬೆಂಕಿ ಅವಘಡದಲ್ಲಿ ಒಂಬತ್ತು ಮಂದಿ ಸಿಲುಕಿದ್ದಾಗ, ಎಂಟು ಮಂದಿಯನ್ನು ಕೊಠಡಿಯಿಂದ ಬೇಗ ಹೊರಗೆ ಕಳುಹಿಸಲು ಮುಖ್ಯ ಎಂಜಿನಿಯರ್ ಶಿವಕುಮಾರ್ ಪ್ರಯಾಸ ಪಟ್ಟಿದ್ದರು.

‘ಎಂಟೂ ಮಂದಿ ಹೊರಗೆ ಹೋದ ಮೇಲೆ ಕೊನೆಯದಾಗಿ ಹೊರಗೆ ಬಂದಿದ್ದ ಶಿವಕುಮಾರ್ ಆಗಲೇ ಸಾಕಷ್ಟು ಹೊಗೆ ಸೇವಿಸಿ, ಗಾಯಗೊಂಡಿದ್ದರು. ಈಗ ಅವರನ್ನು ನಾವು ಕಳೆದುಕೊಂಡಿದ್ದೇವೆ...’

ಹೀಗೆಂದು ಹೇಳುವಾಗ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಗದ್ಗದಿತರಾದರು.

ಬಿಬಿಎಂಪಿ: ಎಂಟು ವಲಯ ವ್ಯಾಪ್ತಿಯಲ್ಲಿ ವಿಲೇವಾರಿಯಾಗಿಲ್ಲ

‘ಸಕಾಲ’ದಲ್ಲೇ ಉಳಿದ ಟ್ರೇಡ್ ಲೈಸೆನ್ಸ್ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ವ್ಯಾಪಾರ ಪರವಾನಗಿ (ಟ್ರೇಡ್ ಲೈಸೆನ್ಸ್) ನೀಡುವ ಪ್ರಕ್ರಿಯೆ ‘ಸಕಾಲ’ ಅವಧಿ ಮೀರಿದ್ದರೂ ಪೂರ್ಣಗೊಂಡಿಲ್ಲ. ಎಂಟು ವಲಯಗಳ ಆರೋಗ್ಯಾಧಿ ಕಾರಿಗಳ ವಿಭಾಗದಲ್ಲಿ 455 ಅರ್ಜಿಗಳು ವಿಲೇವಾರಿಯಾಗಿಲ್ಲ.

ರಾಜರಾಜೇಶ್ವರನಗರದಲ್ಲಿ ಅತಿಹೆಚ್ಚು ಟ್ರೇಡ್ ಲೈಸೆನ್ಸ್ ಅರ್ಜಿಗಳು ಬಾಕಿ ಉಳಿದಿವೆ. ಪೂರ್ವ ವಲಯದಲ್ಲೂ ಹೆಚ್ಚು ಅರ್ಜಿಗಳು ಸಕಾಲದಲ್ಲಿ ಬಾಕಿ ಉಳಿದಿದ್ದರೂ ಆರೋಗ್ಯ ಅಧಿಕಾರಿಗಳು ‘ಸಾಫ್ಟ್‌ವೇರ್ ಸರಿಯಿಲ್ಲ, ಪೋರ್ಟಲ್ ಸರಿಯಿಲ್ಲ. ಡೀಮ್ಡ್ ಟು ಅಪ್ರೂವ್ಡ್ ಕೂಡ ಬಾಕಿಯಲ್ಲಿ ತೋರಿಸುತ್ತಿದೆ’ ಎಂದು ಸಬೂಬು ಹೇಳುತ್ತಿದ್ದಾರೆ.

‘ಬಿಬಿಎಂಪಿ ಪೋರ್ಟಲ್ ಹಾಗೂ ಸಾಫ್ಟ್‌ವೇರ್‌ನಲ್ಲಿ ಯಾವುದೇ ತೊಂದರೆ ಇಲ್ಲ. ಬಾಕಿಗಳನ್ನು ಸಂಬಂಧಿಸಿದ ಅಧಿಕಾರಿಗೇ ವಿಲೇವಾರಿ ಮಾಡಬೇಕು’ ಎಂದು ಬಿಬಿಎಂಪಿ ಐಟಿ ವಿಭಾಗದ ನಾಗೇಶ್ ಹೇಳಿದರು.

‘ಸರ್ವರ್ ಸಮಸ್ಯೆಯಿಂದ ಒಂದೆರಡು ತಿಂಗಳಿಂದ ಅರ್ಜಿಗಳು ಬಾಕಿ ಉಳಿದಿವೆ. ಇವುಗಳನ್ನು ಕೆಲವು ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತದೆ’ ಎಂದು ರಾಜರಾಜೇಶ್ವರಿ ಆರೋಗ್ಯ ವೈದ್ಯಾಧಿ ಕಾರಿ (ಎಂಒಎಚ್) ಡಾ. ದೇವಿಕಾರಾಣಿ ತಿಳಿಸಿದರು.

‘ಯಲಹಂಕದಲ್ಲಿ ಕೆಲವು ಕಾರಣಗಳಿಂದ ಅರ್ಜಿಗಳು ಬಾಕಿ ಉಳಿದಿವೆ. ಇವುಗಳನ್ನು ಪರಿಶೀಲಿಸಿ ಕ್ರಮಕೈಗೊಳ್ಳಲಾಗುತ್ತದೆ’ ಎಂದು ಎಂಒಎಚ್ ಡಾ. ಸುರೇಶ್ ರುದ್ರಪ್ಪ ಹೇಳಿದರು.

‘ಶಾಂತಿನಗರದಲ್ಲಿ ಹಿಂದಿನ 5 ಅರ್ಜಿಗಳು ಬಾಕಿ ಇವೆ. ಇದನ್ನು ಆರ್‌ಒಗಳು ವಿಲೇವಾರಿ ಮಾಡಬೇಕು. ಸಿ.ವಿ. ರಾಮನ್ ನಗರದಲ್ಲಿ 54 ಅರ್ಜಿಗಳು ಬಾಕಿ ಇದ್ದು, ಇವುಗಳ ಸ್ಥಿತಿಯನ್ನು ಪರಿಶೀಲಿಸ ಬೇಕಿದೆ. ಯಾವುದರಿಂದ ತಡೆ ಯಾಗಿದೆ ಎಂಬುದನ್ನು ತಿಳಿದು, ಬಗೆಹರಿಸಲಾಗುವುದು’ ಎಂದು ಎಂಒಎಚ್ ಡಾ.ಶ್ರೀನಿವಾಸ್ ಅವರು ತಿಳಿಸಿದರು.

‘ಲೋಕಾಯುಕ್ತ ತನಿಖೆಯಾಗಲಿ’: ‘ಟ್ರೇಡ್ ಲೈಸೆನ್ಸ್ ಅರ್ಜಿಗಳು ಬಾಕಿ ಇರುವ ಪಟ್ಟಿ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದ್ದು, ಲೋಕಾಯುಕ್ತರು ಇತ್ತ ಗಮನಹರಿಸಿ, ಆರೋಗ್ಯಾಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಲಾಗುತ್ತಿದೆ.

‘ಬಿಬಿಎಂಪಿಯ ಕಂದಾಯ ವಿಭಾಗದ ಕಚೇರಿಗಳ ಮೇಲೆ ಲೋಕಾಯುಕ್ತರೇ ಇತ್ತೀಚೆಗೆ ದಾಳಿ ಮಾಡಿ ಕಡತಗಳ ವಿಲೇವಾರಿ ಬಗ್ಗೆ ಪರಿಶೀಲಿಸಿದ್ದರು. ಅದೇ ರೀತಿ ಆರೋಗ್ಯ ವಿಭಾಗದಲ್ಲಿ ‘ಸಕಾಲ’ದ ಅರ್ಜಿಗಳೇ ವಿಲೇವಾರಿಯಾಗುತ್ತಿಲ್ಲ. ಇದನ್ನು ತನಿಖೆ ಮಾಡಬೇಕು’ ಎಂಬ ಮನವಿ ಹರಿದಾಡುತ್ತಿದೆ.

ಟ್ರೇಡ್ ಲೈಸೆನ್ಸ್ ಅರ್ಜಿ ಬಾಕಿ ವಿವರ

ರಾಜರಾಜೇಶ್ವರಿನಗರ ವಲಯ	**130**	**ದಕ್ಷಿಣ ವಲಯ**	**79**
ಆರ್.ಆರ್. ನಗರ	101	ವಿಜಯನಗರ	23
ಯಶವಂತಪುರ	29	ಬಸವನಗುಡಿ	20
ಪೂರ್ವ ವಲಯ	**121**	ಚಿಕ್ಕಪೇಟೆ	14
ಸಿ.ವಿ. ರಾಮನ್ ನಗರ	54	ಜಯನಗರ	14
ಶಿವಾಜಿನಗರ	23	ಬಿಟಿಎಂ ಲೇಔಟ್	6
ಸರ್ವಜ್ಞನಗರ	17	ಪದ್ಮನಾಭನಗರ	2
ಹೆಬ್ಬಾಳ	16	**ಪಶ್ಚಿಮ ವಲಯ**	**42**
ಪುಲಕೇಶಿನಗರ	6	ಗೋವಿಂದರಾಜನಗರ	17
ಶಾಂತಿನಗರ	5	ಗಾಂಧಿನಗರ	15
ದಾಸರಹಳ್ಳಿ ವಲಯ	**10**	ಚಾಮರಾಜಪೇಟೆ	5
ಬೊಮ್ಮನಹಳ್ಳಿ ವಲಯ	**4**	ರಾಜಾಜಿನಗರ	4
ಬೆಂಗಳೂರು ದಕ್ಷಿಣ	3	ಮಲ್ಲೇಶ್ವರ	1
ಬೊಮ್ಮನಹಳ್ಳಿ	1	**ಮಹದೇವಪುರ ವಲಯ**	**14**
ಯಲಹಂಕ ವಲಯ	**55**	ಮಹದೇವಪುರ	5
		ಕೆ.ಆರ್. ಪುರ	9



ಬಿಡಿಸಿಸಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಎಂ.ಡಿ. ವಿಜಯದೇವ್ ಅವರನ್ನು ವಿಧಾನ ಪರಿಷತ್ ಸದಸ್ಯ ಎಸ್‌.ರವಿ, ನಿರ್ದೇಶಕರಾದ ಪಟ್ಟಾಭಿರಾಮಯ್ಯ, ಚುಂಚೇಗೌಡ, ಕೃಷ್ಣಮೂರ್ತಿ, ರಮೇಶ್, ಎಸ್‌.ಮೆಹಬೂಬ್ ಅಭಿನಂದಿಸಿದರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲಾ ಕೇಂದ್ರ ಸಹಕಾರ (ಬಿಡಿಸಿಸಿ ಬ್ಯಾಂಕ್) ಕೇಂದ್ರ ಬ್ಯಾಂಕ್ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಎಂ.ಡಿ. ವಿಜಯದೇವ್ ಅವಿರೋಧವಾಗಿ ಆಯ್ಕೆಯಾದರು.

ಬೆಂಗಳೂರು ನಗರ ಜಿಲ್ಲೆ ಸಹಕಾರ ಸಂಘಗಳ ಉಪನಿಬಂಧಕ ಎಂ.ಪಿ. ಮಂಜುನಾಥ್ ಚುನಾವಣಾಧಿಕಾರಿ ಯಾಗಿ ಕಾರ್ಯ ನಿರ್ವಹಿಸಿದರು. ಅಧ್ಯಕ್ಷರ ಅವಧಿ ಡಿಸೆಂಬರ್ 2025ರ ವರೆಗೆ ಇರಲಿದೆ.

ನೂತನ ಅಧ್ಯಕ್ಷರನ್ನು ವಿಧಾನ ಪರಿಷತ್ ಸದಸ್ಯ ಎಸ್.ರವಿ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಡಿ. ಹನುಮಂತಯ್ಯ ಬ್ಯಾಂಕ್ ಉಪಾಧ್ಯಕ್ಷ ಮಂಜು ವೈ.ಎಚ್, ನಿರ್ದೇಶಕರಾದ ಪಟ್ಟಾಭಿರಾಮಯ್ಯ, ನಾರಾಯಣಪ್ಪ, ಚುಂಚೇಗೌಡ, ಎಸ್. ಮೆಹಬೂಬ್, ಕೃಷ್ಣಮೂರ್ತಿ, ರಮೇಶ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ. ರಾಜಣ್ಣ ಅಭಿನಂದಿಸಿದರು.

ಕಾರ್ಮಿಕರ ದಹನ: ತನಿಖೆಗೆ ಬೊಮ್ಮಾಯಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾವೇರಿ ತಾಲ್ಲೂಕಿನ ಆಲದಕಟ್ಟೆ ಗ್ರಾಮದ ಪಟಾಕಿ ಸಿಡಿಮದ್ದು ಗೋದಾಮಿನಲ್ಲಿ ನಾಲ್ವರು ಕಾರ್ಮಿಕರು ದಹನವಾಗಿರುವ ಘಟನೆಗೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸುವಂತೆ ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಒತ್ತಾಯಿಸಿದ್ದಾರೆ.

ಮೃತಪಟ್ಟವರ ಕುಟುಂಬಗಳಿಗೆ ತಕ್ಷಣವೇ ಸೂಕ್ತ ಪರಿಹಾರವನ್ನು ನೀಡಬೇಕು ಎಂದು ಆಗ್ರಹಿಸಿದರು.

ಈ ರೀತಿಯ ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ರಕ್ಷಣೆಗೆ ಅಗತ್ಯವಿರುವ ಮುಂಜಾಗ್ರತಾ ಕ್ರಮಗಳ ಕುರಿತು ಅಧಿಕಾರಿಗಳು ನಿಗಾವಹಿಸಬೇಕು. ಹಾವೇರಿ ಜಿಲ್ಲೆ ಹಾಗೂ ರಾಜ್ಯದಲ್ಲಿ ಈ ರೀತಿಯ ಪಟಾಕಿ ಸಿಡಿಮದ್ದು ದಾಸ್ತಾನು ಕೇಂದ್ರಗಳ ಕುರಿತು ಪರಿಶೀಲನೆ ನಡೆಸಿ ಕಾರ್ಮಿಕರಿಗೆ ಸೂಕ್ತ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದೂ ಒತ್ತಾಯಿಸಿದರು.

ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ರಾಜ್ಯ ಬಿಜೆಪಿ ವತಿ ಯಿಂದ ತಲಾ ₹1 ಲಕ್ಷ ಪರಿಹಾರ ನೀಡಲಾಗುವುದು ಎಂದರು.

ಚಿತ್ರಾವಳಿ



ಒಕ್ಕಲಿಗ ಸ್ವಯಂಸೇವಕರ ಸಂಘ (ವಿಎಸ್‌ಎಸ್) ಕರ್ನಾಟಕ, ಬಿರ್ಸಾಮುಂಡಾ ಟ್ರೈಬಲ್ ಕಮ್ಯುನಿಟಿ ಡೆವಲಪ್‌ಮೆಂಟ್ ಆ್ಯಂಡ್ ರಿಸರ್ಚ್ ಪರಿಷತ್ತು, ಆದಿಚುಂಚನಗಿರಿ ಸಂಸ್ಥಾನದ ವಿಜಯನಗರ ಶಾಖಾ ಮಠ, ರಾಜ್ಯ ಯುವಸಂಘಗಳ ಒಕ್ಕೂಟ, ಅಡ್ಡಬೀದಿ ಸಿದ್ದೇಗೌಡ ಸ್ಮಾರಕ ಅವ್ವನ ಮಡಿಲು ಟ್ರಸ್ಟ್, ಕದಂಬ ಪ್ರಕಾಶನ ಮತ್ತು ವಂಶಿ ಪಬ್ಲಿಕೇಶನ್ ವತಿಯಿಂದ ಮನುವನ ಆದಿಚುಂಚನಗಿರಿ ಶಾಖಾಮಠದ ಆವರಣದಲ್ಲಿ ಬುಧವಾರ ಹನಿಯೂರು ಚಂದ್ರೇಗೌಡ ಅವರ ‘ನೂರೊಂದು ಜನಪದ ಹಾಡುಗಬ್ಬಗಳು’ ಹಾಗೂ ‘ವಿಚಾರ–ವಿಹಾರ’ ಕೃತಿಗಳನ್ನು ಆದಿಚುಂಚನಗಿರಿ ಪೀಠದ ನಿರ್ಮಲಾನಂದನಾಥ ಸ್ವಾಮೀಜಿ ಬಿಡುಗಡೆ ಮಾಡಿದರು. ಶಾಖಾಮಠದ ಸೌಮ್ಯನಾಥ ಸ್ವಾಮೀಜಿ , ನ್ಯಾಷನಲ್ ಆರ್ಕೈವ್ ಆಫ್ ಇಂಡಿಯಾ ಸಮಿತಿಯ ಆರ್‌.ಜಿ. ಸೋಮಶೇಖರ್, ನಿವೃತ್ತ ಕುಲಪತಿ ಹಿ.ಚಿ. ಬೋರಲಿಂಗಯ್ಯ, ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಜಾನಪದ ಎಸ್‌. ಬಾಲಾಜಿ, ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಇದ್ದರು.



ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆಯ ಆವರಣದಲ್ಲಿ ಸಂಸ್ಥಾಪಕರ ದಿನಾಚರಣೆ ಬುಧವಾರ ನಡೆಯಿತು. ಶಂಕರ್ ಕ್ಯಾನ್ಸರ್ ಆಸ್ಪತ್ರೆಯ ಸರ್ಜಿಕಲ್ ಆ್ಯಂಕಾಲಜಿ ವಿಭಾಗ ಮುಖ್ಯಸ್ಥ ಡಾ. ಬಿ.ಎಸ್‌. ಶ್ರೀನಾಥ್, ಕಾರ್ಗಿಲ್ ಯೋಧ ಕ್ಯಾಪ್ಟನ್ ನವೀನ್ ನಾಗಪ್ಪ, ಕೆರೆ ಸಂರಕ್ಷಕ ಆನಂದ ಮಲ್ಲಿಗೆವಾಡ, ಇಂಡಿಯನ್ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕಿ ರೀನಾ ಶ್ಯಾಂ, ಪ್ರಾಂಶುಪಾಲ ಡಾ. ತಿಲಗಾ, ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಸೂರ್ಯ ನಾರಾಯಣ, ಸಂಸ್ಥಾಪಕ ಟಿ. ಸೋಮಶೇಖರ್ ಇದ್ದರು.


ಅನುಷ್ಠಾನ ವೇದಾಂತದ ಆಚಾರ್ಯ

• ಎಸ್. ಸೂರ್ಯಪ್ರಕಾಶ ಪಂಡಿತ್

ನಾರಾಯಣ ಗುರು ಜಯಂತಿ ಇಂದು

ಭಾರತೀಯ ಆಧ್ಯಾತ್ಮಿಕ ಪರಂಪರೆಗೆ ಸಾವಿರಾರು ವರ್ಷಗಳ ಇತಿಹಾಸವಿರುವುದು ನಮಗೆ ತಿಳಿದೇ ಇದೆ. ಅಧ್ಯಾತ್ಮದ ಉದ್ದೇಶವೇ ಅಂತರಂಗದ ಯಾನ. ಮನುಷ್ಯನ ದಿಟವಾದ ನೆಲೆ-ಬೆಲೆಗಳನ್ನು ಕುರಿತ ಆಳವಾದ ಚಿಂತನೆಯೇ ಅಧ್ಯಾತ್ಮದ ವಿಷಯ. ಮನುಷ್ಯನ ಅರಿವು, ಇರವು, ನಲವುಗಳ ಜಿಜ್ಞಾಸೆ ನಮ್ಮ ದೇಶದಲ್ಲಿ ನಿರಂತರವಾಗಿ ನಡೆಯುತ್ತಲೇ ಬಂದಿದೆ. ನಮ್ಮ ಕಾಲದಲ್ಲೂ ಇದು ಮುಂದುವರೆದಿದೆಯೆನ್ನಿ! ಹೀಗೆ ನಮ್ಮ ಕಾಲದಲ್ಲಿ ಅಧ್ಯಾತ್ಮದ ಬೆಳಕನ್ನು ಕಾಣಿಸಿದ ಪ್ರಮುಖರಲ್ಲಿ ನಾರಾಯಣ ಗುರುಗಳೂ (1854-1928) ಒಬ್ಬರು. ಆಧ್ಯಾತ್ಮಿಕತೆಗೆ ಸಮಾಜ ಸುಧಾರಣೆಯ ಹೃದಯ ಅಥವಾ ಸಮಾಜ ಸುಧಾರಣೆಗೆ ಆಧ್ಯಾತ್ಮಿಕತೆಯ ಪ್ರಜ್ಞೆ ಸೇರಿಕೊಂಡು ಮೂಡಿದ ವಿಗ್ರಹರೂಪ ಅವರು. ಉಪನಿಷತ್ತುಗಳು ಪ್ರತಿಪಾದಿಸಿದ ಬ್ರಹ್ಮತತ್ತ್ವವನ್ನು ಎತ್ತಿಹಿಡಿದವರು ಶಂಕರಾಚಾರ್ಯರು. ಅವರು ಪ್ರತಿಪಾದಿಸಿದ ಸಿದ್ಧಾಂತವೇ 'ಅದ್ವೈತ' ಎಂಬ ಹೆಸರನ್ನು ಪಡೆಯಿತು. ಈ ಅದ್ವೈತದ ಬೆಳಕಿನಲ್ಲಿಯೇ ನಾರಾಯಣ ಗುರುಗಳು ಕೂಡ ತಮ್ಮ ದಾರ್ಶನಿಕತೆಯನ್ನು ಪ್ರತಿಪಾದಿಸಿದರು.

ಬ್ರಹ್ಮತತ್ತ್ವದ ಪ್ರತಿಪಾದನೆಯನ್ನು ಹೆಚ್ಚು ಸ್ಫುಟವಾಗಿ ಕಾಣುವುದು ಉಪನಿಷತ್ತುಗಳಲ್ಲಿ. ಅಲ್ಲಿಂದ ಮೊದಲಾಗಿ ಹಲವರು ದಾರ್ಶನಿಕರು ತಮ್ಮ ಸಿದ್ಧಾಂತವನ್ನು ಬ್ರಹ್ಮತತ್ತ್ವದ ಬೆಳಕಿನಲ್ಲಿಯೇ ಕಾಣಿಸಿದ್ದಾರೆ. ಈ ಎಲ್ಲ ಆಚಾರ್ಯರ ಕಾಣ್ಕೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿರುವುದೂ ಸ್ಪಷ್ಟ. ಈ ಬ್ರಹ್ಮತತ್ತ್ವವಾದರೂ ಅನುಭವದ ನೆಲೆಯಲ್ಲಿ ತೋರಿಕೊಳ್ಳುವಂಥ ತಾತ್ವಿಕತೆಯೇ ಹೌದು. ಈ ದೃಷ್ಟಿಯಿಂದ ನೋಡಿದಾಗ ನಾರಾಯಣ ಗುರುಗಳ ಕಾಣ್ಕೆಗೆ ಅನುಭವದ ವಿಶೇಷ ಹೊಳಪು ಇರುವುದನ್ನು ಗಮನಿಸಬಹುದು.



ಇರುವುದೇ ಒಂದೇ ವಸ್ತು; ಅದುವೇ ಬ್ರಹ್ಮ. ಇದುವೇ ಬ್ರಹ್ಮತತ್ತ್ವವಾದ ತಿರುಳು; ಅದ್ವೈತದ ಸಂದೇಶ. ಆದರೆ ಇದು ಕೇವಲ ಒಂದು ಬೌದ್ಧಿಕ ಘೋಷಣೆಯಾದರೆ ಪ್ರಯೋಜನವಿರದು; ಇದು ಅಂತರಂಗದ ಸಾಕ್ಷಾತ್ಕಾರದಿಂದ ಸಿದ್ಧವಾಗಬೇಕಾದ ಅರಿವು ಎಂಬುದು ನಾರಾಯಣ ಗುರುಗಳ ನಿಲುವು. ಎಲ್ಲೆಲ್ಲೂ ಎಲ್ಲರಲ್ಲೂ ಒಂದೇ ವಸ್ತುವನ್ನು ಕಾಣುವಂಥ ಅನುಭವ ದಕ್ಕಿದಾಗ ಜಗತ್ತಿನಲ್ಲಿ ಭೇದಭಾವಕ್ಕೆ ಅವಕಾಶವಾದರೂ ಎಲ್ಲಿರುತ್ತದೆ – ಎಂಬುದು ಅವರ ಪ್ರಶ್ನೆ. ಹೀಗೆ ಅವರು ಸಮಾಜದಲ್ಲಿ ಸಾಧಿಸಿದ, ಶಾಶ್ವತವಾಗಿ ಉಳಿಯಬೇಕೆಂದು ಬಯಸಿದ ಸಮಾನತೆಗೆ ಮೂಲವಾಗಿರುವುದೇ ಬ್ರಹ್ಮತತ್ತ್ವ. ಬ್ರಹ್ಮಾನುಭವವು ನಮ್ಮ ನಿತ್ಯದ ಅನುಭವಕ್ಕೂ ಎಟಕುವಂತಿರಬೇಕು ಎಂದು ಆಶಿಸಿದವರು, ಅದರಂತೆ ಬಾಳಿದವರು; ಇತರರನ್ನೂ ಅದಕ್ಕೆ ತಕ್ಕಂತೆ ರೂಪಿಸಲು ಉಪಕ್ರಮಿಸಿದವರು ಅವರು. ಹೀಗಾಗಿ ನಾರಾಯಣ ಗುರುಗಳನ್ನು 'ಅನುಷ್ಠಾನ ವೇದಾಂತಿ' ಎಂದು ಕರೆಯಬಹುದು. ಸಮಾಜದಲ್ಲಿಯ ಹಲವು ಅನಿಷ್ಟಗಳಿಗೆ ಧರ್ಮವೇ ಕಾರಣವಾಗಿರುವಾಗ, ಅದೇ ಧರ್ಮ ಅವುಗಳಿಗೆ ಪರಿಹಾರವನ್ನೂ ನೀಡಬಲ್ಲದು – ಎಂಬ ಅಪೂರ್ವ ಕಾಣ್ಕೆಯಿಂದ ಸಮಾಜದ ಕೊಳೆಯನ್ನು ಕಳೆಯಲು ತೊಡಗಿದ ಮಹಾಪುರುಷ ಅವರು.

ಬಾದರಾಯಣರು ವೇದಾಂತ ಸೂತ್ರಗಳನ್ನು ರಚಿಸಿದ್ದಾರೆ. ಈ ಸೂತ್ರಗಳಿಗೆ ಶಂಕರಾಚಾರ್ಯರೂ ರಾಮಾನುಜಾಚಾರ್ಯರೂ ಮಧ್ವಾಚಾರ್ಯರೂ ಭಾಷ್ಯಗಳನ್ನು ಬರೆದು ತಮ್ಮ ಸಿದ್ಧಾಂತಗಳನ್ನು ನಿರೂಪಿಸಿದ್ದಾರೆ. ನಾರಾಯಣ ಗುರುಗಳು ಸ್ವತಃ ತಾವೇ 'ವೇದಾಂತ-ಸೂತ್ರ'ಗಳನ್ನು ರಚಿಸಿದರು. 'ಬ್ರಹ್ಮವೇ ನಾನು' ಎಂಬ ಮಾತಿನಿಂದ ಆರಂಭವಾಗುವ ಈ ಸೂತ್ರಗಳು, ಬ್ರಹ್ಮದ ಲಕ್ಷಣವನ್ನೂ ವ್ಯಾಪ್ತಿಯನ್ನೂ ಕುರಿತು ಸೂತ್ರೀಕರಿಸುತ್ತವೆ. ಬ್ರಹ್ಮದ ಲಕ್ಷಣವನ್ನು ಅವರು 'ಜ್ಯೋತಿ', ಎಂದರೆ ಬೆಳಕು ಎಂದು ನಿರೂಪಿಸಿದ್ದಾರೆ. ಬೆಳಕಿನ ಕೆಲಸ ಎಂದರೆ ಕತ್ತಲೆಯನ್ನು ಓಡಿಸುವುದು. ಕತ್ತಲೆ ಎಂದರೆ ಅವಿದ್ಯೆಯಲ್ಲದೆ ಮತ್ತೊಂದಲ್ಲ. ಅವಿದ್ಯೆಯ ದೆಸೆಯಿಂದಲೇ ಸಮಾಜದಲ್ಲಿಯೂ ವ್ಯಕ್ತಿಯಲ್ಲೂ ಎಲ್ಲ ವಿಧದ ಉದ್ವೇಗಗಳು ಕಾಣಿಸಿಕೊಳ್ಳುತ್ತವೆ. ಒಮ್ಮೆ ವಿದ್ಯೆ ಎಂಬ ಬೆಳಕು ನಮಗೆ ದಕ್ಕಿದರೆ ಆಗ ಎಲ್ಲ ಆತಂಕಗಳಿಂದ ಮುಕ್ತವಾಗಿ, ನಮ್ಮ ಜೀವನಪ್ರಯಾಣ ಸುಗಮವಾಗುತ್ತದೆ, ಸುಂದರವೂ ಆಗುತ್ತದೆ. 'ಇರುವುದು ಒಂದೇ ತತ್ತ್ವ; ಅದುವೇ ಆತ್ಮ' – ಎಂಬ ಸೂತ್ರದಿಂದ ಗುರುಗಳ ಸೂತ್ರಗುಚ್ಛ ಮುಕ್ತಾಯವಾಗುತ್ತದೆ. ಹಾಗಾದರೆ ಒಂದೇ ತತ್ತ್ವ ಇದ್ದಾಗ ನಮ್ಮ ರಾಗ-ದ್ವೇಷಕ್ಕೆ ಕಾರಣವಾದರೂ ಏನು? ನಾವಿಂದು ಮನನ ಮಾಡಬೇಕಾದ ಸಂಗತಿ ಇದು.

ಜೈಲುಗಳಲ್ಲಿ ವೃತ್ತಿ ತರಬೇತಿ ಸೌಲಭ್ಯ, ಐಟಿ ಮೂಲಸೌಕರ್ಯಗಳ ವಿವರಕ್ಕೆ 'ಸುಪ್ರೀಂ' ಸೂಚನೆ

'ವೈದ್ಯಕೀಯ ಸೌಲಭ್ಯ: ಮಾಹಿತಿ ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಜೈಲುಗಳಲ್ಲಿ ಲಭ್ಯವಿರುವ ವೈದ್ಯಕೀಯ ಸೌಲಭ್ಯಗಳು, ಕೈದಿಗಳಿಗೆ ವೃತ್ತಿ ತರಬೇತಿ ನೀಡುವ ವ್ಯವಸ್ಥೆ ಕುರಿತು ಸಮಗ್ರ ಮಾಹಿತಿ ಸಲ್ಲಿಸುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂಕೋರ್ಟ್ ಸೂಚನೆ ನೀಡಿದೆ.

ವರ್ಚುವಲ್ ವಿಧಾನದ ಮೂಲಕ ವಿಚಾರಣೆ ನಡೆಸಲು, ಕೈದಿಗಳನ್ನು ಭೇಟಿಯಾಗ ಬಯಸುವ ಅವರ ಕುಟುಂಬ ಸದಸ್ಯರಿಗೆ ಅನುಕೂಲ ಕಲ್ಪಿಸಲು ಜೈಲುಗಳಲ್ಲಿ ಐಟಿ ಮೂಲಸೌಕರ್ಯಗಳು ಅಗತ್ಯ. ಈ ಕುರಿತ ಮಾಹಿತಿ ಸಲ್ಲಿಸುವಂತೆಯೂ ಸುಪ್ರೀಂಕೋರ್ಟ್ ಸೂಚಿಸಿದೆ.

ಜೈಲುಗಳ ಸ್ಥಿತಿ ಕುರಿತು 2013ರಲ್ಲಿ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಪ್ರಕರಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ರಚಿಸಿದ್ದ ಸಮಿತಿ ಸಲ್ಲಿಸಿದ್ದ ವರದಿಯನ್ನು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಹಾಗೂ ರಾಜೇಶ್



ಬಿಂದಲ್ ಅವರಿದ್ದ ನ್ಯಾಯಪೀಠ ಪರಿಶೀಲಿಸಿದ್ದು, ಈ ಸಂಬಂಧ ಆಗಸ್ಟ್ 29ರಂದು ಆದೇಶ ಹೊರಡಿಸಿದೆ.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಹಾಗೂ ಜೈಲುಗಳ ಮಹಾ ನಿರ್ದೇಶಕರು ನೀಡಿದ ಮಾಹಿತಿ ಕ್ರೋಡೀಕರಿಸುವಂತೆ, ಅಮಿಕಸ್ ಕ್ಯೂರಿ (ಕೋರ್ಟ್‌ಗೆ ಸಹಕರಿಸುವ ವಕೀಲ) ಗೌರವ್ ಅಗ್ರವಾಲ್ ಅವರಿಗೆ ಸೂಚಿಸಿರುವ ನ್ಯಾಯಪೀಠ, ವಿಚಾರಣೆಯನ್ನು ಸೆಪ್ಟೆಂಬರ್ 26ಕ್ಕೆ ಮುಂದೂಡಿದೆ.

'ಜೈಲುಗಳ ಸುಧಾರಣೆ ಕುರಿತ ಸಮಿತಿ'ಯನ್ನು ಸುಪ್ರೀಂ ಕೋರ್ಟ್ ರಚಿಸಿದ್ದು, ಸಮಿತಿಯು ಕಳೆದ ವರ್ಷ ಡಿಸೆಂಬರ್ 27ರಂದು ಸಲ್ಲಿಸಿದ್ದ ಎಂಟನೇ ವರದಿಯನ್ನು ನ್ಯಾಯಪೀಠ ಪರಿಶೀಲಿಸಿದೆ.

'ಬಿಲ್ಕಿಸ್ ಪ್ರಕರಣ: ವಕೀಲಿಕೆ ನಡೆಸಲು ಅಪರಾಧಿಗೆ ಸಾಧ್ಯವಾಗಿದ್ದು ಹೇಗೆ?'

ನವದೆಹಲಿ (ಪಿಟಿಐ): ಬಿಲ್ಕಿಸ್ ಬಾನು ಪ್ರಕರಣದ 11 ಅಪರಾಧಿಗಳನ್ನು ಶಿಕ್ಷೆಯ ಅವಧಿ ಪೂರ್ಣಗೊಳ್ಳುವ ಮೊದಲೇ ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಯನ್ನು ಗುರುವಾರ ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಉಜ್ವಲ್ ಭುಯಾನ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ಆಗಸ್ಟ್ 24ರಿಂದ ಈ ಅರ್ಜಿಗಳ ವಿಚಾರಣೆ ನಡೆಸುತ್ತಿದೆ. ಏಳನೇ ದಿನವಾದ ಬುಧವಾರ, ಸಮರ್ಥಿಸಿ ಅಪರಾಧಿಗಳ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿತು.

'ಕಾನೂನು ಒಂದು ಉದಾತ್ತ ವೃತ್ತಿ ಎಂಬ ಭಾವನೆ ಇದೆ. ಹಾಗಿದ್ದರೂ ಬಿಡುಗಡೆಗೊಂಡ ಅಪರಾಧಿಗಳಲ್ಲಿ ಒಬ್ಬರು ವಕೀಲ ವೃತ್ತಿ ನಡೆಸಲು ಸಾಧ್ಯವಾಗಿದ್ದು ಹೇಗೆ' ಎಂದು ನ್ಯಾಯಾಲಯವು ಅಚ್ಚರಿ ವ್ಯಕ್ತಪಡಿಸಿತು.

ನ್ಯಾಯಪೀಠದ ಗಮನಕ್ಕೆ ಈ ವಿಷಯ ಬಂದಿದ್ದನ್ನು ಗಮನಿಸಿದ ಅಪರಾಧಿ ರಾಧೇಶ್ಯಾಮ್ ಶಾ ಪರ ವಕೀಲ ರಿಷಿ ಮಲ್ಹೋತ್ರಾ, 'ನನ್ನ ಫಿರ್ಯಾದಿಯು 15 ವರ್ಷ ಶಿಕ್ಷೆ ಅನುಭವಿಸಿದ್ದಾರೆ. ಅವರ ನಡವಳಿಕೆ ಗಮನಿಸಿ ಸರ್ಕಾರವು ಕ್ಷಮಾಪಣೆ ನೀಡಿದೆ' ಎಂದು ಸಮರ್ಥಿಸಿಕೊಂಡರು.

2014ರ ಕ್ಷಮಾಪಣೆ ನೀತಿ ಅನ್ವಯ ಸಿಬಿಐ ತನಿಖೆ ನಡೆಸಿದ ಅಪರಾಧ ಪ್ರಕರಣ ಅಥವಾ ಅತ್ಯಾಚಾರ ಎಸಗಿ ಕೊಲೆ ಹಾಗೂ ಸಾಮೂಹಿಕ ಅತ್ಯಾಚಾರ ಪ್ರಕರಣದ ಅಪರಾಧಿಗಳಿಗೆ ವಿಧಿಸುವ ಶಿಕ್ಷೆಯ ಅವಧಿ ಪೂರ್ಣಗೊಳ್ಳುವುದಕ್ಕೂ ಮೊದಲೇ ಅವರನ್ನು ಬಿಡುಗಡೆಗೊಳಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಆದರೆ, ಗುಜರಾತ್ ಸರ್ಕಾರವು 1992ರ ಕ್ಷಮಾಪಣೆ ನೀತಿ ಆಧಾರದಲ್ಲಿ ಬಿಲ್ಕಿಸ್ ಪ್ರಕರಣದ ಅಪರಾಧಿಗಳನ್ನು ಬಿಡುಗಡೆಗೊಳಿಸಿದೆ.

ಇದನ್ನು ಪ್ರಶ್ನಿಸಿ ಬಿಲ್ಕಿಸ್ ಬಾನು ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಹಲವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಬಿಪಿಎಸ್ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗಾ) ಕಾರ್ಮಿಕರಿಗೆ ಕಡ್ಡಾಯವಾಗಿ ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯ (ಎಬಿಪಿಎಸ್) ಮೂಲಕವೇ ಕೂಲಿ ಪಾವತಿಸಲು ನಿಗದಿಪಡಿಸಲಾಗಿದ್ದ ಕೊನೆಯ ದಿನವನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಡಿಸೆಂಬರ್ 31ರವರೆಗೆ ವಿಸ್ತರಿಸಿದೆ.

ಇನ್ನು ಮುಂದೆ ಗಡುವನ್ನು ವಿಸ್ತರಿಸಲಾಗದು ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ ಕೆಲ ದಿನಗಳ ಬಳಿಕ ಸಚಿವಾಲಯದಿಂದ ಈ ಕುರಿತ ನಿರ್ಧಾರ ಹೊರ ಬಂದಿದೆ.

ವಿಷಾನಿಲ: ಐವರು ಕಾರ್ಮಿಕರ ಸಾವು

ಮುರೌನ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ಮುರೌನ ಜಿಲ್ಲೆಯ ಸಾಕ್ಷಿ ಫುಡ್ ಪ್ರಾಡಕ್ಟ್ಸ್ ಕಾರ್ಖಾನೆಯಲ್ಲಿ ಬುಧವಾರ ವಿಷಾನಿಲ ಸೇವಿಸಿ ಮೂವರು ಸಹೋದರರು ಸೇರಿದಂತೆ ಐವರು ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಳಿಗ್ಗೆ 11 ಗಂಟೆ ಸುಮಾರಿಗೆ ಕಾರ್ಖಾನೆಯೊಳಗಿನ ಟ್ಯಾಂಕ್‌ನಿಂದ ಅನಿಲ ಹೊರಬರಲು ಪ್ರಾರಂಭಿಸಿತು. ಅದನ್ನು ಪರಿಶೀಲಿಸಲು ಒಳಗೆ ಹೋದ ಇಬ್ಬರು ಕಾರ್ಮಿಕರು ಅಸ್ವಸ್ಥಗೊಂಡರು. ನಂತರ ಇನ್ನೂ ಮೂವರು ಕಾರ್ಮಿಕರು ಅಸ್ವಸ್ಥಗೊಂಡರು ಎಂದು ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಭೂಪೇಂದ್ರ ಸಿಂಗ್ ಕುಶ್ವಾಹ ತಿಳಿಸಿದ್ದಾರೆ. ಎಲ್ಲರನ್ನು ಜಿಲ್ಲಾಸ್ಪತ್ರೆಗೆ ಸಾಗಿಸಲಾಯಿತು. ಶಸ್ತ್ರ-ಚಿಕಿತ್ಸಕ ಗಜೇಂದ್ರ ಸಿಂಗ್ ತೋಮರ್ ಅವರು ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು ಎಂದಿದ್ದಾರೆ.

ಭಾರತಕ್ಕೆ ಭೇಟಿ: ವಿದೇಶಿಯರ ಸಂಖ್ಯೆಯಲ್ಲಿ ಹೆಚ್ಚಳ

ನವದೆಹಲಿ (ಪಿಟಿಐ): ಈ ವರ್ಷ ಜನವರಿಯಿಂದ ಜೂನ್ ಅವಧಿಯಲ್ಲಿ ಭಾರತಕ್ಕೆ ಭೇಟಿ ನೀಡಿರುವ ವಿದೇಶಿ ಪ್ರವಾಸಿಗರ ಸಂಖ್ಯೆಯು 2022ರಲ್ಲಿ ಇದೇ ಅವಧಿಯಲ್ಲಿ ಭಾರತಕ್ಕೆ ಬಂದ ಪ್ರವಾಸಿಗರ ಸಂಖ್ಯೆಗಿಂತ ಶೇ 106ರಷ್ಟು ಹೆಚ್ಚಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಕಳೆದ ವರ್ಷ ಜನವರಿಯಿಂದ-ಜೂನ್ ಅವಧಿಗೆ ಹೋಲಿಸಿದರೆ ಈ ವರ್ಷ ಇದೇ ಅವಧಿಯಲ್ಲಿ ವಿದೇಶಿ ವಿನಿಮಯ ಗಳಿಕೆಯಲ್ಲಿಯೂ ಬೆಳವಣಿಗೆ ಕಂಡುಬಂದಿದೆ ಎಂದು ದತ್ತಾಂಶಗಳಿಂದ ತಿಳಿದುಬಂದಿದೆ.

ಕೋವಿಡ್-19 ಸಾಂಕ್ರಾಮಿಕದ ಪರಿಣಾಮದಿಂದ ಸೊರಗಿದ್ದ ದೇಶದ ಪ್ರವಾಸೋದ್ಯಮಕ್ಕೆ ಚೇತರಿಕೆ ನೀಡಲು ಮತ್ತು ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ದೇಶ, ವಿದೇಶಗಳ ಪ್ರವಾಸಿಗರ ಸಂಖ್ಯೆ ಹೆಚ್ಚಾಗುವಂತೆ ಮಾಡಲು ಭಾರತವು ಹಲವು ಸುಸ್ಥಿರ ಪ್ರಯತ್ನಗಳನ್ನು ನಡೆಸಿತ್ತು. ಈ ವರ್ಷ ಜನವರಿಯಿಂದ ಜೂನ್‌ವರೆಗೆ 43.80 ಲಕ್ಷ ವಿದೇಶಿ ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದಾರೆ. ಇದೇ ಅವಧಿಯಲ್ಲಿ ಕಳೆದ ವರ್ಷ 21.24 ಲಕ್ಷ ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದರು.

2021ರಲ್ಲಿ 67.7 ಕೋಟಿ ಭಾರತೀಯರು ದೇಶದಲ್ಲಿನ ವಿವಿಧ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಿದ್ದಾರೆ. 2022ಕ್ಕೆ ಈ ಸಂಖ್ಯೆಯು 173 ಕೋಟಿಗೆ ತಲುಪಿದೆ ಎಂದು ಮೂಲಗಳು ಹೇಳಿವೆ.

ಪರವಾನಗಿ ಇಲ್ಲದೇ ಔಷಧ ಮಾರಾಟ: ಕ್ರಮಕ್ಕೆ ಸೂಚನೆ

ನವದೆಹಲಿ(ಪಿಟಿಐ): ಪರವಾನಗಿ ಇಲ್ಲದೆಯೇ ಆನ್‌ಲೈನ್ ಮೂಲಕ ಔಷಧಗಳನ್ನು ಮಾರಾಟ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಹಾಗೂ ದೆಹಲಿ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ವಿಚಾರವಾಗಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಮುಖ್ಯ-ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸಂಜೀವ್ ನರೂಲಾ ಅವರಿದ್ದ ನ್ಯಾಯಪೀಠ, ಆಗಸ್ಟ್ 28ರಂದು ಆದೇಶ ಹೊರಡಿಸಿದೆ.

ಈ ಸಂಬಂಧ ಕ್ರಮ ಕೈಗೊಳ್ಳಲು ಹಾಗೂ ಕಾನೂನುಬಾಹಿರವಾಗಿ ಆನ್‌ಲೈನ್ ಮೂಲಕ ಔಷಧಗಳ ಮಾರಾಟ ಕುರಿತು ತನ್ನ ಅಂತಿಮ ನಿಲುವು ತಿಳಿಸಲು ಕೇಂದ್ರಕ್ಕೆ ಆರು ವಾರಗಳ ಅವಕಾಶ ನೀಡಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 16ಕ್ಕೆ ಮುಂದೂಡಿದೆ.



ಆನ್‌ಲೈನ್ ಮೂಲಕ ಕಾನೂನುಬಾಹಿರವಾಗಿ ಔಷಧಗಳ ಮಾರಾಟವನ್ನು ನಿಷೇಧಿಸಲು ಕೋರಿ, ಡ್ರಗ್ಸ್ ಅಂಡ್ ಕಾಸ್ಮೆಟಿಕ್ಸ್ ನಿಯಮಗಳಿಗೆ ಉದ್ದೇಶಿತ ತಿದ್ದುಪಡಿಗಾಗಿ ಪ್ರಕಟಿಸಿದ್ದ ಕರಡು ನಿಯಮಗಳನ್ನು ಪ್ರಶ್ನಿಸಿ ಸೌತ್ ಕೆಮಿಸ್ಟ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅರ್ಜಿ ಸಲ್ಲಿಸಿದೆ.

ಆನ್‌ಲೈನ್ ಮೂಲಕ ಔಷಧಗಳ ಮಾರಾಟಕ್ಕೆ ದೆಹಲಿ ಹೈಕೋರ್ಟ್ ತಡೆ ನೀಡಿದ್ದರೂ, ಮಾರಾಟ ಮುಂದುವರಿಸಿರುವ ಇ-ಫಾರ್ಮಸಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕು ಎಂದು ಕೋರಿ ಜಹೀರ್ ಅಹ್ಮದ್ ಎಂಬುವವರು ಕೂಡ ಅರ್ಜಿ ಸಲ್ಲಿಸಿದ್ದಾರೆ.

ಇ-ಫಾರ್ಮಸಿಗಳ ವಿರುದ್ಧ ಕ್ರಮ ಕೈಗೊಳ್ಳದ್ದಕ್ಕಾಗಿ ಕೇಂದ್ರ ಸರ್ಕಾರದ ವಿರುದ್ಧವೂ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವಂತೆ ಅರ್ಜಿದಾರ ಕೋರಿದ್ದಾರೆ.

ಬಿಟ್ಟು ಬಜರಂಗಿಗೆ ಜಾಮೀನು

ಗುರುಗ್ರಾಮ/ನೂಹ್ (ಪಿಟಿಐ): ನೂಹ್ ಜಿಲ್ಲೆಯಲ್ಲಿ ನಡೆದ ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ ಬಂಧಿತರಾಗಿರುವ ಗೋರಕ್ಷಕ ಬಿಟ್ಟು ಬಜರಂಗಿ ಅವರಿಗೆ ನ್ಯಾಯಾಲಯ ಬುಧವಾರ ಜಾಮೀನು ಮಂಜೂರು ಮಾಡಿದೆ.

ಎಎಸ್‌ಪಿ ಉಷಾ ಕುಂಡು ಅವರ ದೂರಿನ ಮೇರೆಗೆ ನೂಹ್‌ನ ಸದರ್ ಪೊಲೀಸ್ ಠಾಣೆಯಲ್ಲಿ ಬಿಟ್ಟು ಮೇಲೆ ಎಫ್‌ಐಆರ್ ದಾಖಲಾಗಿತ್ತು. ಅವರನ್ನು ಆಗಸ್ಟ್ 15ರಂದು ಫರೀದಾಬಾದ್‌ನಲ್ಲಿ ಬಂಧಿಸಲಾಗಿತ್ತು.

ಆಗಸ್ಟ್ 17ರಂದು ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಾಲಯವು ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿತ್ತು. ಬಳಿಕ ಅವರನ್ನು ಫರೀದಾಬಾದ್ ಜಿಲ್ಲೆಯ ನೀಮ್ಕಾ ಜೈಲಿಗೆ ಕಳುಹಿಸಲಾಯಿತು. ಬಜರಂಗಿ ಅವರ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ಪ್ರಥಮ ದರ್ಜೆ ನ್ಯಾಯಾಧೀಶರಾದ ಸಂದೀಪ್ ಕುಮಾರ್ ಜಾಮೀನು ಮಂಜೂರು ಮಾಡಿದರು ಎಂದು ಪೊಲೀಸರು ತಿಳಿಸಿದ್ದಾರೆ.



ಸೆ.4ರಿಂದ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷಾ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಪಿಯುಸಿ

ಇದೇ ಸೆ.4ರಿಂದ ಎಸ್ಸೆಸ್ಸೆಲ್ಸಿ- ದ್ವಿತೀಯ ಪಿಯುಸಿ(ವಿಜ್ಞಾನ ವಿಷಯ) ಪಠ್ಯಗಳ ಅಧ್ಯಾಯವಾರು ಪ್ರಶ್ನೋತ್ತರಗಳ 'ಪರೀಕ್ಷಾ ದಿಕ್ಸೂಚಿ' ಅಂಕಣ ಆರಂಭಿಸಲಾಗುತ್ತಿದೆ.


ಈ ಅಂಕಣದಲ್ಲಿ ಎಸ್ಸೆಸ್ಸೆಲ್ಸಿಯ ಇಂಗ್ಲಿಷ್, ಗಣಿತ, ಸಮಾಜ ಮತ್ತು ವಿಜ್ಞಾನದ ವಿಷಯಗಳು ಹಾಗೂ ದ್ವಿತೀಯ ಪಿಯುಸಿಯ (ವಿಜ್ಞಾನ ವಿಷಯ) ಭೌತವಿಜ್ಞಾನ(Physics), ರಸಾಯನ ವಿಜ್ಞಾನ (Chemistry), ಗಣಿತ (Mathematics) ಮತ್ತು ಜೀವವಿಜ್ಞಾನ(Biology) ವಿಷಯಗಳ ಅಧ್ಯಾಯವಾರು ಮಾದರಿ ಪ್ರಶ್ನೋತ್ತರಗಳನ್ನು ಪ್ರಕಟಿಸಲಾಗುತ್ತಿದೆ.

ಎಸ್ಸೆಸ್ಸೆಲ್ಸಿ ಪ್ರಶ್ನೋತ್ತರಗಳು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿರುತ್ತವೆ. ಕನ್ನಡ ಮಾಧ್ಯಮದ ಪ್ರಶ್ನೋತ್ತರ ಮುದ್ರಣ ಆವೃತ್ತಿಯಲ್ಲಿ ಪ್ರಕಟವಾದರೆ, ಇಂಗ್ಲಿಷ್ ಮಾಧ್ಯಮದ ಮಾಹಿತಿ ಆನ್‌ಲೈನ್ ಆವೃತ್ತಿಯಲ್ಲಿ ಪ್ರಕಟವಾಗಲಿದೆ. ಮುದ್ರಣ ಆವೃತ್ತಿಯಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಡುವಂತೆ ಸೂಚನೆ ನೀಡಲಾಗಿರುತ್ತದೆ. ಹಾಗೆಯೇ, ಈ ಬಾರಿ ಪಿಯುಸಿ ಪ್ರಶ್ನೋತ್ತರ ಇಂಗ್ಲಿಷ್ ಮಾಧ್ಯಮದಲ್ಲಿರುತ್ತದೆ.

ಈ ಎರಡೂ ತರಗತಿಯ ಮಾಹಿತಿಗಳು ವಾರಕ್ಕೆ ನಾಲ್ಕು ದಿನ ಪ್ರಕಟವಾಗುತ್ತವೆ. ಸೋಮವಾರದಿಂದ ಗುರುವಾರದವರೆಗೆ ಪ್ರತಿ ದಿನ ಪ್ರಕಟವಾಗುವ ಪುರವಣಿಯ ಅರ್ಧ ಪುಟದಲ್ಲಿ ಪರೀಕ್ಷಾ ದಿಕ್ಸೂಚಿಯಿರುತ್ತದೆ. ನುರಿತ ಅಧ್ಯಾಪಕರು ಮತ್ತು ಶಿಕ್ಷಕರು ಸಿದ್ಧಪಡಿಸುವ ಈ ದಿಕ್ಸೂಚಿಯ ಮಾಹಿತಿ, ವಿದ್ಯಾರ್ಥಿಗಳಿಗೆ ಪರೀಕ್ಷಾ ಮಾರ್ಗದರ್ಶಿಯಾಗಲಿದೆ.

ಬಹು ಆಯ್ಕೆಯ ಪರೀಕ್ಷೆ ಯಶಸ್ಸಿಗೆ ತಂತ್ರಗಾರಿಕೆ

ನಾಗೇಶ ಜಿ. ವೈದ್ಯ



ಕಾಲೇಜುಗಳ ಪ್ರವೇಶ ಪರೀಕ್ಷೆಯಿಂದಾರಂಭಿಸಿ ರೈಲ್ವೆ ಇಲಾಖೆಯವರೆಗೂ, ಬ್ಯಾಂಕಿನಿಂದ ಐಎಎಸ್‌ವರೆಗೂ ನೇಮಕಾತಿಯ ಪ್ರಕ್ರಿಯೆಯಾಗಿ ಬಹು ಆಯ್ಕೆಯ ಪರೀಕ್ಷೆಯನ್ನು ನಡೆಸಲಾಗುತ್ತದೆ. 1914ರಲ್ಲಿ ಇದನ್ನು ರಚಿಸಿದ್ದು ಅಮೆರಿಕದ ಫ್ರೆಡೆರಿಕ್ ಕೆಲ್ಲಿ ಎನ್ನುವ ಅಧ್ಯಾಪಕರು.

ಮೊದಲ ನೋಟದಲ್ಲಿ ಬಹು ಆಯ್ಕೆಯ ಪರೀಕ್ಷೆಗಳು ಸರಳವೆಂದು ತೋರಿದರೂ, ಅವುಗಳು ಸಂಕೀರ್ಣತೆಯಿಂದ ಕೂಡಿರುತ್ತವೆ. ಇದು ಅಲ್ಪಾವಧಿಯಲ್ಲಿ ಉತ್ತರಿಸಬೇಕಾದ ನೂರಾರು ಪ್ರಶ್ನೆಗಳ ಮೂಲಕ ಒಬ್ಬರ ಸಾಮರ್ಥ್ಯವನ್ನು ಅಳೆಯಲು ಅತ್ಯಂತ ಜನಪ್ರಿಯ ವಿಧಾನವಾಗಿ ಹೊರಹೊಮ್ಮಿದೆ. ಬಹು ಆಯ್ಕೆಯ ಪರೀಕ್ಷೆಗೆ ಬೇಕಿರುವುದು ಆಳವಾದ ಅಧ್ಯಯನ ಮತ್ತು ಜ್ಞಾನ.

ಋಣಾತ್ಮಕ ಅಂಕ ಏಕೆ ?

ಬಹು ಆಯ್ಕೆಯ ಪರೀಕ್ಷೆಯಲ್ಲಿ, ಉತ್ತರವು ತಪ್ಪಾಗಿದೆಯೆಂದರೆ, ಅಭ್ಯರ್ಥಿಗೆ ಉತ್ತರ ತಿಳಿದಿಲ್ಲ ಎನ್ನುವುದು ಖಚಿತ. ಆದರೆ, ಉತ್ತರವು ಸರಿಯಾಗಿದ್ದರೆ, ಅದು ನಿಜವಾಗಿಯೂ ಅಭ್ಯರ್ಥಿಗೆ ತಿಳಿದಿದೆಯೋ ಅಥವಾ ಯಾದೃಚ್ಛಿಕ (Random) ಊಹೆಯ ಕಾರಣದಿಂದ ಅಭ್ಯರ್ಥಿಯ ಉತ್ತರ ಸರಿಯಾಗಿದೆಯೇ ಎಂಬುದನ್ನು ಖಚಿತವಾಗಿ ಹೇಳಲಾಗದು. ಹಾಗಾಗಿ, ಗಂಭೀರವಾಗಿ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿರುವ, ಜ್ಞಾನ ಮತ್ತು ಸಾಮರ್ಥ್ಯವನ್ನು ಹೊಂದಿರುವ ಅಭ್ಯರ್ಥಿಗಿಂತ ಏನನ್ನೂ ಓದದೆಯೂ ಕೇವಲ ಊಹೆಯ ಮೇಲೆ ಉತ್ತರಿಸಿದ ಅಭ್ಯರ್ಥಿ ಹೆಚ್ಚು ಅಂಕಗಳನ್ನು ಗಳಿಸುವ ಸಾಧ್ಯತೆ ಇದೆ.

ಜಾಣರನ್ನು ಪ್ರೋತ್ಸಾಹಿಸಲು ಹಾಗೂ ಊಹೆ ಮಾಡಿ ಉತ್ತರಿಸುವುದನ್ನು ನಿರುತ್ಸಾಹಗೊಳಿಸಲಿಕ್ಕೆಂದೇ ಬಹು ಆಯ್ಕೆಯ ಪರೀಕ್ಷೆಯಲ್ಲಿ ಋಣಾತ್ಮಕ ಅಂಕಗಳನ್ನು ಪರಿಚಯಿಸಲಾಯಿತು. ನೀಡಲಾದ ತಪ್ಪು ಉತ್ತರಗಳಿಗೆ ಅಂಕಗಳನ್ನು ಕಡಿತಗೊಳಿಸುವುದರಿಂದ, ಉತ್ತಮ ನಿಖರತೆ ಹೊಂದಿರುವವರಿಗೆ ನ್ಯಾಯ ಒದಗಿಸುವಂತಾಗಿದೆ. ಕೇಂದ್ರ ಲೋಕಸೇವಾ ಆಯೋಗ, ಕರ್ನಾಟಕ ಲೋಕಸೇವಾ ಆಯೋಗ, ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆ (IBPS)ಗಳು ನಡೆಸುವ ಪರೀಕ್ಷೆಗಳಲ್ಲಿ ತಪ್ಪು ಉತ್ತರಗಳಿಗೆ ಋಣಾತ್ಮಕ ಅಂಕಗಳಿವೆ. ಆದರೆ, ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಕೆಸಿಇಟಿ ಪರೀಕ್ಷೆಯಲ್ಲಿ ಯಾವುದೇ ಋಣಾತ್ಮಕ ಅಂಕಗಳಿಲ್ಲ.

ಬಹು ಆಯ್ಕೆಯ ಪರೀಕ್ಷೆಯಲ್ಲಿ ಯಶಸ್ಸು ಪಡೆಯಲು ಜ್ಞಾನದ ಜೊತೆಗೆ ತಂತ್ರಗಳ ಅಗತ್ಯವಿದೆ. ಅವುಗಳ ಬಗ್ಗೆ ತಿಳಿಯೋಣ.

ಅಧ್ಯಯನ ರೀತಿ : ಯಾವುದೇ ಪರೀಕ್ಷೆಗಳ ವೇಳಾಪಟ್ಟಿ ಸುಮಾರು ಮೂರು ತಿಂಗಳ ಮೊದಲೇ ದೊರಕುತ್ತದೆ. ಹಾಗಾಗಿ, ಸಾಕಷ್ಟು ಮುಂಚಿತವಾಗಿಯೇ ತಯಾರಿಯನ್ನು ಆರಂಭಿಸಿ. ಪರೀಕ್ಷೆಗಾಗಿ ಒಬ್ಬರೇ ತಯಾರಿ ನಡೆಸುವುದು ಒಳ್ಳೆಯದು. ಬಹು ಆಯ್ಕೆಯ ಹಳೆಯ ಪ್ರಶ್ನೆ ಪತ್ರಿಕೆಗಳು ಅನೇಕ ಜಾಲತಾಣಗಳಲ್ಲಿ ಲಭ್ಯವಿವೆ. ಅವುಗಳ ಅಣಕು ಪರೀಕ್ಷೆಗಳನ್ನು ತೆಗೆದುಕೊಳ್ಳಿ. ಪ್ರತಿ ಸಲದ ಅಭ್ಯಾಸದೊಂದಿಗೆ ವೇಗವಾಗಿ ಹಾಗೂ ಸಮರ್ಪಕವಾಗಿ ಉತ್ತರಿಸುವ ಪ್ರಾವಿಣ್ಯತೆ ಹೊಂದಿ. ಆಗಾಗ ಗೆಳೆಯರೊಂದಿಗೆ ಗುಂಪಿನಲ್ಲಿ ಅಭ್ಯಾಸ ಮಾಡಿ ಹಾಗೂ ಅನುಮಾನಗಳನ್ನು ಪರಿಹರಿಸಿಕೊಳ್ಳಿ.

> ಬಹು ಆಯ್ಕೆಯ ಪರೀಕ್ಷೆಗಳು (ಎಂಸಿಕ್ಯು) ಮೇಲ್ನೋಟಕ್ಕೆ ಸರಳ ಎಂದು ಎನ್ನಿಸಿದರೂ, ಉತ್ತರಿಸುವಾಗ ಅವುಗಳ ಸಂಕೀರ್ಣತೆಯು ಅರ್ಥವಾಗುತ್ತದೆ. ಇಂಥ ಪರೀಕ್ಷೆಗಳಲ್ಲಿ ಯಶಸ್ಸು ಪಡೆಯಲು ಜ್ಞಾನದ ಜೊತೆಗೆ ತಂತ್ರಗಳ ಅಗತ್ಯವೂ ಇದೆ.

ಗೊತ್ತಿರುವುದಕ್ಕೆ ಆದ್ಯತೆಯಿರಲಿ: ಖಚಿತ ಉತ್ತರ ಗೊತ್ತಿರುವ ಪ್ರಶ್ನೆಗಳನ್ನು ಮೊದಲ ಸುತ್ತಿನಲ್ಲಿ ಉತ್ತರಿಸಿ. ಇದರಿಂದ ತಿಳಿದಿಲ್ಲದ ಸಂಕೀರ್ಣವಾದ ಪ್ರಶ್ನೆಗಳಿಗೆ ಹೆಚ್ಚಿನ ಸಮಯ ಉಳಿಸಲು ಸಾಧ್ಯ. ಒಂದೇ ಓದಿಗೆ ಅರ್ಥವಾಗದ ಪ್ರಶ್ನೆಗಳನ್ನೂ ಕೊನೆಯ ಅವಧಿಗಾಗಿ ಕಾದಿರಿಸಿ.

ಮನಸ್ಸಿನಲ್ಲಿ ಉತ್ತರಿಸಿ : ಯಾವುದೇ ಪ್ರಶ್ನೆಗಳ ಉತ್ತರಗಳನ್ನು ನೋಡುವ ಮೊದಲು, ನೀವೇ ಉತ್ತರವನ್ನು ನೆನಪಿಸಿಕೊಳ್ಳಿ. ಆ ನಂತರದಲ್ಲಿ ಆ ಉತ್ತರ ಇದೆಯೋ ಎಂಬುದನ್ನು ಪರಿಶೀಲಿಸಿ. ಹಾಗೆ ಮಾಡಿದಾಗ, ತಪ್ಪಾದ ಉತ್ತರವನ್ನು ಆಯ್ಕೆ ಮಾಡುವುದನ್ನು ತಪ್ಪಿಸಬಹುದು. ಉತ್ತರವನ್ನು ಆಯ್ದುಕೊಳ್ಳುವ ಮೊದಲು ಎಲ್ಲ ಆಯ್ಕೆಗಳ ಮೇಲೂ ಕಣ್ಣು ಹಾಯಿಸಿ.

ಉದಾಹರಣೆಗೆ, ದಕ್ಷಿಣದ ಕೇಂದ್ರಾಡಳಿತ ಪ್ರದೇಶ ಎಂಬ ಪ್ರಶ್ನೆಗೆ ಅ) ಪಾಂಡಿಚೆರಿ ಬ) ಚೆನ್ನೈ ಕ) ತೇಲಾಂಗಣ ಡ) ಪುದುಚೆರಿ ಎಂದಿದ್ದಾಗ, ಅವಸರದಲ್ಲಿ ಮೊದಲ ಆಯ್ಕೆಯೊಂದನ್ನೇ ಓದಿ ಅದನ್ನೇ ಆಯ್ದುಕೊಂಡರೆ, ಅಂಕ ಕಳೆದುಕೊಳ್ಳುತ್ತೀರಿ. ಪಾಂಡಿಚೆರಿ ಸರಿಯೇ ಆಗಿದ್ದರೂ, ಈಗ ಅದರ ಹೆಸರು ಬದಲಾಗಿರುವುದರಿಂದ, ನಾಲ್ಕನೇ ಆಯ್ಕೆಯೇ ಸರಿ.

ನಿರ್ಮೂಲನಾ ವಿಧಾನ ಬಳಸಿ: ಸರಿಯಾದ ಉತ್ತರ ಗೊತ್ತಿಲ್ಲದಿದ್ದರೆ, ಅಸಮಂಜಸ ಅಥವಾ ತರ್ಕಬದ್ಧವಲ್ಲದ ಆಯ್ಕೆಗಳನ್ನು ತೆಗೆದುಹಾಕುವ ಮೂಲಕ ಉತ್ತರವನ್ನು ಕಂಡುಕೊಳ್ಳಿ. ಉದಾಹರಣೆಗೆ ಇವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು ಎಂಬ ಪ್ರಶ್ನೆಗೆ ಅ) ಎನ್. ಟಿ. ರಾಮರಾವ್, ಬ) ಜೆ. ಜಯಲಲಿತಾ, ಕ) ಕೆ. ಚೆಂಗಲರಾಯ ರೆಡ್ಡಿ ಡ) ಎಂ. ಜಿ. ರಾಮಚಂದ್ರನ್ ಎಂಬ ಉತ್ತರಗಳನ್ನು ನೀಡಲಾಗಿದೆ ಎಂದಿಟ್ಟುಕೊಳ್ಳೋಣ. ಇದಕ್ಕೆ ನಿಮಗೆ ಉತ್ತರ ಗೊತ್ತಿಲ್ಲ. ನೀವೊಬ್ಬ ಚಲನಚಿತ್ರ ಪ್ರೇಮಿ. ಹಾಗಾಗಿ, ಮುಖ್ಯಮಂತ್ರಿಗಳಾಗಿದ್ದ ಚಿತ್ರ ನಟರನ್ನು ನೀವು ಬಲ್ಲಿರಿ. ಹಾಗಾಗಿ, ಕರ್ನಾಟಕದ ಮುಖ್ಯಮಂತ್ರಿ ಅಲ್ಲದವರನ್ನು ಒಂದೊಂದಾಗಿ ತೆಗೆಯುತ್ತ ಬನ್ನಿ. ರಾಮರಾವ್ ಆಂಧ್ರದ ಮುಖ್ಯಮಂತ್ರಿ ಆಗಿದ್ದರು. ಜಯಲಲಿತಾ, ರಾಮಚಂದ್ರನ್ ಅವರು ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದವರು. ಇವರನ್ನೂ ತೆಗೆದರೆ ಉಳಿದುಕೊಳ್ಳುವುದೇ ಸರಿಯಾದ ಉತ್ತರ. ಆದರೆ ಇದಕ್ಕೆ ಕೂಡ ನೀವು ಹೆಚ್ಚು ಓದಿಕೊಂಡಿರಬೇಕು ಎಂಬುದು ಅಪೇಕ್ಷಣೀಯ.

ನಕಾರಾತ್ಮಕ ಪ್ರಶ್ನೆ ಸುಲಭವಾಗಿಸಿ: ಋಣಾತ್ಮಕ ಪದಗಳಿರುವ ಪ್ರಶ್ನೆಗಳು ಗೊಂದಲಕ್ಕೀಡುಮಾಡುವುದು ಸಹಜ. ಅವುಗಳನ್ನು ಧನಾತ್ಮಕವಾಗಿ ಪರಿವರ್ತಿಸಿಕೊಳ್ಳಿ. ಅದರಿಂದ ವೇಗವಾಗಿ ಉತ್ತರ ನೀಡಲು ಸಾಧ್ಯವಾಗುತ್ತದೆ. ಉದಾಹರಣೆಗೆ ಇವರಲ್ಲಿ ಯಾರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ? ಎನ್ನುವ ಪ್ರಶ್ನೆಯನ್ನು ಇವರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು ಯಾರು? ಎಂದು ಬದಲಾಯಿಸಿಕೊಂಡರೆ, ಉತ್ತರಿಸುವುದು ಸುಲಭ.

ಉತ್ತರ ಗೊತ್ತಿಲ್ಲದಿದ್ದರೆ: ತಪ್ಪು ಉತ್ತರಕ್ಕೆ ಋಣಾತ್ಮಕ ಅಂಕಗಳಿಲ್ಲದಿದ್ದರೆ, ಎಲ್ಲ ಪ್ರಶ್ನೆಗಳಿಗೂ ಉತ್ತರಿಸುವುದು ಉತ್ತಮ ನಡೆ. ಆದರೆ, ಋಣಾತ್ಮಕ ಅಂಕಗಳು ಇರುವ ಪರೀಕ್ಷೆಗಳಲ್ಲಿ ಶೇ 50ಕ್ಕಿಂತ ಹೆಚ್ಚು ಖಚಿತತೆ ಇದ್ದಲ್ಲಿ ಮಾತ್ರ ಅವುಗಳನ್ನು ಉತ್ತರಿಸುವ ಸಾಹಸ ಮಾಡಬಹುದು.


ಸಮಯ ನಿರ್ವಹಣೆ: ಪರೀಕ್ಷಾ ಕೊಠಡಿಗೆ ಹೊರಡುವ ಮುನ್ನವೇ ಪ್ರಶ್ನೆ ಪತ್ರಿಕೆಯಲ್ಲಿನ ಪ್ರತಿಯೊಂದು ಭಾಗಕ್ಕೆ, ಪ್ರಶ್ನೆಗಳಿಗೆ ನೀಡಬೇಕಾದ ಕಾಲಾವಧಿಯನ್ನು ನಿರ್ಧರಿಸಿಕೊಳ್ಳಿ. ಅದು ಪೇಪರನ್ನು ನಿಗದಿತ ಸಮಯಕ್ಕಿಂತ ಹತ್ತು ನಿಮಿಷ ಮೊದಲೇ ಮುಗಿಸುವ ಯೋಜನೆಯನ್ನು ಒಳಗೊಂಡಿರಲಿ. ಆ ಸಮಯವನ್ನು ನಿಮ್ಮ ಉತ್ತರಗಳನ್ನು ಒಮ್ಮೆ ಪರಿಶೀಲಿಸಲು ಬಳಸಿಕೊಳ್ಳಿ. ನಿಮ್ಮ ಅನುಕೂಲಕ್ಕಾಗಿ ಪರೀಕ್ಷಾ ಪರಿವೀಕ್ಷಕರು ಕಾಲಕಾಲಕ್ಕೆ ಉಳಿದಿರುವ ಸಮಯವನ್ನು ಘೋಷಿಸುತ್ತಿರುತ್ತಾರೆ.

ವಾಣಿಜ್ಯ ತೆರಿಗೆ ಇಲಾಖೆ 230 ಸಿಟಿಐ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ರಾಜ್ಯ ಸರ್ಕಾರದ ಹಣಕಾಸು ಸಚಿವಾಲಯದ ಅಡಿ ಕಾರ್ಯನಿರ್ವಹಿಸು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಖಾಲಿ ಇರುವ 230 ಗ್ರೂಪ್ ಸಿ ವಾಣಿಜ್ಯ ತೆರಿಗೆ ಪರಿವೀಕ್ಷಕರು (Commercial Tax Inspectors-CTI) ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಅಯೋಗವು (ಕೆಪಿಎಸ್ಸಿ) ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿದೆ.

ನಾಳೆಯಿಂದ (ಸೆಪ್ಟೆಂಬರ್ 1) ಅರ್ಜಿ ಸಲ್ಲಿಕೆ ಆರಂಭವಾಗಲಿದೆ. ಸೆಪ್ಟೆಂಬರ್ 30 ಅರ್ಜಿ ಸಲ್ಲಿಸಲು ಕೊನೆಯ ದಿನ. ಆಯೋಗದ ಅಧಿಕೃತ ಜಾಲತಾಣ www.kpsc.kar.nic.in ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬಹುದು.



ಅರ್ಜಿ ಶುಲ್ಕ

ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ₹ 600, ಪ್ರವರ್ಗ 2ಎ, 2ಬಿ, 3ಎ, 3ಬಿ ಅಭ್ಯರ್ಥಿಗಳಿಗೆ ₹300, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹ 50 ಶುಲ್ಕ ನಿಗದಿಪಡಿಸಲಾಗಿದೆ. ಪ್ರವರ್ಗ 1, ಎಸ್‌ಸಿ, ಎಸ್‌ಟಿ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. UPI ಮೂಲಕವೂ ಶುಲ್ಕ ಪಾವತಿಸಬಹುದು.

ಶೈಕ್ಷಣಿಕ ಅರ್ಹತೆ

ಯಾವುದೇ ಅಂಗೀಕೃತ ವಿಶ್ವವಿದ್ಯಾಲಯಗಳಿಂದ ವಾಣಿಜ್ಯ ಪದವಿ (ಬಿ.ಕಾಂ) ಪಾಸಾಗಿರಬೇಕು. ಬೇರೆ ಪದವಿ ಹೊಂದಿದವರು, ಅರ್ಥಶಾಸ್ತ್ರ ಅಥವಾ ಗಣಿತ ವಿಷಯವನ್ನು ಪದವಿಯ ಸೆಮಿಸ್ಟರ್ ಅಥವಾ 1 ವರ್ಷ ಅಭ್ಯಾಸ ಮಾಡಿರಬೇಕು.

ವಯೋಮಿತಿ: ಕನಿಷ್ಠ 18 ಹಾಗೂ ಗರಿಷ್ಠ 35 ಇದೆ. ಮೀಸಲು ವರ್ಗದ ಅಭ್ಯರ್ಥಿಗಳಿಗೆ 40ರವರೆಗೂ ವಯೋಮಿತಿ ಇದೆ.

ಪರೀಕ್ಷೆ ದಿನಾಂಕಗಳು: ಕನ್ನಡ ಭಾಷಾ ಪರೀಕ್ಷೆಯನ್ನು ನವೆಂಬರ್ 4 ರಂದು ಹಾಗೂ ನವೆಂಬರ್ 5 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಆಯೋಗ ತೀರ್ಮಾನಿಸಿದೆ. ಇವೆರಡೂ ತಾತ್ಕಾಲಿಕವಾಗಿ ನಿಗದಿಯಾಗಿರುವ ದಿನಾಂಕಗಳಾಗಿದೆ. ನಿಖರವಾದ ದಿನಾಂಕವನ್ನು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ.

ಆಯ್ಕೆ ವಿಧಾನ

ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಪ್ರಮಾಣದ ಆಧಾರದಲ್ಲಿ(ಮೆರಿಟ್) ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಸಂದರ್ಶನ ಪ್ರಕ್ರಿಯೆ ಇರುವುದಿಲ್ಲ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕನಿಷ್ಟ ಶೇಕಡಾ 35 ಅಂಕಗಳನ್ನು ಪಡೆಯುವುದು ಕಡ್ಡಾಯ. ಅರ್ಜಿ ಸಲ್ಲಿಸುವವರು ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಇಲ್ಲದಿದ್ದರೆ, ಸ್ಪರ್ಧಾತ್ಮಕ ಪರೀಕ್ಷೆಗೆ ಮುನ್ನ ಕೆಪಿಎಸ್‌ಸಿ ನಡೆಸುವ ಕನ್ನಡ ಭಾಷಾ ಪರೀಕ್ಷೆಯನ್ನು ಬರೆದು ಪಾಸ್ ಮಾಡಬೇಕು.

ಹೀಗಿರಲಿದೆ ಸ್ಪರ್ಧಾತ್ಮಕ ಪರೀಕ್ಷೆ

ಈ ಸ್ಪರ್ಧಾತ್ಮಕ ಪರೀಕ್ಷೆ ಬಹುಆಯ್ಕೆ ಮಾದರಿಯ ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತದೆ. ಎರಡೂ ಪೇಪರ್ ಗಳು ತಲಾ ಗರಿಷ್ಠ 100 ಅಂಕಗಳ 100 ಪ್ರಶ್ನೆಗಳನ್ನು ಹೊಂದಿರುತ್ತದೆ. ಅಭ್ಯರ್ಥಿಗಳು ಎರಡೂ ಪತ್ರಿಕೆಗೆ ಹಾಜರಾಗುವುದು ಕಡ್ಡಾಯ.

ನಾಲ್ಕು ತಪ್ಪು ಉತ್ತರಗಳಿಗೆ ಒಂದು ಅಂಕವನ್ನು ಕಳೆಯಲಾಗುತ್ತದೆ(ಋಣಾತ್ಮಕ ಮೌಲ್ಯಮಾಪನ). ಹಾಗಾಗಿ ಅಭ್ಯರ್ಥಿಗಳು ಯೋಚಿಸಿ ಸರಿಯಾದ ಉತ್ತರವನ್ನೇ ಗುರುತು ಮಾಡಲು ಪ್ರಯತ್ನಿಸಬೇಕು. ಈ ಸ್ಪರ್ಧಾತ್ಮಕ ಪರೀಕ್ಷೆ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಇರುತ್ತವೆ. ಮೊದಲ ಪತ್ರಿಕೆ ಒಂದೂವರೆ ಗಂಟೆಯದ್ದಾಗಿರುತ್ತದೆ. ಎರಡನೇ ಪತ್ರಿಕೆ ಎರಡು ಗಂಟೆ ಅವಧಿಯದ್ದು. ಮೊದಲ ಪತ್ರಿಕೆ ಬೆಳಿಗ್ಗೆ ನಡೆದರೆ, ಎರಡನೆ ಪತ್ರಿಕೆ ಮಧ್ಯಾಹ್ನ ಇರಲಿದೆ.

ಹೆಚ್ಚಿನ ಮಾಹಿತಿಗೆ www.kpsc.kar.nic.in ಜಾಲತಾಣ ವೀಕ್ಷಿಸಬಹುದು.

ಪ್ರಚಲಿತ ವಿದ್ಯಮಾನಗಳು



ಸಾಂದರ್ಭಿಕ ಚಿತ್ರ

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಮುಖ ಎರಡು ಪ್ರಚಲಿತ ವಿದ್ಯಮಾನಗಳ ಕುರಿತ ಮಾಹಿತಿಗಳನ್ನು ಗುರುಶಂಕರ್ ಇಲ್ಲಿ ಹಂಚಿಕೊಂಡಿದ್ದಾರೆ.

ಭಾರತೀಯರಿಗೆ ರಷ್ಯಾದಿಂದ ಇ-ವೀಸಾ ಸೌಲಭ್ಯ

- ರಷ್ಯಾಗೆ ಪ್ರಯಾಣ ಬೆಳೆಸುವ ಭಾರತೀಯರಿಗೆ ಆಗಸ್ಟ್ 1 ರಿಂದ ಇ-ವೀಸಾ ಸೌಲಭ್ಯ ಕಲ್ಪಿಸಲು ರಷ್ಯಾ ಸರ್ಕಾರ ನಿರ್ಧಾರ ಕೈಗೊಂಡಿದೆ.
  ವೀಸಾ ಪಡೆಯಲು ಸರ್ಕಾರಿ ಕಚೇರಿಗಳಿಗೆ ಮತ್ತು ರಾಜತಾಂತ್ರಿಕ ಕಚೇರಿಗಳಿಗೆ ಭೇಟಿ ನೀಡಬೇಕಾಗುತ್ತದೆ. ವಿವಿಧ ಪ್ರಕ್ರಿಯೆಗಳಿಂದ ವೀಸಾ ಪಡೆದುಕೊಳ್ಳುವ ಪ್ರಕ್ರಿಯೆ ವಿಳಂಬವಾಗುತ್ತಿರುವ ಕಾರಣದಿಂದ ಪರಸ್ಪರ ರಾಷ್ಟ್ರಗಳ ನಡುವಿನ ಪ್ರವಾಸೋದ್ಯಮ ಮತ್ತು ವ್ಯವಹಾರಿಕ ಚಟುವಟಿಕೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಈ ಕಾರಣದಿಂದ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ. ಭಾರತದ ಜೊತೆಗೆ ಇತರ 54 ರಾಷ್ಟ್ರಗಳ ಪ್ರಜೆಗಳಿಗೂ ಈ ಸವಲತ್ತನ್ನು ರಷ್ಯಾ ಸರ್ಕಾರ ವಿಸ್ತರಿಸಿದೆ.
- ಇ-ವೀಸಾ ಪಡೆದುಕೊಳ್ಳಲು ರಷ್ಯಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಪ್ರಯಾಣಕ್ಕೂ 40 ದಿನಗಳ ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ ಹಾಗೂ ಡಿಜಿಟಲ್ ಛಾಯಾಚಿತ್ರ ಮತ್ತು ವ್ಯಕ್ತಿಗತ ಮಾಹಿತಿಯನ್ನು ಸಂಪೂರ್ಣವಾಗಿ ಒದಗಿಸಬೇಕಾಗುತ್ತದೆ.
  ವೀಸಾ ಪಡೆದುಕೊಂಡ ನಂತರ 60 ದಿನಗಳ ಕಾಲಾವಧಿಯನ್ನು ನೀಡಲಾಗಿದ್ದು, ರಷ್ಯಾದಲ್ಲಿ 16 ದಿನಗಳ ಕಾಲ ವಾಸಿಸುವ ಅವಕಾಶವನ್ನು ಕಲ್ಪಿಸಲಾಗಿದೆ.

ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ವಿಸ್ತರಣೆ

- ಇತ್ತೀಚೆಗೆ ನಡೆದ ಪ್ರಧಾನಮಂತ್ರಿ ನೇತೃತ್ವದ ಸಚಿವ ಸಂಪುಟ ಸಭೆಯಲ್ಲಿ ಡಿಜಿಟಲ್ ಇಂಡಿಯಾ ಕಾರ್ಯಕ್ರಮವನ್ನು ಮತ್ತಷ್ಟು ವಿಸ್ತರಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಭಾರತ ಸರ್ಕಾರ 2015 ರಲ್ಲಿ, ₹14,903 ಕೋಟಿ ಅನುದಾನಿತ ಕಾರ್ಯಕ್ರಮವನ್ನಾಗಿ ಇದನ್ನು ಜಾರಿಗೆ ತಂದಿತ್ತು. ಪ್ರಸ್ತುತ ಕೇಂದ್ರ ಸಚಿವ ಸಂಪುಟ ಈ ಕಾರ್ಯಕ್ರಮವನ್ನು ಮತ್ತಷ್ಟು ವಿಸ್ತರಿಸಲು ಮುಂದಾಗಿದೆ.
- ಸಂಪುಟದಲ್ಲಿ ತೆಗೆದುಕೊಂಡಿರುವ ನಿರ್ಧಾರಗಳ ಅನ್ವಯ 'ಫ್ಯೂಚರ್ ಸ್ಕಿಲ್ಸ್ ಪ್ರೋಗ್ರಾಂ' ಅಡಿಯಲ್ಲಿ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ 6.5 ಲಕ್ಷ ವೃತ್ತಿಪರರಿಗೆ ಕೌಶಲ ಅಭಿವೃದ್ಧಿ ಕಾರ್ಯಕ್ರಮ ವನ್ನು ಹಮ್ಮಿಕೊಳ್ಳಲಾಗುತ್ತದೆ. ಇತರೆ ವಲಯಗಳಲ್ಲಿ 2.65 ಲಕ್ಷ ವೃತ್ತಿಪರರಿಗೆ ತರಬೇತಿ ಕಾರ್ಯಕ್ರಮಗಳನ್ನು ಕಲ್ಪಿಸಲಾಗುತ್ತದೆ. ಅಲ್ಲದೇ, ಇದೇ ಕಾರ್ಯಕ್ರಮದ ಅಡಿಯಲ್ಲಿ ಭಾರತದ 22 ಭಾಷೆಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಬಳಸಿ ಭಾಷಾಂತರ ಮಾಡುವ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಗುತ್ತದೆ.
- ಕೃತಕ ಬುದ್ಧಿಮತ್ತೆ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾರ್ಟ್ ಅಪ್‌ಗಳಿಗೆ ಉತ್ತೇಜನವನ್ನು ನೀಡಲು ಸಂಪುಟದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ.
- 12 ಕೋಟಿ ಕಾಲೇಜು ವಿದ್ಯಾರ್ಥಿಗಳಿಗೆ ಸೈಬರ್ ವಿಚಾರಗಳಲ್ಲಿ ಅರಿವನ್ನು ಹೆಚ್ಚಿಸಲು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಬಹು ಆಯ್ಕೆಯ ಪ್ರಶ್ನೆಗಳು

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1. ಇತ್ತೀಚೆಗೆ ಚೀನಾದ ಕಂಪನಿಗಳ ಪ್ರಭಾವವನ್ನು ಕಡಿತಗಳಿಸಲು ಭಾರತ ಯಾವ ರೀತಿ ಕ್ರಮಗಳನ್ನು ಕೈಗೊಳ್ಳುತ್ತಿದೆ?

ಎ. ಭಾರತದಲ್ಲಿನ ಚೀನಾ ಸ್ಮಾರ್ಟ್ ಫೋನ್ ತಯಾರಕ ಕಂಪನಿಗಳ ಮೇಲೆ ನಿಗಾ ಇಡುತ್ತಿದೆ.
ಬಿ. ಚೀನಾದ ಬಿವೈಡಿ ಕಾರು ಉತ್ಪಾದನಾ ಘಟಕದ ಹೂಡಿಕೆಗೆ ಭಾರತ ಅನುಮತಿ ನೀಡದಿರುವುದು.
ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡೂ ಹೇಳಿಕೆಗಳು ಸರಿಯಾಗಿವೆ.
ಡಿ. ಮೇಲಿನ ಎರಡೂ ಹೇಳಿಕೆಗಳು ತಪ್ಪಾಗಿವೆ.

ಉತ್ತರ-ಸಿ.

2. ಕೆಳಗೆ ಉಲ್ಲೇಖಿಸಿರುವ ಯಾವ ದಂಗೆಯನ್ನು ಕೋಮುವಾದ ಸಂಬಂಧಿತ ದಂಗೆ ಎಂದು ಪರಿಗಣಿಸಬಹುದು?

ಎ. ಮಾಪಿಲ್ಲ ದಂಗೆ ಬಿ. ಸಂತಾಲ್ ದಂಗೆ
ಸಿ. ಬಿಲ್ ದಂಗೆ ಡಿ. ರಾಮನಾಥಪುರ ದಂಗೆ

ಉತ್ತರ : ಎ

3. ಗುಲಾಮಗಿರಿಯ ವ್ಯಾಪಾರಕ್ಕೆ ವಿರೋಧವನ್ನು ಮೊಟ್ಟಮೊದಲ ಬಾರಿಗೆ ಯಾವ ರಾಷ್ಟ್ರದಲ್ಲಿ ವ್ಯಕ್ತಪಡಿಸಲಾಯಿತು?

ಎ. ಸೇಂಟ್ ಡೊಮಿಂಗು ಬಿ. ಸೆನೆಗಲ್
ಸಿ. ಸುಡಾನ್ ಡಿ. ಇಥಿಯೋಪಿಯ

ಉತ್ತರ : ಎ

4. ಈಶಾನ್ಯ ಪ್ರದೇಶ ವಿಶೇಷ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ ಅನುದಾನಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆ ಗುರುತಿಸಿ?

1. ಸಂಪೂರ್ಣವಾಗಿ ಕೇಂದ್ರ ಸರ್ಕಾರ ಪ್ರಯೋಜಿತ ಕಾರ್ಯಕ್ರಮವಾಗಿದೆ.
2. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆಯಾಗುವ ಅನುದಾನವನ್ನು 60:40 ಅನುಪಾತದಲ್ಲಿ ಹಂಚಿಕೊಳ್ಳುತ್ತವೆ.
3. ಸಂಪೂರ್ಣವಾಗಿ ರಾಜ್ಯ ಸರ್ಕಾರಗಳು ಅನುದಾನ ಮೊತ್ತವನ್ನು ಭರಿಸುತ್ತವೆ.

ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. 1 ಮಾತ್ರ ಬಿ. 1 ಮತ್ತು 3
ಸಿ. 2 ಮತ್ತು 3 ಡಿ. 3 ಮಾತ್ರ.

ಉತ್ತರ : ಬಿ

5. ಸರ್ಕಾರಿ ಇ-ಮಾರುಕಟ್ಟೆ ವೇದಿಕೆಗೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಭಾರತ ಸರ್ಕಾರ 2016 ರಲ್ಲಿ ಈ ವೇದಿಕೆಯನ್ನು ಜಾರಿಗೆ ತಂದಿತು.
2. ಸರ್ಕಾರಿ ಸಂಸ್ಥೆಗಳ ಕೊಂಡುಕೊಳ್ಳುವಿಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಈ ವೇದಿಕೆ ಜಾರಿಗೆ ತರಲಾಯಿತು.
3. ಪ್ರಸ್ತುತ ಈ ವೇದಿಕೆಯಲ್ಲಿ 30 ಲಕ್ಷಕ್ಕಿಂತ ಹೆಚ್ಚಿನ ಉತ್ಪನ್ನಗಳು ಲಭ್ಯವಿವೆ.

ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. 1, 2 ಮತ್ತು 3 ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 1 ಮತ್ತು 2.

ಉತ್ತರ : ಎ

6. 'ಹಸಿರು ಚಿನ್ನದ ಸಂಗ್ರಹಣೆ' ಕೆಳಗಿನ ಯಾವ ವಿಚಾರಗಳಿಗೆ ಸಂಬಂಧಿಸಿದೆ?

ಎ. ಆನ್‌ಲೈನ್ ವೇದಿಕೆಯಲ್ಲಿ ಚಿನ್ನವನ್ನು ಪಡೆದುಕೊಳ್ಳುವ ಪ್ರಕ್ರಿಯೆ.
ಬಿ. ಸಾರ್ವಜನಿಕ ವಲಯದ ಉದ್ಯಮಿಗಳ ಶೇರುಗಳನ್ನು ಆನ್‌ಲೈನ್ ಮೂಲಕ ಕೊಂಡುಕೊಳ್ಳುವ ಪ್ರಕ್ರಿಯೆ.
ಸಿ. ಬಿದಿರು ಉತ್ಪನ್ನಗಳಿಗೆ ಸರ್ಕಾರಿ ಇ-ಮಾರುಕಟ್ಟೆಯಲ್ಲಿ ವೇದಿಕೆಯನ್ನು ಕಲ್ಪಿಸಲಾಗಿದೆ.
ಡಿ. ಬುಡಕಟ್ಟು ಜನರ ಉತ್ಪನ್ನಗಳಿಗೆ ವಿಶೇಷ ಮಾರುಕಟ್ಟೆಯನ್ನು ಕಲ್ಪಿಸಲಾಗಿದೆ.

ಉತ್ತರ : ಸಿ

7. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ.

ಎ. ಅರ್ಥಶಾಸ್ತ್ರವನ್ನು ಎಲ್ಲ 'ಸಮಾಜಶಾಸ್ತ್ರಗಳ ರಾಣಿ' ಎಂದು ಕರೆಯುತ್ತಾರೆ.
ಬಿ. ಭಾರತದ ವೃದ್ಧಪಿತಾಮಹ ಎಂದು ದಾದಾಬಾಯಿ ನವರೋಜಿ ಅವರು ಪ್ರಸಿದ್ಧರಾಗಿದ್ದಾರೆ.
ಕೋಡ್ ಬಳಸಿ ಸರಿ ಉತ್ತರ ಗುರುತಿಸಿ
ಎ. ಹೇಳಿಕೆ ಎ ಮಾತ್ರ ಸರಿಯಾಗಿದೆ.
ಬಿ. ಹೇಳಿಕೆ ಬಿ ಮಾತ್ರ ಸರಿಯಾಗಿದೆ.
ಸಿ. ಮೇಲಿನ ಎರಡು ಹೇಳಿಕೆಗಳೂ ಸರಿಯಾಗಿವೆ.
ಡಿ. ಮೇಲಿನ ಎರಡು ಹೇಳಿಕೆಗಳೂ ತಪ್ಪಾಗಿವೆ.

ಉತ್ತರ; ಸಿ

8. 'ಕೆಂಪು ಪಟ್ಟಿ' ವೃತ್ತಿ ಎಂದರೆ?

ಎ. ಪ್ರಾಥಮಿಕ ವಲಯದ ವೃತ್ತಿಯಾಗಿದೆ
ಬಿ. ಕೈಗಾರಿಕಾ ವಲಯದ ವೃತ್ತಿಯಾಗಿದೆ
ಸಿ. ತೃತೀಯ ವಲಯದ ವೃತ್ತಿಯಾಗಿದೆ
ಡಿ. ಮೇಲಿನ ಯಾವುದು ಅಲ್ಲ

ಉತ್ತರ: ಎ

9. ಭಾರತದಲ್ಲಿ ನಿರ್ದಿಷ್ಟವಾಗಿ ದುರ್ಬಲ ಬುಡಕಟ್ಟು ಗುಂಪುಗಳ (PVTGs) ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಎ. PVTG ಗಳು ಪರಿಶಿಷ್ಟ ಪಂಗಡಗಳ ಉಪವಿಭಾಗವಾಗಿದ್ದು, ಅವು ತೀವ್ರ ದುರ್ಬಲ ಮತ್ತು ಅಂಚಿನ ಸಮುದಾಯಗಳು ಎಂದು ಗುರುತಿಸಲ್ಪಟ್ಟಿವೆ.
ಬಿ. ಭಾರತ ಸರ್ಕಾರವು ಗುರುತಿಸಿರುವ 100 ಕ್ಕೂ ಹೆಚ್ಚು PVTG ಗಳು ಇವೆ.
ಸಿ. ಬುಡಕಟ್ಟು ವ್ಯವಹಾರಗಳ ಸಚಿವಾಲಯವು PVTG ಗಳ ಕಲ್ಯಾಣ ಮತ್ತು ಅಭಿವೃದ್ಧಿಯ ಜವಾಬ್ದಾರಿಯನ್ನು ಹೊಂದಿದೆ.
ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?
(1) ಎ ಮತ್ತು ಬಿ ಮಾತ್ರ (2) ಬಿ ಮತ್ತು ಸಿ ಮಾತ್ರ
(3) ಎ ಮತ್ತು ಸಿ ಮಾತ್ರ (4) ಎ, ಬಿ ಮತ್ತು ಸಿ

ಉತ್ತರ: 3

10. ಕೆಳಗಿನ ಯಾವ ರಾಷ್ಟ್ರಗಳು 2007 ರಲ್ಲಿ ಚುನಾವಣಾ ನಂತರದ ಹಿಂಸಾಚಾರಕ್ಕೆ ಸಾಕ್ಷಿಯಾದವು?

ಎ. ಕೀನ್ಯಾ ಬಿ. ದಕ್ಷಿಣ ಆಫ್ರಿಕಾ
ಸಿ. ಶ್ರೀಲಂಕಾ ಬಿ. ದಕ್ಷಿಣ ಕೊರಿಯಾ

ಉತ್ತರ: ಎ

ದೇಶದ ನೆಲ ಅತಿಕ್ರಮಣ ಇಡೀ ಲಡಾಕ್‌ಗೆ ಗೊತ್ತು: ರಾಹುಲ್ ಗಾಂಧಿ

ಚೀನಾ ಭೂಪಟ: ಮೋದಿ ಹೇಳಿಕೆಗೆ ಪಟ್ಟು


ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): 'ಚೀನಾವು ಭಾರತದ ಒಂದಿಂಚು ಭೂಮಿಯನ್ನೂ ಅತಿಕ್ರಮಿಸಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇದು ಶುದ್ಧ ಸುಳ್ಳು. ನಮ್ಮ ನೆಲದ ಕಬಳಿಕೆ ಆಗಿರುವುದು ಇಡೀ ಲಡಾಕ್‌ಗೆ ಗೊತ್ತಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, 'ಅರುಣಾಚಲ ಪ್ರದೇಶ ಹಾಗೂ ಅಕ್ಸಾಯ್ ಚಿನ್ ಪ್ರದೇಶ ತನಗೆ ಸೇರಿದೆ ಎಂದು ನೆರೆಯ ರಾಷ್ಟ್ರ ಚೀನಾವು ಹೊಸ ಭೂಪಟವನ್ನು ಬಿಡುಗಡೆಗೊಳಿಸಿದೆ. ಇದು ಗಂಭೀರ ವಿಷಯವೂ ಆಗಿದೆ. ಈ ಕುರಿತು ಮೋದಿ ಹೇಳಿಕೆ ನೀಡಬೇಕಿದೆ' ಎಂದು ಒತ್ತಾಯಿಸಿದರು.

'ನಾನು ಲಡಾಕ್‌ಗೆ ಇತ್ತೀಚೆಗೆ ಭೇಟಿ ನೀಡಿದ್ದೆ. ಅಲ್ಲಿ ಚೀನಾವು ಗಡಿ ಪ್ರವೇಶಿಸಿ ದೇಶಕ್ಕೆ ಸೇರಿದ ನೆಲವನ್ನು ಅತಿಕ್ರಮಿಸಿ ಕೊಂಡಿದೆ. ಈ ಬಗ್ಗೆ ಹಲವು ಬಾರಿ ನಾನು ಹೇಳಿಕೆ ನೀಡುತ್ತಲೇ ಬಂದಿದ್ದೇನೆ' ಎಂದರು.

ಅರುಣಾಚಲ ಪ್ರದೇಶ ಸೇರಿದಂತೆ ಭಾರತದ ಕೆಲವು ಭೂಭಾಗಗಳು ತನ್ನದೆಂದು ಪ್ರತಿಪಾದಿಸಿ ಚೀನಾ ಹೊಸ 'ಭೂಪಟ' ಬಿಡುಗಡೆಗೊಳಿಸಿದೆ. ಇದಕ್ಕೆ ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದ್ದು, ಈ ಪ್ರದೇಶಗಳು ಭಾರತದ ಅವಿಭಾಜ್ಯ ಅಂಗವಾಗಿವೆ. ಆದರೆ, ಪದೇಪದೇ ಚೀನಾವು ಈ ಅಪರಾಧ ಕೃತ್ಯ ಎಸಗುತ್ತಿದೆ ಎಂದಿದೆ.

ಭಾರತ ಹಿತಾಸಕ್ತಿಗೆ ವಿರುದ್ಧವಾಗಿ ರಾಹುಲ್ ಕೆಲಸ: ಬಿಜೆಪಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೇಶದ ಹಿತಾಸಕ್ತಿ ವಿರುದ್ಧ ಕೆಲಸ ಮಾಡುತ್ತಾರೆ ಎಂದು ಆರೋಪಿಸಿರುವ ಬಿಜೆಪಿ, ಈ ಉದ್ದೇಶಕ್ಕಾಗಿಯೇ ಕಾಂಗ್ರೆಸ್ ಹಾಗೂ ಚೀನಾದ ಕಮ್ಯುನಿಸ್ಟ್ ಪಾರ್ಟಿ ನಡುವೆ ಒಪ್ಪಂದವಾಗಿದೆಯೇ ಎಂದು ಬುಧವಾರ ಪ್ರಶ್ನಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಗೌರವ್ ಭಾಟಿಯಾ, 'ರಾಹುಲ್ ಗಾಂಧಿ ಅವರು ಭಾರತದ ಭದ್ರತಾ ಪಡೆಗಳ ನೈತಿಕಸ್ಥೈರ್ಯಕ್ಕೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

ರಾಹುಲ್ ವಿರುದ್ಧ ವಾಗ್ದಾಳಿ ನಡೆಸಿದ ಭಾಟಿಯಾ, 2008ರಲ್ಲಿ ಕಾಂಗ್ರೆಸ್ ಹಾಗೂ ಚೀನಾದ ಕಮ್ಯುನಿಸ್ಟ್ ಪಾರ್ಟಿ (ಸಿಸಿಪಿ) ನಡುವೆ ಮಾಡಿಕೊಳ್ಳಲಾಗಿದೆ ಎನ್ನಲಾದ ಒಪ್ಪಂದವನ್ನು ಪ್ರಸ್ತಾಪಿಸಿದರು.

'ಭಾರತ ಮಾತೆಯ ಭೂಭಾಗ ವನ್ನು ಚೀನಾಕ್ಕೆ ಬಿಟ್ಟು-ಕೊಟ್ಟವರು ವಿಶ್ವಾಸ ದ್ರೋಹಿಗಳು' ಎಂಬುದಾಗಿ ರಾಹುಲ್ ಇತ್ತೀಚೆಗೆ ಹೇಳಿದ್ದರು.

'ಜವಾಹರಲಾಲ್ ನೆಹರೂ ಅವರು ಪ್ರಧಾನಿಯಾಗಿದ್ದ ವೇಳೆ ಭಾರತದ 43 ಸಾವಿರ ಚದರ ಕಿ.ಮೀ.ನಷ್ಟು ಪ್ರದೇಶವನ್ನು ಚೀನಾ ಆಕ್ರಮಿಸಿಕೊಂಡಿತು. ಹಾಗಾಗಿ, ಕಾಂಗ್ರೆಸ್‌ನ ಪರಮೋಚ್ಚ ನಾಯಕರೆನಿಸಿದ್ದ ಅವರ ಮುತ್ತಜ್ಜ ವಿಶ್ವಾಸದ್ರೋಹಿ ಎಂಬುದು ರಾಹುಲ್ ಅವರ ಅಭಿಪ್ರಾಯವೇ' ಎಂದು ಭಾಟಿಯಾ ಪ್ರಶ್ನಿಸಿದರು.

'ಕಾಂಗ್ರೆಸ್ ಮತ್ತು ಸಿಸಿಪಿ ಸಹಿ ಹಾಕಿರುವ ಒಪ್ಪಂದದ ವಿವರಗಳನ್ನು ರಾಹುಲ್ ಬಹಿರಂಗಪಡಿಸಬೇಕು' ಎಂದು ಆಗ್ರಹಿಸಿದ ಅವರು, 'ಭಾರತದ ವಿರುದ್ಧ ಗೂಢಚಾರಿಕೆ ನಡೆಸಲು, ಭಾರತೀಯ ಪಡೆಗಳ ಮನೋಸ್ಥೈರ್ಯ ಕುಸಿಯುವಂತೆ ಮಾಡಲು ರಾಹುಲ್ ಗಾಂಧಿಗೆ ಈ ಒಪ್ಪಂದ ಅಗತ್ಯವಾಗಿತ್ತು ಎನ್ನಲಾಗುತ್ತಿದೆ' ಎಂದು ಆರೋಪಿಸಿದರು.

> **ರಾಹುಲ್ ಅವರದ್ದು ಆಧಾರ ರಹಿತ ಹೇಳಿಕೆ. ಅವರಿಗೆ ದೇಶದ ನೀತಿಗಳ ಬಗ್ಗೆ ಸ್ಪಷ್ಟತೆ ಇಲ್ಲ. ನೆಹರೂ ಪ್ರಧಾನಿಯಾಗಿದ್ದ ವೇಳೆ ಚೀನಾವು ಭಾರತದ ನೆಲವನ್ನು ಕಬಳಿಸಿತ್ತು**
> **ಪ್ರಲ್ಹಾದ ಜೋಶಿ,** ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಚೀನಾ ಸಮರ್ಥನೆ

ಬೀಜಿಂಗ್ (ಪಿಟಿಐ): ಅರುಣಾಚಲ ಪ್ರದೇಶ, ಅಕ್ಸಾಯ್ ಚಿನ್ ಪ್ರದೇಶ ಒಳಗೊಂಡ ಹೊಸ ಭೂಪಟವನ್ನು ಬಿಡುಗಡೆ ಮಾಡಿರುವ ತನ್ನ ಕ್ರಮವನ್ನು ಚೀನಾ ಬುಧವಾರ ಸಮರ್ಥಿಸಿ-ಕೊಂಡಿದೆ.

'ಇದು ತನ್ನ ಕಾನೂನಿನ ಅನ್ವಯ ಕೈಗೊಂಡಿರುವ ರೂಢಿಗತ ಕ್ರಮವಾಗಿದೆ. ಈ ವಿಚಾರವಾಗಿ ಭಾರತ ವಸ್ತುನಿಷ್ಠ-ವಾಗಿ ಹಾಗೂ ಶಾಂತಚಿತ್ತದಿಂದ ವರ್ತಿಸಬೇಕು. ಅತಿರೇಕದ ವ್ಯಾಖ್ಯಾನ ಕೈಬಿಡಬೇಕು' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆಬ್‌ಬಿನ್ ಹೇಳಿದ್ದಾರೆ. ಚೀನಾ ಬಿಡುಗಡೆ ಮಾಡಿದ್ದ ಹೊಸ ಭೂಪಟಕ್ಕೆ ಭಾರತ ಆಕ್ಷೇಪ ವ್ಯಕ್ತಪಡಿಸಿ, ಮಂಗಳವಾರ ಪ್ರತಿಭಟನೆ ದಾಖಲಿಸಿತ್ತು.

ಬಿಜೆಪಿಯ ಸುಳ್ಳುಗಳ ನಾಶ: ಪ್ರಿಯಾಂಕಾ ಪಣ

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರ ನಡುವೆ ಮುಸುಕಿನ ಗುದ್ದಾಟ ನಡೆಯುತ್ತಿದೆ ಎಂದಿರುವ ಬಿಜೆಪಿಯ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವಿಯಾ ಅವರಿಗೆ ತಿರುಗೇಟು ನೀಡಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರು, 'ನಾನು ಮತ್ತು ನನ್ನ ಸಹೋದರ ಸೇರಿಕೊಂಡು ಆಡಳಿತಾರೂಢ ಪಕ್ಷದ ಸುಳ್ಳು, ಲೂಟಿ ಮತ್ತು ಪೊಳ್ಳು ಪ್ರಚಾರವನ್ನು ನಾಶಗೊಳಿಸುತ್ತೇವೆ' ಎಂದು ಹೇಳಿದ್ದಾರೆ.

'ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆ ಇರುವಾಗ ಬಿಜೆಪಿ ಪಾಲಿಗೆ ಚರ್ಚಿಸಲು ಇದೊಂದೇ ವಿಷಯ ಉಳಿದಿತ್ತೇ?' ಎಂದು ಪ್ರಿಯಾಂಕಾ ಪ್ರಶ್ನಿಸಿದ್ದಾರೆ.

'ಕ್ಷಮಿಸಿ... ನಿಮ್ಮ ಸಣ್ಣ ಮನಸ್ಸಿನ ಈ ಕನಸು ಎಂದಿಗೂ ಈಡೇರದು. ನನ್ನ ಸಹೋದರ ಮತ್ತು ನನ್ನ ನಡುವೆ ಯಾವಾಗಲೂ ಪರಸ್ಪರ ಪ್ರೀತಿ, ನಂಬಿಕೆ, ಗೌರವ ಮತ್ತು ನಿಷ್ಠೆ ಇದೆ. ಚಿಂತಿಸಬೇಡಿ, ನಾವಿಬ್ಬರು ಅಣ್ಣ- ತಂಗಿಯರು ದೇಶದ ಲಕ್ಷಾಂತರ ಅಣ್ಣ- ತಂಗಿಯರ ಜತೆಗೂಡಿ ನಿಮ್ಮ ಸುಳ್ಳು, ಲೂಟಿ ಮತ್ತು ಪೊಳ್ಳು ಪ್ರಚಾರದ ಅಹಂಕಾರವನ್ನು ಮುರಿಯುತ್ತೇವೆ' ಎಂದು ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಗುಂಡಿಕ್ಕಿ ಅಮೆಜಾನ್ ಮ್ಯಾನೇಜರ್ ಹತ್ಯೆ

ನವದೆಹಲಿ (ಪಿಟಿಐ): ಇ-ಕಾಮರ್ಸ್ ದೈತ್ಯ ಅಮೆಜಾನ್‌ನ ಹಿರಿಯ ವ್ಯವಸ್ಥಾಪಕ ಹರ್ಪ್ರೀತ್ ಗಿಲ್ ಅವರನ್ನು ಈಶಾನ್ಯ ದೆಹಲಿಯ ಭಜನಪುರ ಪ್ರದೇಶದಲ್ಲಿ ಅಪರಿಚಿತ ವ್ಯಕ್ತಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಮಂಗಳವಾರ ರಾತ್ರಿ 11.30ರ ಸುಮಾರಿಗೆ ಈ ಘಟನೆ ನಡೆದಿದ್ದು, ಸುಭಾಷ್ ವಿಹಾರ್‌ನಲ್ಲಿ ಹರ್ಪ್ರೀತ್ ಗಿಲ್ (36) ಮತ್ತು ಅವರ ಸಂಬಂಧಿ ಗೋವಿಂದ್ ಸಿಂಗ್ (32) ಮೇಲೆ ಐವರು ಗುಂಡು ಹಾರಿಸಿದ್ದಾರೆ.

ತಲೆಗೆ ಗುಂಡು ತಗುಲಿದ ಕಾರಣ ಗಿಲ್ ಮೃತಪಟ್ಟಿದ್ದಾರೆ ಎಂದು ಜಗ್ ಪ್ರವೇಶ್ ಚಂದ್ರ ಆಸ್ಪತ್ರೆಯ ವೈದ್ಯರು ಪ್ರಕಟಿಸಿದ್ದಾರೆ. ಆದರೆ, ಅವರ ಸಂಬಂಧಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಜನಪುರ ನಿವಾಸಿಯಾದ ಸಿಂಗ್, ಉಪಾಹಾರ ಕೇಂದ್ರ ಹೊಂದಿದ್ದಾರೆ. ಅವರ ತಲೆಗೂ ಗುಂಡು ತಗುಲಿದ್ದು, ಲೋಕನಾಯಕ ಜೈ ಪ್ರಕಾಶ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಉಪ ಪೊಲೀಸ್ ಆಯುಕ್ತ (ಈಶಾನ್ಯ) ಜಾಯ್ ಟಿರ್ಕಿ ತಿಳಿಸಿದ್ದಾರೆ.

'ರಜೆ ಇದ್ದ ಕಾರಣ ಹರ್ಪ್ರೀತ್ ತನ್ನ ಚಿಕ್ಕಪ್ಪನ ಜತೆ ದ್ವಿಚಕ್ರ ವಾಹನದಲ್ಲಿ ಹೋಗುವ ವೇಳೆ ಮತ್ತೊಂದು ಬೈಕ್ ಡಿಕ್ಕಿ ಹೊಡೆದು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಇದರಿಂದ ಕೋಪಗೊಂಡ ಹರ್ಪ್ರೀತ್, ಬೈಕ್ ಹಿಂಬಾಲಿಸಿಕೊಂಡು ಹೋಗಿ ಅವರೊಂದಿಗೆ ಜಗಳವಾಡಿದ್ದಾರೆ. ಆಗ ಹಿಂದಿನಿಂದ ಬಂದ ಇಬ್ಬರು ಗುಂಡು ಹಾರಿಸಿದ್ದಾರೆ' ಎಂದು ಹರ್ಪ್ರೀತ್ ಗಿಲ್ ಅವರ ಚಿಕ್ಕಪ್ಪ ಬಾಬಿ ಸಿಂಗ್ ಗಿಲ್ ತಿಳಿಸಿದ್ದಾರೆ.

ಹರ್ಪ್ರೀತ್ ಇತ್ತೀಚೆಗೆ ಬಡ್ತಿ ಪಡೆದಿದ್ದು, ಬೆಂಗಳೂರಿಗೆ ತೆರಳಲು ಸಿದ್ಧರಾಗಿದ್ದರು.

ದಾಳಿಕೋರರ ಗುರುತಿಗೆ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಲಾಗುತ್ತಿದ್ದು, ಗುಂಡಿನ ದಾಳಿಗೆ ಕಾರಣ ಪತ್ತೆ ಮಾಡಲಾಗುತ್ತಿದೆ. ಪ್ರಕರಣದ ತನಿಖೆಗಾಗಿ ಆರು ತಂಡಗಳನ್ನು ರಚಿಸಲಾಗಿದೆ.

ಮಣಿಪುರ: 27 ಎಫ್‌ಐಆರ್ ತನಿಖೆ ಆರಂಭಿಸಿದ ಸಿಬಿಐ

ನವದೆಹಲಿ (ಪಿಟಿಐ): ಕಳೆದ 4 ತಿಂಗಳಿಂದ ಮಣಿಪುರದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಸಂಬಂಧಿಸಿದಂತೆ ದಾಖಲಾದ 27 ಎಫ್‌ಐಆರ್‌ಗಳ ಕುರಿತು ಸಿಬಿಐ ತನಿಖೆ ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಬಿಐ ವಿಚಾರಣೆಗೆ ಕೈಗೆತ್ತಿಕೊಂಡಿರುವ ಒಟ್ಟು ಪ್ರಕರಣಗಳ ಪೈಕಿ 19 ಪ್ರಕರಣಗಳು ಮಹಿಳೆಯರ ಮೇಲೆ ನಡೆದ ದೌರ್ಜನ್ಯಕ್ಕೆ ಸಂಬಂಧಿಸಿವೆ. ಉಳಿದಂತೆ ಶಸ್ತ್ರಾಸ್ತ್ರ ಲೂಟಿ ಮತ್ತು ಕೊಲೆಗೆ ಸಂಬಂಧಿಸಿದ ತಲಾ ಎರಡು ಪ್ರಕರಣಗಳು ಹಾಗೂ ಗಲಭೆ, ಹತ್ಯೆ, ಅಪಹರಣ ಮತ್ತು ಪಿತೂರಿಗೆ ಸಂಬಂಧಿಸಿದ ತಲಾ ಒಂದೊಂದು ಪ್ರಕರಣಗಳಿವೆ.

ಮಣಿಪುರದಲ್ಲಿ ದಾಖಲಾದ ಪ್ರಕರಣಗಳ ತನಿಖೆಗಾಗಿ ಸಿಬಿಐ 29 ಮಹಿಳಾ ಅಧಿಕಾರಿಗಳನ್ನು ಒಳಗೊಂಡ 53 ಜನರ ತಂಡವನ್ನು ರಚನೆ ಮಾಡಿದೆ.

ದಿಗ್ವಿಜಯ ಸಿಂಗ್ ವಿರುದ್ಧ ಪ್ರಕರಣ ದಾಖಲು

ದಾಮೋಹ್ (ಪಿಟಿಐ): ಇಲ್ಲಿನ ಜೈನ ಮಂದಿರದ ಬಗ್ಗೆ 'ಎಕ್ಸ್' (ಟ್ವಿಟರ್) ವೇದಿಕೆಯಲ್ಲಿ ದಾರಿತಪ್ಪಿಸುವ ಪೋಸ್ಟ್ ಹಾಕಿರುವ ಆರೋಪದಲ್ಲಿ ಕಾಂಗ್ರೆಸ್ ನಾಯಕ ದಿಗ್ವಿಜಯ ಸಿಂಗ್ ವಿರುದ್ಧ ಮಧ್ಯಪ್ರದೇಶ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜನರನ್ನು ದಾರಿತಪ್ಪಿಸುವ ಪೋಸ್ಟ್ ಹಾಕಿರುವ ದಿಗ್ವಿಜಯ್ ಅವರ 'ಎಕ್ಸ್' ಖಾತೆಯನ್ನು ಅಮಾನತು ಮಾಡಬೇಕೆಂದು ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ವಿ.ಡಿ. ಶರ್ಮಾ ಒತ್ತಾಯಿಸಿದ್ದಾರೆ.

'ಕುಂಡಲ್‌ಪುರದ ಜೈನ ಮಂದಿರವನ್ನು ಬಜರಂಗ ದಳದವರು ಧ್ವಂಸ ಮಾಡಿದ್ದಾರೆ' ಎಂದು ಆರೋಪಿಸಿ ದಿಗ್ವಿಜಯ್ ಅವರು ಆ. 27 ರಂದು 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದರು.



ಸುಭಾಷಿತ

ಸತ್ಯಕ್ಕಾಗಿ ಏನನ್ನು ಬೇಕಾದರೂ ತ್ಯಾಗ ಮಾಡಬಹುದು, ಆದರೆ ಬೇರೆ ಯಾವುದೇ ಕಾರಣಕ್ಕೂ ಸತ್ಯವನ್ನು ತ್ಯಾಗ ಮಾಡಲಾಗದು.

–ಸ್ವಾಮಿ ವಿವೇಕಾನಂದ

ಎಲ್‌ಪಿಜಿ ದರ ಇಳಿಕೆ ಸ್ವಾಗತಾರ್ಹ ಬೆಲೆ ನಿಗದಿಗೆ ಸ್ಪಷ್ಟ ನೀತಿ ಬೇಕು

ಮನೆಗಳಲ್ಲಿ ಬಳಕೆ ಮಾಡುವ ಅಡುಗೆ ಅನಿಲ ಸಿಲಿಂಡರ್ ದರವನ್ನು ₹ 200ರಷ್ಟು ತಗ್ಗಿಸುವ ತೀರ್ಮಾನವನ್ನು ಕೇಂದ್ರ ಸಚಿವ ಸಂಪುಟವು ಕೈಗೊಂಡಿದೆ. ಬೆಲೆ ಪರಿಷ್ಕರಣೆಯು ಬುಧವಾರದಿಂದಲೇ ಜಾರಿಗೆ ಬಂದಿದೆ. ಮೂರು ವರ್ಷಗಳಲ್ಲಿ ಎಲ್‌ಪಿಜಿ ದರವು ಸರಿಸುಮಾರು ದುಪ್ಪಟ್ಟಾಗಿದ್ದುದನ್ನು ಅನುಭವಿಸಿರುವ ಜನಸಾಮಾನ್ಯ, ಕೇಂದ್ರದ ಈ ತೀರ್ಮಾನದಿಂದಾಗಿ ತುಸು ನಿರಾಳ ಆಗಿದ್ದಾರೆ. ಬೆಲೆ ಏರಿಕೆಯ ಪ್ರಮಾಣವು ವಿಪರೀತ ಅನ್ನಿಸುವ ಮಟ್ಟ ತಲುಪಿರುವ ಈ ದಿನಗಳಲ್ಲಿ, ಯಾವುದೇ ಅಗತ್ಯ ಉತ್ಪನ್ನ ಅಥವಾ ಸೇವೆಯ ಬೆಲೆಯಲ್ಲಿ ಇಳಿಕೆ ಆಗಿದೆ ಎಂಬ ಸುದ್ದಿಯು ಜನಸಾಮಾನ್ಯರಿಗೆ ಖಂಡಿತ ಸಮಾಧಾನ ತರುತ್ತದೆ. ಆದರೆ, ಜೀವನಾವಶ್ಯಕ ಉತ್ಪನ್ನಗಳ ಅಥವಾ ಸೇವೆಗಳ ಬೆಲೆಯನ್ನು ತಗ್ಗಿಸಲು ವಿಧಾನಸಭಾ ಚುನಾವಣೆ, ಲೋಕಸಭಾ ಚುನಾವಣೆ ಹತ್ತಿರವಾಗಬೇಕು ಎಂಬುದು ಮಾತ್ರ ವಿಷಾದಕರ. ವಾಸ್ತವದಲ್ಲಿ, ಜನಸಾಮಾನ್ಯರ ಬವಣೆಯನ್ನಷ್ಟೇ ಪರಿಗಣಿಸಿ ರಾಜ್ಯ ಸರ್ಕಾರಗಳು ಅಥವಾ ಕೇಂದ್ರ ಸರ್ಕಾರವು ಇಂಥದ್ದೊಂದು ತೀರ್ಮಾನ ತೆಗೆದುಕೊಳ್ಳಬೇಕು. ಜನರ ಜೀವನವನ್ನು ಹೆಚ್ಚು ಸಹನೀಯ ಗೊಳಿಸುವ ಯಾವುದೇ ತೀರ್ಮಾನ ಕೈಗೊಳ್ಳಲು ಚುನಾವಣೆ ಹತ್ತಿರವಾಗಬೇಕು ಎಂಬ ಅಘೋಷಿತ ನಿಲುವು ಈಗ ಚಾಲ್ತಿಯಲ್ಲಿ ಇರುವಂತೆ ಕಾಣುತ್ತದೆ. ಮಧ್ಯಪ್ರದೇಶ, ರಾಜಸ್ಥಾನ, ತೆಲಂಗಾಣ, ಛತ್ತೀಸಗಢ, ಮಿಜೋರಾಂ ವಿಧಾನಸಭೆಗಳಿಗೆ ಚುನಾವಣೆ ಹತ್ತಿರವಾಗುತ್ತಿದೆ. 2024ರಲ್ಲಿ ಲೋಕಸಭಾ ಚುನಾವಣೆ ಇದೆ. ಅದಕ್ಕೆ ಸಂಬಂಧಿಸಿದಂತೆ ಎನ್‌ಡಿಎ ಹಾಗೂ ಐ.ಎನ್.ಡಿ.ಐ.ಎ ('ಇಂಡಿಯಾ') ಮೈತ್ರಿಕೂಟಗಳಲ್ಲಿ ಚಟುವಟಿಕೆಗಳು ಕಾವು ಪಡೆದುಕೊಳ್ಳುತ್ತಿವೆ ಎಂಬುದನ್ನು ಮರೆಯುವಂತಿಲ್ಲ.



ಜನರ ಜೀವನವನ್ನು ಹೆಚ್ಚು ಸಹನೀಯಗೊಳಿಸುವ ಯಾವುದೇ ತೀರ್ಮಾನ ಕೈಗೊಳ್ಳಲು ಚುನಾವಣೆ ಹತ್ತಿರವಾಗಬೇಕು ಎಂಬ ಅಘೋಷಿತ ನಿಲುವು ಈಗ ಚಾಲ್ತಿಯಲ್ಲಿ ಇರುವಂತೆ ಕಾಣುತ್ತಿದೆ

2021ರಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ದೊಡ್ಡ ಪ್ರಮಾಣದಲ್ಲಿ ತಗ್ಗಿಸಿತು. ಆಗ ಕೇಂದ್ರ ಹಣಕಾಸು ಸಚಿವಾಲಯವು 'ಹಿಂಗಾರು ಹಂಗಾಮಿನಲ್ಲಿ ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಡೀಸೆಲ್ ಮೇಲೆ ₹ 10ರಷ್ಟು ಬೆಲೆ ಇಳಿಕೆ ಮಾಡಲಾಗಿದೆ. ಅಲ್ಲದೆ, ಹಬ್ಬದ ಸಂದರ್ಭದಲ್ಲಿ ಜನರು ಖರೀದಿ ಚಟುವಟಿಕೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಲಿ, ಆರ್ಥಿಕ ಚಟುವಟಿಕೆಗಳು ಬಿರುಸು ಪಡೆಯಲಿ ಎಂಬ ಉದ್ದೇಶವೂ ಎಕ್ಸೈಸ್ ಸುಂಕ ಇಳಿಕೆಯ ಹಿಂದೆ ಇದೆ. ಡೀಸೆಲ್ ಬೆಲೆ ಇಳಿಕೆಯಿಂದ ಹಣದುಬ್ಬರ ತಗ್ಗಬಹುದು' ಎಂದು ಹೇಳಿತ್ತು. ವಾಸ್ತವದಲ್ಲಿ, ಎಕ್ಸೈಸ್ ಸುಂಕ ತಗ್ಗಿಸುವ ತೀರ್ಮಾನ ಕೈಗೊಂಡಿದ್ದರ ಹಿಂದೆ ರಾಜಕೀಯ ಲೆಕ್ಕಾಚಾರಗಳು ಇರಲಿಲ್ಲ ಎನ್ನಲಾಗದು. ದೇಶದ ವಿವಿಧ ರಾಜ್ಯಗಳ ಒಟ್ಟು 29 ವಿಧಾನಸಭಾ ಕ್ಷೇತ್ರಗಳಿಗೆ ಹಾಗೂ ಮೂರು ಲೋಕಸಭಾ ಕ್ಷೇತ್ರಗಳಿಗೆ ಆ ಹೊತ್ತಿನಲ್ಲಿ ನಡೆದಿದ್ದ ಉಪಚುನಾವಣೆಯಲ್ಲಿ ಬಿಜೆಪಿ ಒಟ್ಟಾರೆಯಾಗಿ ತುಸು ಹಿನ್ನಡೆ ಅನುಭವಿಸಿತ್ತು, ಹಿಮಾಚಲ ಪ್ರದೇಶದಲ್ಲಿ ದೊಡ್ಡ ಹಿನ್ನಡೆ ಕಂಡಿತ್ತು. ಚುನಾವಣಾ ಫಲಿತಾಂಶಗಳು ಬಂದ ಒಂದೇ ದಿನದಲ್ಲಿ ಕೇಂದ್ರವು ಪೆಟ್ರೋಲ್, ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಿತ್ತು. 2022ರ ಆರಂಭದಲ್ಲಿ ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಮತ್ತು ಮಣಿಪುರ ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿಕ್ಕಿತ್ತು. ಎಕ್ಸೈಸ್ ಸುಂಕ ಕಡಿತದ ಹಿಂದೆ ಆ ಚುನಾವಣೆಗಳಲ್ಲಿ ಆಗಬಹುದಾದ ಪ್ರಯೋಜನಗಳ ಲೆಕ್ಕಾಚಾರವೂ ಇತ್ತು.

ಕೋವಿಡ್ ಸಾಂಕ್ರಾಮಿಕವು ದೇಶವನ್ನು ಆವರಿಸುವ ಮೊದಲು ಎಲ್‌ಪಿಜಿ ಸಿಲಿಂಡರ್‌ಗೆ ಕೇಂದ್ರವು ಸಬ್ಸಿಡಿ ನೀಡುತ್ತಿತ್ತು. ಸಬ್ಸಿಡಿ ಮೊತ್ತವನ್ನು ಬಳಕೆದಾರರ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತಿತ್ತು. ಆದರೆ, ಸಬ್ಸಿಡಿ ನೀಡುವ ಪದ್ಧತಿಯನ್ನು ಕೇಂದ್ರವು ಏಕಾಏಕಿ ಕೈಬಿಟ್ಟಿತು. ಇದಕ್ಕೆ ಕಾರಣ ಏನು ಎಂಬ ವಿವರಣೆಯನ್ನು ಅದು ನೀಡಲಿಲ್ಲ. ಅಷ್ಟೇ ಏಕೆ, ಸಬ್ಸಿಡಿ ವ್ಯವಸ್ಥೆ ಇನ್ನು ಇರುವುದಿಲ್ಲ ಎಂಬ ಅಧಿಕೃತ ಘೋಷಣೆಯೂ ಆಗ ಹೊರಬೀಳಲಿಲ್ಲ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಸರ್ಕಾರ ನಿರ್ಧರಿಸಬಾರದು; ಮಾರುಕಟ್ಟೆ ಪರಿಸ್ಥಿತಿಯನ್ನು ಆಧರಿಸಿ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಬೆಲೆ ನಿಗದಿ ಮಾಡಬೇಕು ಎಂಬುದು ಕೇಂದ್ರದ ಪ್ರಕಟಿತ ನಿಲುವು. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರಿಳಿತ ಇದ್ದರೂ, ಈ ಎರಡು ಇಂಧನಗಳ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ತಿಂಗಳುಗಳಿಂದ ಸ್ಥಿರವಾಗಿದೆ. ಬೆಲೆ ಸ್ಥಿರತೆಯು ಸ್ವಾಗತಾರ್ಹ ಹೌದಾದರೂ, ಕೇಂದ್ರವು ಈ ವಿಚಾರದಲ್ಲಿ ತನ್ನ ನಿಲುವು ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಆಗ, ಲೋಕಸಭಾ ಚುನಾವಣೆ ಇನ್ನಷ್ಟು ಹತ್ತಿರವಾದಾಗ ಪೆಟ್ರೋಲ್, ಡೀಸೆಲ್ ಬೆಲೆಯೂ ತಗ್ಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ. ಹಣದುಬ್ಬರ ನಿಯಂತ್ರಿಸಲು ರೆಪೊ ದರದಲ್ಲಿ ಏರಿಳಿಕೆ ಮಾತ್ರ ಪರಿಹಾರವಲ್ಲ ಎಂಬ ಮಾತನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈಚೆಗೆ ಆಡಿದ್ದಾರೆ. ಮಿತಿ ಮೀರಿರುವ ಹಣದುಬ್ಬರ ನಿಯಂತ್ರಿಸಲು ತಾವು ಕೂಡ ಜೀವನಾವಶ್ಯಕ ಉತ್ಪನ್ನ, ಸೇವೆಗಳ ಬೆಲೆಯನ್ನು ನಿಯಂತ್ರಿಸಲು ಸಾಧ್ಯವೇ ಎಂಬ ಬಗ್ಗೆ ಸರ್ಕಾರಗಳು ಆಲೋಚಿಸಬೇಕು.

ದಿನದ ಟ್ವೀಟ್


ನಿಜವಾದ ಮಹಿಳಾಶಕ್ತಿ!



ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾರಿಗೊಳಿಸಿರುವ 'ಗೃಹಲಕ್ಷ್ಮಿ' ಯೋಜನೆಯು ಮನೆ ಯಜಮಾನಿಗೆ ತಿಂಗಳಿಗೆ ₹ 2,000 ನೀಡುತ್ತದೆ. ಎಲ್‌ಪಿಜಿ ದರ ಇಳಿಸಿ 'ಸಹೋದರಿಯರಿಗೆ' ಪ್ರಧಾನಿ ರಾಖಿ 'ಉಡುಗೊರೆ' ನೀಡಿದ್ದಾರೆ. ಮಧ್ಯಪ್ರದೇಶ ಸರ್ಕಾರವು 'ಲಾಡ್ಲಿ ಬೆಹೆನಾ' ಮೂಲಕ ಮಹಿಳೆಯರಿಗೆ ₹ 1,250 ನೀಡಲಿದೆ. ಮಮತಾ ಬ್ಯಾನರ್ಜಿಯವರ ಹಲವು ಕಾರ್ಯಕ್ರಮಗಳು ಮಹಿಳೆಯರನ್ನು ಗುರಿಯಾಗಿಟ್ಟಿವೆ. ಜಾತಿ, ವರ್ಗ, ಸಮುದಾಯವನ್ನು ಮೀರಿದ, ಶೇ 49ರಷ್ಟಿರುವ ಮಹಿಳಾ ವೋಟ್ ಬ್ಯಾಂಕ್‌ನ ನಿಜವಾದ ಶಕ್ತಿ ಇದು. ಎಲ್ಲವೂ ಒಳ್ಳೆಯದೆ. ಆದರೆ ಈ ನೇತಾರರು ಮಹಿಳಾ ಸುರಕ್ಷತೆಗೆ ಹೆಚ್ಚಿನ ಗಮನಹರಿಸಬೇಕು, ಅಲ್ಲವೇ? (ಎನ್‌ಸಿಆರ್‌ಬಿ– 2021ರ ಅಂಕಿಅಂಶದಂತೆ ದಿನಕ್ಕೆ ಸರಾಸರಿ 87 ಅತ್ಯಾಚಾರಗಳು ವರದಿಯಾಗುತ್ತಿವೆ) ಮಹಿಳೆಯರಿಗೆ ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ನೀಡುವ ವಿಷಯ ಎಲ್ಲಿಗೆ ಬಂತು? ಬಹುತೇಕ ವಿಧಾನಸಭೆಗಳು ಶೇ 10ಕ್ಕಿಂತಲೂ ಕಡಿಮೆ ಮಹಿಳಾ ಪ್ರಾತಿನಿಧ್ಯ ಹೊಂದಿವೆ. ಚಿಂತಿಸಿ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ಅಡುಗೆ ಅನಿಲದ ದರ ಇಳಿಕೆ ಹಾಗೂ ಕೆಲವು ರಾಜ್ಯಗಳಲ್ಲಿನ ವಿಧಾನಸಭಾ ಚುನಾವಣೆಯ ವಾತಾವರಣ ಗಮನಿಸಿದರೆ, ಡಿಸೆಂಬರ್ ತಿಂಗಳಲ್ಲೇ ಲೋಕಸಭಾ ಚುನಾವಣೆ ನಡೆಯಬಹುದು. ಒಂದೆಡೆ ಪ್ರಧಾನಿ, ಉಚಿತ ಕೊಡುಗೆ ಕೊಡಬೇಡಿ ಎನ್ನುತ್ತಾರೆ. ಮಧ್ಯಪ್ರದೇಶದಲ್ಲಿ ಬಿಜೆಪಿ ಉಚಿತ ಕೊಡುಗೆ ಘೋಷಣೆ ಮಾಡಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ ಮತ್ತಷ್ಟು ಉಚಿತ ಕೊಡುಗೆಗಳನ್ನು ಘೋಷಿಸಿದರೂ ಅಚ್ಚರಿಯಿಲ್ಲ. ಹೇಳುವುದು ಒಂದು, ಮಾಡುವುದು ಮತ್ತೊಂದು.

ಜಗದೀಶ ಶೆಟ್ಟರ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ
ಸೋಮವಾರ, 31-8-1998

- **ನಿಗಮ, ಮಂಡಲಿ ಪುನರ್ರಚನೆ ತಂದ ಅತೃಪ್ತಿ**

ಬೆಂಗಳೂರು, ಆ. 30– ಬಹುದಿನಗಳಿಂದ ನನೆಗುದಿಗೆ ಬಿದ್ದಿದ್ದ ರಾಜ್ಯದ ವಿವಿಧ ನಿಗಮ–ಮಂಡಲಿಗಳ ಪುನರ್ರಚನೆ ಕಾರ್ಯ ಶನಿವಾರ ಕೊನೆಗೂ ಪೂರ್ಣಗೊಂಡಿತಾದರೂ ಇದು ಆಡಳಿತಾರೂಢ ಜನತಾದಳದ ಶಾಸಕರು ಮತ್ತು ಕಾರ್ಯಕರ್ತರಲ್ಲಿ ಸಮಾಧಾನಕ್ಕಿಂತ ಹೆಚ್ಚಾಗಿ ಅಸಮಾಧಾನವನ್ನೇ ಹುಟ್ಟಿಸಿದೆ.

ರಾಜ್ಯದಲ್ಲಿ ಒಟ್ಟು 109 ನಿಗಮ–ಮಂಡಲಿಗಳು, ಅಭಿವೃದ್ಧಿ ಪ್ರಾಧಿಕಾರಗಳಿದ್ದು, ಅವುಗಳ ಪೈಕಿ 24 ಸಂಸ್ಥೆಗಳಿಗೆ ಪಕ್ಷದ ಶಾಸಕರನ್ನು ಹಾಗೂ ಉಳಿದ 85 ಸಂಸ್ಥೆಗಳಿಗೆ ಪಕ್ಷದ ಹಿರಿಯ ಕಾರ್ಯಕರ್ತರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಹೀಗೆ ಒಟ್ಟು 681 ಜನರಿಗೆ ಒಂದಲ್ಲಾ ಒಂದು ರೀತಿಯ ಅಧಿಕಾರ ಸ್ಥಾನ ದೊರೆತಿದೆ. ಆದರೆ ಅಧಿಕಾರ ಸ್ಥಾನಗಳಿಗಾಗಿ 'ಹೋರಾಟ' ನಡೆಸಿದರೂ ಯಾವುದೇ ಫಲ ಸಿಗದೆ ಹತಾಶರಾದವರ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ.

50 ವರ್ಷಗಳ ಹಿಂದೆ
ಶುಕ್ರವಾರ, 31-8-1973

- **ಲೋಕಸಭೆ ಕಲಾಪವನ್ನು ಜನರೂ ನೋಡಲಿ**

ನವದೆಹಲಿ, ಆ. 30 (ಯುಎನ್‌ಐ)– ಸದಸ್ಯರು ಹೇಗೆ 'ವರ್ತಿಸುತ್ತಾರೆಂಬುದನ್ನು' ನೋಡುವಂತಾಗಲು ಲೋಕಸಭೆಯ ಕಾರ್ಯಕಲಾಪವನ್ನು ಟೆಲಿವಿಷನ್‌ನಲ್ಲಿ ಪ್ರಸಾರ ಮಾಡಬೇಕೆಂದು ಅಧ್ಯಕ್ಷ ಜಿ.ಎಸ್. ಧಿಲ್ಲೋನ್‌ರವರು ಇಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಅನೇಕ ಸದಸ್ಯರು ಗಟ್ಟಿಯಾಗಿ ಪರಸ್ಪರ ಮಾತನಾಡಿಕೊಳ್ಳುತ್ತಿದ್ದಾಗ ಮತ್ತು ಏಕಕಾಲದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಲು ಯತ್ನಿಸುತ್ತಿದ್ದಾಗ ಅವರು ಈ ಟೀಕೆ ಮಾಡಿದರು.

ಶಿಕ್ಷೆಯ ಭಯದಿಂದಲ್ಲದೆ ಅಂತರಂಗದಲ್ಲಿ ಆಗುವ ಪರಿವರ್ತನೆಯೇ ನಿಜವಾದ ಪರಿಹಾರ

ಪರಿವರ್ತನೆ ಮತ್ತು ಆಲೋಚನಾ ಸ್ವಾತಂತ್ರ್ಯ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಸ್ವಾತಂತ್ರ್ಯವನ್ನು ನಾನಾ ಅರ್ಥಗಳಲ್ಲಿ ಪರಿಭಾವಿಸಿಕೊಂಡು ವ್ಯಾಖ್ಯಾನಿಸಲಾಗುತ್ತದೆ. ಸ್ವಾತಂತ್ರ್ಯ ಎಂದರೆ ಸ್ವೇಚ್ಛಾಚಾರವಲ್ಲ ಎಂಬ ಹೇಳಿಕೆಯನ್ನು ಪದೇಪದೇ ಕೇಳುತ್ತೇವೆ. ಸ್ವಾತಂತ್ರ್ಯ ದಿನಾಚರಣೆಯ ಈ ಮಾಸವು ಪ್ರತಿಬಾರಿಯೂ ಕೆಲವು ಕರೆಗಳು ಮತ್ತು ಪ್ರಶ್ನೆಗಳನ್ನು ನಮಗೆ ಕೊಡುತ್ತಲೇ ಬಂದಿದೆ.

ಗಾಂಧೀಜಿಯ 'ಸ್ವರಾಜ್ಯ'ದ ಪರಿಕಲ್ಪನೆಯು ಬ್ರಿಟಿಷ್ ಆಧಿಪತ್ಯದಿಂದ ಬಿಡುಗಡೆಗೊಳ್ಳುವ ಪರಿಕಲ್ಪನೆಗಿಂತ ಹೆಚ್ಚಿನದ್ದಾಗಿದೆ. ಮಹಿಳೆ ಒಂಟಿಯಾಗಿ ನಡುರಾತ್ರಿಯಲ್ಲೂ ತಿರುಗಾಡಬಲ್ಲಂತಹ ಆದರ್ಶ ಸ್ಥಿತಿಯ ಬಗ್ಗೆ ಅವರು ಹೇಳುತ್ತಾರೆ. ಅತ್ಯಂತ ದಕ್ಷ ಪೊಲೀಸ್ ವ್ಯವಸ್ಥೆ ಇರುವಲ್ಲಿ ಮಹಿಳೆ ಹಾಗೆ ಓಡಾಡಲು ಸಾಧ್ಯವಿದೆ. ಆದರೆ ಆ ಸುರಕ್ಷತೆಯನ್ನು ಪರಿಪೂರ್ಣ ಎನ್ನಲು ಬರುವುದಿಲ್ಲ. ದೇಶದ ಎಲ್ಲ ಪುರುಷರೂ ಸ್ವಯಂ ಶಿಸ್ತಿಗೆ ತಮ್ಮನ್ನು ತಾವೇ ಒಳಪಡಿಸಿಕೊಂಡಾಗ ಮಹಿಳೆಗೆ ಪರಿಪೂರ್ಣ ಸುರಕ್ಷತೆ ಸಿಗುತ್ತದೆ. ಗಾಂಧಿಯವರ ಸ್ವರಾಜ್ಯವು ಈ ಮಟ್ಟದಲ್ಲಿ ಸ್ವಯಂ ಶಿಸ್ತನ್ನು ಬಯಸುತ್ತದೆ. ಸ್ವರಾಜ್ಯದಲ್ಲಿ ಯಾರೂ ಕಾನೂನಿನ ಭಯದಿಂದ ಸನ್ನಡತೆಯವರಾಗಿ ಇರುವುದಿಲ್ಲ. ಭಯಮುಕ್ತರಾಗಿ ಇರುತ್ತಾರೆ. ಆದರೆ ತಮಗೆ ತಾವೇ ಅಳವಡಿಸಿಕೊಂಡ ನೈತಿಕತೆಯಿಂದಾಗಿ ಸನ್ನಡತೆಯನ್ನು ಹೊಂದಿದವರಾಗಿರುತ್ತಾರೆ. ಪರಿವರ್ತನೆಗಳು ನಿಜವಾಗಿ ನಡೆಯಬೇಕಾದದ್ದು ಹೀಗೆಯೇ.

ಕಾನೂನುಗಳಷ್ಟೇ ಬಹುದೊಡ್ಡ ಪರಿವರ್ತನೆಯನ್ನು ತರಲಾರವು. ಉದಾಹರಣೆಗೆ, ಇತ್ತೀಚೆಗೆ ಅತ್ಯಾಚಾರಕ್ಕೆ ಶಿಕ್ಷೆಯನ್ನು ತೀವ್ರಗೊಳಿಸಿ ಕಾನೂನು ಮಾಡಲಾಯಿತು. ಆದರೆ ಇದರಿಂದ ಅತ್ಯಾಚಾರಿ ಶಿಕ್ಷೆಗೆ ಒಳಗಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯಲ್ಲಿ ಬದಲಾವಣೆ ಆಗುತ್ತದೆಯೇ? ಅತ್ಯಾಚಾರಿಗಳನ್ನು ಬಿಡುಗಡೆ ಮಾಡಿ ಆರತಿ ಬೆಳಗಿ ಅಭಿನಂದಿಸುವ ಮನಃಸ್ಥಿತಿ ಬದಲಾಗುತ್ತದೆಯೇ? ಸಮಸ್ಯೆಯ ನಿಜವಾದ ಪರಿಹಾರ ಕಾನೂನು ಒಂದರಿಂದಲೇ ಆಗಲಾರದು. ಅಂತರಂಗದಲ್ಲಿ ಆಗುವ ಪರಿವರ್ತನೆಯೇ ನಿಜವಾದ ಪರಿಹಾರ. ಆದರೆ ಅಂತರಂಗದಲ್ಲಿ ಪರಿವರ್ತನೆ ಉಂಟಾಗಲು ಕಾನೂನು ಒಂದು ಸಾಧನವಾಗಿ ಕೆಲಸ ಮಾಡಬಲ್ಲದು.

ಗಾಂಧಿಯವರ ಸ್ವರಾಜ್ಯದ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುತ್ತಾ ಹೋದಂತೆ ಸ್ವಾತಂತ್ರ್ಯದ ಪರಿಕಲ್ಪನೆಯು ಮನುಷ್ಯರ ಮೂಲಭೂತ ಸ್ವಭಾವಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿರುವುದನ್ನು ಗುರುತಿಸಬಹುದು. 'ಭಯ' ಮತ್ತು 'ಆಸೆ'ಯು ವ್ಯಕ್ತಿತ್ವ ವಿಕಾಸದ ಮೂಲಭೂತ ನೆಲೆಗಳಾಗಿವೆ. ಪರ ಆಕ್ರಮಣದ ಭಯದಿಂದ ಮುಕ್ತವಾಗುವುದು ಗಾಂಧಿಯವರ ಪರಿಕಲ್ಪನೆಯ ಪ್ರಮುಖ ಸಂಗತಿಗಳಲ್ಲೊಂದು. ಅವರ ಪ್ರಕಾರ, ಹೇಡಿಗಳೆಂದೂ ಅಹಿಂಸಾವಾದಿಗಳಾಗಲಾರರು. ನಿಜವಾಗಿ ಹೇಡಿಗಳು ಜಾಸ್ತಿ ಆಕ್ರಮಣಕಾರಿಗಳಾಗಿ ವ್ಯವಹರಿಸುತ್ತಾರೆ. ಅನ್ಯರು ಆಕ್ರಮಿಸಿಯಾರು ಎನ್ನುವ ಊಹಾತ್ಮಕ ಭಯದಿಂದ ಹೊರಗೆ ಬಂದಾಗ ನಿರ್ಭೀತಿಯ ಸ್ಥಿತಿ ಸಾಧ್ಯ. ಅಂತಹವನು ಸ್ವತಂತ್ರನಾಗಿ ಇರುತ್ತಾನೆ. ಏಕೆಂದರೆ ನಿರ್ಭೀತನಾದವನು ಶರಣಾಗುವುದಿಲ್ಲ, ದಾಸ್ಯಕ್ಕೆ ಒಳಗಾಗುವುದಿಲ್ಲ, ತನ್ನ ಚಿಂತನೆಗಳು ಮತ್ತು ವರ್ತನೆಗಳನ್ನು ತನ್ನ ಆಲೋಚನೆಯಂತೆಯೇ ನಡೆಸುತ್ತಾನೆ. ಈ ಆಲೋಚನಾ ಸ್ವಾತಂತ್ರ್ಯವೇ ಸ್ವಾತಂತ್ರ್ಯದ ಉಳಿದ ಎಲ್ಲ ರೂಪಗಳಿಗೂ ತಳಹದಿಯಾಗಿದೆ.

'ಭಯ'ದ ಅಸ್ತಿತ್ವವಿಲ್ಲದ ವಿಕಾಸ ಸಾಧ್ಯವಿಲ್ಲ. ಗಾಂಧಿಯವರ ಸ್ವರಾಜ್ಯದ ಪರಿಕಲ್ಪನೆಯಲ್ಲೂ 'ಭಯ'ದ ಪರಿಕಲ್ಪನೆ ಇದೆ. ಆದರದು ಆಕ್ರಮಣದ ಭಯವಲ್ಲ. ನೈತಿಕತೆಯ ಭಯ. ಆತ್ಮಸಾಕ್ಷಿಯ ಭಯ. ಇಲ್ಲಿ ಮನುಷ್ಯನನ್ನು ಅನೈತಿಕತೆಗೆ ಸೆಳೆಯುವ ಸಂಗತಿಗಳ ಹಿಡಿತದಿಂದ ಬಿಡುಗಡೆಯನ್ನು ಪಡೆಯುವುದೇ ಸ್ವಾತಂತ್ರ್ಯವಾಗಿದೆ. ಹಣದ ಆಸೆ, ಅಧಿಕಾರದ ಆಸೆ ಅಥವಾ ಇನ್ನೂ ಅಂತಹದೇ ಅಸಂಖ್ಯಾತ ಆಸೆಗಳೇ ಅವುಗಳನ್ನು ಈಡೇರಿಸಿಕೊಳ್ಳುವ ಹಾದಿಯಲ್ಲಿ ಅನೈತಿಕತೆಗೆ ಪ್ರಚೋದನೆಯನ್ನು ನೀಡುತ್ತವೆ. ಆಸೆಗಳು ಇಲ್ಲದಿದ್ದರೆ ವಿಕಾಸ ಇರುವುದಿಲ್ಲ. ಆದರೆ ಆಸೆಗಳನ್ನು ಈಡೇರಿಸಿಕೊಳ್ಳುವ ಮಾರ್ಗವು ಸಮಂಜಸತೆಯನ್ನು ಹೊಂದಿಲ್ಲದಿದ್ದರೆ ವಿಕಾಸವು ವಿನಾಶದ ರೂಪವನ್ನು ತಳೆಯುತ್ತದೆ.

ತಪ್ಪು ಮಾಡಿ ಸಿಕ್ಕಿಹಾಕಿಕೊಂಡವನಿಗೆ ಶಿಕ್ಷೆಯನ್ನು ಅನುಭವಿಸುವವರೆಗೆ ಮಾತ್ರ ಮಾನಸಿಕ ಒತ್ತಡವಾದರೆ, ತಪ್ಪು ಮಾಡಿ ಸಿಕ್ಕಿಹಾಕಿಕೊಳ್ಳದವನಿಗೆ ಜೀವನಪೂರ್ತಿ ಮಾನಸಿಕ ಒತ್ತಡವೇ. ಮನಸ್ಸಿನಲ್ಲಿ ನಿರಾಳ ಭಾವ ಇಲ್ಲದವನಿಗೆ ಸ್ವಾತಂತ್ರ್ಯದ ಅನುಭವ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಆಸೆಗಳನ್ನು ತೀರಿಸಿಕೊಳ್ಳಲು ತೊಡಗಿಕೊಳ್ಳುವ ವಿಧಾನದಲ್ಲಿ ಸಮಂಜಸತೆಯನ್ನು ಕಾಪಾಡಿಕೊಳ್ಳುವುದು ಸ್ವಾತಂತ್ರ್ಯದ ಅನುಭವಕ್ಕೆ ಅವಶ್ಯವಾಗಿದೆ.

ಪ್ರಸ್ತುತ ದಿನಗಳಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯು ಸ್ವಾತಂತ್ರ್ಯಕ್ಕೆ ಹೆಚ್ಚುಹೆಚ್ಚು ವಿಮುಖವಾಗಿ ಚಲಿಸುತ್ತಿದೆ. ಒಂದು ದಶಕದ ಹಿಂದೆ ಅಪರಾಧದ ಪ್ರಕರಣಗಳು ಕಾಣಿಸಿದಾಗ ಕೊನೆಪಕ್ಷ ಅಪರಾಧಿಗೆ ಶಿಕ್ಷೆ ಆಗಬೇಕು ಎನ್ನುವ ವಿಚಾರದಲ್ಲಿ ಒಮ್ಮತ ಸಾಧ್ಯವಿತ್ತು. ಈಗ ಅದೂ ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಅಪರಾಧ ಮಾಡಿದವನು ತನ್ನ ಕಡೆಯವನು ಎಂದಾದರೆ, ಆತನ ಪರವಾಗಿ ವಾದಗಳನ್ನು ಕಟ್ಟಲಾಗುತ್ತದೆ. ಆ ರೀತಿಯ ಬೇರೆ ಅಪರಾಧಗಳನ್ನು ಯಾಕೆ ಪ್ರಶ್ನಿಸುವುದಿಲ್ಲ ಎಂದು ಕೇಳುತ್ತಾ ಕೇಳುತ್ತಾ, ಇದನ್ನೂ ಪ್ರಶ್ನಿಸಕೂಡದು ಎಂಬ ಮನಃಸ್ಥಿತಿಯನ್ನು ರೂಪಿಸಲಾಗುತ್ತದೆ.



ವಿಚಾರ ಯಾವುದೇ ಆಗಿದ್ದರೂ ಸಮಾಜವನ್ನು ಎರಡು ಗುಂಪುಗಳಾಗಿ ವಿಭಜಿಸಿರುವುದರಿಂದ ಅಪರಾಧ ಮಾಡಿದವರ ಪರವಾಗಿ ಯಾವುದಾದರೊಂದು ಗುಂಪಿನವರು ವಾದ ಮಂಡಿಸುವಂತಹ ದೌರ್ಭಾಗ್ಯದ ಸನ್ನಿವೇಶ ಎದುರಿಗಿದೆ. ಇದರರ್ಥ ನ್ಯಾಯದ ಪರಿಕಲ್ಪನೆ ಯಾರಲ್ಲೂ ಇಲ್ಲವೆಂದಲ್ಲ. ಎಲ್ಲರಲ್ಲೂ ಇದೆ. ಆದರೆ ನ್ಯಾಯವನ್ನೇ ತಾನು ಪ್ರತಿಪಾದಿಸಿದರೆ ತನ್ನ ಧೋರಣೆ ಅಥವಾ ತನ್ನ ತಂಡ ದುರ್ಬಲವಾದೀತೇನೊ ಎಂಬ ಭಯದಿಂದ ತಪ್ಪನ್ನು ಸಮರ್ಥಿಸಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ.

ಇಲ್ಲಿ ಕಾಣಿಸುವ 'ಭಯ' ಹೆಚ್ಚು ಅಮೂರ್ತ ಸ್ವರೂಪದ್ದಾಗಿದೆ. ಸುಮಾರು ಐವತ್ತು ವರ್ಷಗಳ ಹಿಂದೆ 'ಗಳಿಕೆ' ಇಲ್ಲದವರು ಜಾಸ್ತಿ ಇದ್ದರು. ಏನೂ ಇಲ್ಲದವನಿಗೆ ಯಾವ ಭಯವೂ ಇಲ್ಲ. ಏಕೆಂದರೆ ಅವನು ಕಳೆದುಕೊಳ್ಳಬೇಕಾದ್ದು ಏನೂ ಇಲ್ಲ. ಆದರೆ ಈಗಿನ ಸನ್ನಿವೇಶದಲ್ಲಿ ಎಲ್ಲರಲ್ಲಿಯೂ ಅಲ್ಪಸ್ವಲ್ಪ ಗಳಿಕೆಯಿದೆ. ಈ ಗಳಿಕೆಯನ್ನು ಉಳಿಸಿಕೊಳ್ಳಬೇಕಲ್ಲ. ತಾನು ಏನನ್ನು ಮಾತನಾಡಿದರೆ ತನ್ನ ಗಳಿಕೆಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳಬಹುದು ಎನ್ನುವ ಆಲೋಚನಾ ಕ್ರಮವು ಯಾವಾಗಲೂ ಗೆಲ್ಲಬಹುದಾದದ್ದರ ಪರವಾಗಿ ವಾದ ಮಾಡಲು ಸೂಕ್ತವಾಗುವ ಹಾಗೆ ವ್ಯಕ್ತಿಗಳ ಆಲೋಚನಾಕ್ರಮವನ್ನು ರೂಪಿಸುತ್ತಾ ಹೋಗುತ್ತದೆ.

ಗೆಲ್ಲಲಿರುವುದು ಯಾವುದು ಎನ್ನುವುದನ್ನು ಮನುಷ್ಯನ ಯೋಚನೆಗಳು ಆತನಿಗೇ ಹೊಳೆಯದಂತೆ ಪೂರ್ವಾನುಭವದಿಂದ ನಿರ್ಧರಿಸಿಬಿಡುತ್ತವೆ. ಎಷ್ಟೇ ಹೋರಾಟವನ್ನು ಮಾಡಿದರೂ ಹಣ, ಅಧಿಕಾರ, ಮತ ಧರ್ಮಗಳನ್ನು ಒಳಗೊಂಡ ಪಟ್ಟಭದ್ರ ವ್ಯವಸ್ಥೆಯೇ ಸದಾ ಗೆಲ್ಲುತ್ತಾ ಬಂದಿದೆ. ಇಂದಿನ ದಿನಗಳಲ್ಲಿ ಅತ್ಯಾಚಾರಿಗಳು, ಕೊಲೆಪಾತಕರು, ಸಮಾಜಘಾತುಕರನ್ನು ಕೂಡ ಏನಾದರೊಂದು ಕಾರಣ ಕೊಟ್ಟು ಸಹಾನುಭೂತಿಯಿಂದ ನೋಡುವ ಮತ್ತು ವಾದ ಮಂಡಿಸುವ ಪದ್ಧತಿ ಇದೆ ಎನ್ನುವುದೇ ಸಮಾಜವು ಪಟ್ಟಭದ್ರ ವ್ಯವಸ್ಥೆಗೆ ಶರಣಾಗುತ್ತಿರುವುದಕ್ಕೆ ನಿದರ್ಶನವಾಗಿದೆ.

ಅಂದರೆ ಮನುಷ್ಯರ ಆಲೋಚನೆಗಳೇ ಸ್ವಾತಂತ್ರ್ಯದ ಆಶಯಕ್ಕೆ ವಿಮುಖವಾಗಿ ನಡೆಯುತ್ತಿವೆ. ಭಯದಿಂದ ಮುಕ್ತರಾಗಲು ಏನು ಮಾಡಬೇಕು? ಅಪಾಯಕಾರಿಗಳಿಗೆ ವಿರುದ್ಧವಾಗಿ ಮಾತನಾಡಬಾರದು. ಹಾಗೆ ಇರಬೇಕಾದರೆ ಅಪಾಯಕಾರಿಗಳ ವಿರುದ್ಧ ಯೋಚನೆಯನ್ನೇ ಮಾಡದ ಹಾಗೆ ಆಲೋಚನಾ ಕ್ರಮವನ್ನು ರೂಪಿಸಿಕೊಳ್ಳಬೇಕು ಎಂಬ ಸರಳ ಸೂತ್ರ ಇಲ್ಲಿದೆ. ಹೇಗೂ ಅಪಾಯಕಾರಿಗಳ ವಿರುದ್ಧ ಯೋಚಿಸಲು ಇಲ್ಲದ ಮೇಲೆ ಅಪಾಯಕಾರಿಗಳ ಪರ ಯಾಕೆ ಮಾತಾಡಬಾರದು? ಅದರ ಪರಿಣಾಮವಾಗಿ, ಆಸೆಗಳ ಈಡೇರಿಕೆಗೆ ಅವಕಾಶವಿದೆ. ಅಂದರೆ ಮನುಷ್ಯನ ಮೂಲಭೂತವಾದ ಎರಡು ಸ್ವಭಾವಗಳಿಗೂ ಒಂದರಲ್ಲೇ ಪರಿಹಾರ ಸಿಕ್ಕಂತಾಯಿತು. ಆದರೆ ಈ ಪರಿಹಾರ ಮಾನಸಿಕವಾಗಿ ಗುಲಾಮರಾದ ಜನಸಮುದಾಯಗಳನ್ನು ಸೃಷ್ಟಿಸುತ್ತದೆ.

ಯೋಚಿಸುವ ಸ್ವಾತಂತ್ರ್ಯವನ್ನೇ ಉಳಿಸಿಕೊಳ್ಳಲು ಆಗದಿದ್ದರೆ ಬೇರೆ ಯಾವುದೇ ಸ್ವಾತಂತ್ರ್ಯವೂ ಉಳಿಯಲು ಸಾಧ್ಯವಿಲ್ಲ. ಆದ್ದರಿಂದ ಬಾಹ್ಯ ಭಯವನ್ನು ಕಡಿಮೆ ಮಾಡಿಕೊಳ್ಳುವ, ಆಸೆಗಳನ್ನು ಹೆಚ್ಚು ಸರಿಯಾದ ವಿಧಾನದಲ್ಲಿ ಈಡೇರಿಸಿಕೊಳ್ಳುವ ರೂಪದ ಆಲೋಚನಾ ಕ್ರಮವನ್ನು ಕಂಡುಕೊಳ್ಳಬೇಕಾಗಿದೆ. ಅದರಿಂದ ದೊರೆಯುವ ಆಲೋಚನಾ ಸ್ವಾತಂತ್ರ್ಯವನ್ನು ಚಲಾಯಿಸಿ 'ಸ್ವಾತಂತ್ರ್ಯದ ಆಶಯ'ವನ್ನು ಸಾಧಿಸಬೇಕಾಗಿದೆ.

ಚುರುಮುರಿ



ಗೃಹಲಕ್ಷ್ಮಿ ರಮಣ ಭಾಗ್ಯ!

• ಎಸ್.ಬಿ.ರಂಗನಾಥ್

'ನಿನ್ನೆ ಕಾಣಲಿಲ್ಲ, ಎಲ್ಲಿಗಯ್ಯಾ ಹೋಗಿತ್ತು ಸವಾರಿ?' ದೋಸ್ತ್‌ನನ್ನು ಗುಂಡಣ್ಣ ಕೇಳಿದ.

'ಮೈಸೂರಿಗೆ ಹೋಗಿದ್ದೆನಯ್ಯಾ, ಹೆಂಡ್ತಿ ಜೊತೆ' ಎಂದ ಮಿತ್ರ.

'ದಸರಾ ಇನ್ನೂ ದೂರ ಇದೆಯಲ್ಲೋ! ಹೆಂಡ್ತಿ ಮೇಲೆ ಯಾವಾಗಲೂ ಕಂಪ್ಲೇಂಟ್ ಹೇಳ್ತಿದ್ದೆ'.

'ಅದು ಕಮಲದ ದಿನಗಳಲ್ಲಿ. ಈಗ ಮೇಡಮ್ ಅವರ ಅಭಯ ಹಸ್ತದ ರಭಸದ ದಿನಗಳಲ್ವೇ, ಮಹಿಳೆಯರಿಗೆ ಭಾರೀ ಜೋಶ್! ನಾವು ಅವರ ಮೇಲೆ ಜೋರು ಮಾಡಿದ್ರೆ, ಶಕ್ತಿ ಯೋಜನೆ ಲಾಭ ಪಡೆದು ಅವ್ರು ಬೇಕಾದ ಕಡೆ ಟ್ರಿಪ್ ಹೋಗಿಬಿಡ್ತಾರೆ'.

'ಅದ್ಸರಿ, ನಿನ್ನೆ ನೀನು ಮೈಸೂರಿಗೆ ಜಾಯಿಂಟ್ ಟ್ರಿಪ್ ಹೋಗಿದ್ದು ಯಾಕೋ?'

'ಅಲ್ಲಿ ಗೃಹಲಕ್ಷ್ಮಿ ಯೋಜನೆ ಉದ್ಘಾಟನೆ ಇತ್ತಲ್ಲಯ್ಯಾ, ಕಾಂಗ್ರೆಸ್ ಯುವರಾಜರು ಬಂದಿದ್ರು. ನಾಕು ಬಸ್ ಮಾಡಿದ್ರು. ಮನವಿ ಕೊಡೋಕೆ ಹೋಗಿದ್ದವು'.

'ಏನು ಬೇಡಿಕೆ ಇಟ್ಟೆಯೋ ನೀನು?'

'ಗೃಹಲಕ್ಷ್ಮಿ ರಮಣ ಭಾಗ್ಯ ಮತ್ತು ಪುರುಷ ಶಕ್ತಿ ಭಾಗ್ಯ ಯೋಜನೆ ಪ್ರಾರಂಭಿಸಲು ಸಿದ್ದರಾಮಯ್ಯ-ಡಿಕೆಶಿಗೆ ಹೇಳಿ, ಆಗಿರೋ ಸ್ತ್ರೀ– ಪುರುಷ ತಾರತಮ್ಯ ಸರಿಪಡಿಸೀಂತ ಕೇಳಿದೆ'.

'ಅಲ್ಲೋ, ಈಗ ಕೊಟ್ಟಿರೋ ಭಾಗ್ಯಗಳಿಂದ್ಲೇ ರಾಜ್ಯ ದಿವಾಳಿಯಾಗುತ್ತೇಂತಿದಾರೆ ನಮೋಜೀ!'

'ಅವರೂ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಅನ್ನೋ ಹಾಗೆ ಗ್ಯಾಸ್ ಸಿಲಿಂಡರ್ ದರದಲ್ಲಿ ಇನ್ನೂರು ರೂಪಾಯಿ ಕಡಿತ ಮಾಡಿದ್ದಾರಲ್ಲಾ!'

'ರಾ.ಗಾ.ಗೆ ನಿನ್ನ ಹೆಂಡತಿ ಯಾವಾಗ, ಏನು ಕೇಳಿದಳೋ?'

'ಅವರಿಗೆ ರಕ್ಷಾಬಂಧನ ರಾಖಿ ಕಟ್ಟುವಾಗ, 'ಸೋನಿಯಾ ಮೇಡಂ ತಮಗೆ ಹೆಣ್ಣು ಹುಡುಕುವ ಜವಾಬ್ದಾರಿಯನ್ನು ಹರಿಯಾಣದ ಹೆಣ್ಣುಮಕ್ಕಳಿಗೆ ಕೊಟ್ಟಿರೋದನ್ನ ಬದಲಿಸಿ, ಅದನ್ನು ಕರ್ನಾಟಕದ ಮಹಿಳೆಯರಿಗೆ ವಹಿಸಬೇಕು. ನಿಮ್ಮನ್ನು ವರಿಸಲು ನಮ್ಮಲ್ಲಿ ಹರಿಯಾಣದ ವಧುಗಳಿಗಿಂತ ಇನ್ನೂ ಸುಂದರವಾದ ತರುಣಿಯರು ಇದ್ದಾರೆ' ಅಂತ ಹೇಳಿದಳಂತೆ'.

'ರಾ.ಗಾ. ಪ್ರತಿಕ್ರಿಯೆ?'

'ಫ್ಲೈಯಿಂಗ್ ಕಿಸ್ ಕೊಡದೆ ಸುಮ್ಮನೆ ನಸುನಕ್ಕರಂತೆ'.

ಸಂಗತ

ಸಂವಿಧಾನದ ಓದು: ಯಾರಿಗಾಗಿ?

ಸಂವಿಧಾನದ ಪ್ರಸ್ತಾವನೆಯ ಬಾಯಿಪಾಠಕ್ಕಿಂತಲೂ ಸಂವಿಧಾನದ ಧ್ಯೇಯಗಳಿಗೆ ಅನುಗುಣವಾದ ಆಡಳಿತಾತ್ಮಕ ಪರಿವರ್ತನೆಯನ್ನು ರೂಪಿಸುವುದು ಹೆಚ್ಚು ಪರಿಣಾಮಕಾರಿ

• ಪ.ರಾಮಕೃಷ್ಣ ಶಾಸ್ತ್ರಿ

ರಾಜ್ಯದ ಶಾಲೆಗಳಲ್ಲಿ ಸೆಪ್ಟೆಂಬರ್ 5ರಿಂದ ಸಂವಿಧಾನದ ಪ್ರಸ್ತಾವನೆಯನ್ನು ದಿನವೂ ಪಠಿಸುವ ಕ್ರಮವನ್ನು ಜಾರಿಗೆ ತರುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಇದು ಒಳ್ಳೆಯ ಬೆಳವಣಿಗೆ. ದೇಶವನ್ನು ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣತಂತ್ರವನ್ನಾಗಿ ವಿಧಿಯುಕ್ತವಾಗಿ ರೂಪಿಸಿದ ಆಧಾರಸ್ತಂಭವೇ ಸಂವಿಧಾನ. ಕೇಂದ್ರ ಸರ್ಕಾರ ಇದಕ್ಕೆ ತಂದಿರುವ ತಿದ್ದುಪಡಿಯಲ್ಲಿ, ಜಾತ್ಯತೀತ ಮತ್ತು ಸಮಾಜವಾದಿ ರಾಷ್ಟ್ರವೆಂಬ ಪದಗಳನ್ನೂ ಸೇರಿಸಲಾಗಿದೆ. ಜಾತಿ, ಮತ, ಪಂಥಗಳ ಭೇದವಿಲ್ಲದೆ ಎಲ್ಲರೂ ನಾಗರಿಕ ಹಕ್ಕುಗಳನ್ನು ಸಮಾನವಾಗಿ ಅನುಭವಿಸಲು ಯಾವುದೇ ಅಡೆತಡೆ ಇಲ್ಲ ಎಂಬುದನ್ನು ಈ ಮೂಲಕ ಇನ್ನಷ್ಟು ಬಲಪಡಿಸಲಾಗಿದೆ.

ಶಾಸಕಾಂಗವು ನಾಡಿನ ಕಾನೂನು ರಚನೆಯ ಪ್ರಧಾನ ಅಂಗ ಎಂದು ನಮ್ಮ ಸಂವಿಧಾನ ಒಪ್ಪಿಕೊಂಡಿದೆ. ಕಾರ್ಯಾಂಗ ಮತ್ತು ನ್ಯಾಯಾಂಗಕ್ಕಿಂತಲೂ ಶಾಸಕಾಂಗವು ಇಲ್ಲಿ ಹೆಚ್ಚು ಬಲಿಷ್ಠವಾಗಿದೆ. ಇದರ ಮೂಲಭೂತ ವಿನ್ಯಾಸವು ದೃಢವಾಗಿಯೂ ಇದೆ. ಆದರೆ ಇಂದು ಬಹು ಪ್ರಮುಖವಾಗಿ ಕಾರ್ಯಾಂಗದ ಮೂಲಕವೇ ಕಾನೂನುಗಳ ದುರುಪಯೋಗ ನಡೆಯುತ್ತಿದೆ. ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಪ್ರಕರಣಗಳು ಸಾಮಾನ್ಯ ಎಂಬಂತಾಗಿವೆ. ಸಂವಿಧಾನದ ಆಶಯವನ್ನು ತಿರುಚುವ ಪ್ರಸಂಗಗಳೂ ಘಟಿಸುತ್ತಿವೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗೂ ಅದರ ಬಿಸಿ ತಟ್ಟಿರುವ ಸಂಭವವಿದೆ. ಹೀಗಾಗಿ, ಬರೀ ಸಂವಿಧಾನದ ಪ್ರಸ್ತಾವನೆಯ ಬಾಯಿಪಾಠಕ್ಕಿಂತಲೂ ಸಂವಿಧಾನದ ಧ್ಯೇಯಗಳಿಗೆ ಅನುಗುಣವಾದ ಆಡಳಿತಾತ್ಮಕ ಪರಿವರ್ತನೆಯನ್ನು ರೂಪಿಸುವುದು ಹೆಚ್ಚು ಪರಿಣಾಮಕಾರಿ ಎನಿಸುತ್ತದೆ.

ರಾಜಕೀಯ ಕ್ಷೇತ್ರ ಹೆಚ್ಚು ಹೆಚ್ಚಾಗಿ ಯುವಜನರು, ವಿದ್ಯಾವಂತರನ್ನು ಬಳಿಗರೆಯುತ್ತಿದೆ. ಹಾಗೆಂದು, ನಡೆದುಬಂದ ಹಾದಿಯಲ್ಲಿ ಆಮೂಲಾಗ್ರ ಬದಲಾವಣೆ ಇನ್ನೂ ಸಾಧ್ಯವಾಗಿಲ್ಲ. ಪ್ರತಿಯೊಂದು ಗ್ರಾಮ ಪಂಚಾಯಿತಿಯಿಂದ ಆರಂಭಿಸಿ ತಾಲ್ಲೂಕು ಕಚೇರಿಯ ತನಕವೂ ಸಣ್ಣ ಕೆಲಸ ಕೂಡ ದಲ್ಲಾಳಿಗಳ ಮೂಲಕವೇ ನಡೆಯಬೇಕು. ಹಣ ಕೊಡದೆ ಕೆಲಸ ನಡೆಯುವುದಿಲ್ಲ ಎಂಬಂಥ ಪರಿಸ್ಥಿತಿ ಇದೆ.

ಅಧಿಕಾರ ಹಿಡಿಯುವಾಗ ಪಾರದರ್ಶಕ ಆಡಳಿತದ ಭರವಸೆ ನೀಡುವ ಯಾವುದೇ ಪಕ್ಷ ಇಂದಿನವರೆಗೂ ಅದನ್ನು ಜಾರಿಗೆ ತರಲು ಮುಂದಾಗಿಲ್ಲ. ಚುನಾವಣೆ ಬಂದಾಗ ಸರ್ಕಾರಿ ನೌಕರರ ಸಂಘದಿಂದ ಕೂಡ ಚುನಾವಣಾ ವೆಚ್ಚಕ್ಕೆ ಬೇಕಾದ ದೇಣಿಗೆ ಪಡೆಯುವ ರಾಜಕಾರಣಿಗಳು, ಈ ಭರವಸೆಯನ್ನು ಈಡೇರಿಸುವ ಸಾಧ್ಯತೆಯೂ ಇಲ್ಲ.

ಚುನಾವಣೆಗೆ ಸ್ಪರ್ಧಿಸಿದಾಗ ಅಭ್ಯರ್ಥಿ ಘೋಷಿಸುವ ಆಸ್ತಿಪಾಸ್ತಿಯ ಮೌಲ್ಯವು ಬರೀ ಲಕ್ಷಗಳಲ್ಲಿ ಇದ್ದದ್ದು, ಐದು ವರ್ಷಗಳ ಆಡಳಿತಾವಧಿಯಲ್ಲಿ ನೂರಾರು ಕೋಟಿಗಳಿಗೆ ಏರುವ ಚೋದ್ಯವೂ ನಡೆಯುತ್ತದೆ! ಕೋಟಿ ಕೋಟಿ ತಿಂದ ಸರ್ಕಾರಿ ನೌಕರಿಯ ಕುಳಗಳು ಲೋಕಾಯುಕ್ತರ ಬಲೆಗೆ ಸಿಕ್ಕಿಬೀಳುತ್ತವೆ. ಆದರೆ ಸಾರ್ವಜನಿಕ ಪರಿಶುಭ್ರ ಬದುಕಿಗೆ ತಿಳಿಗನ್ನಡಿಯಾಗಿ ಇರಬೇಕಾದ ರಾಜಕಾರಣಿಗಳ ಮೇಲೆ ಬಹುತೇಕ ಇಂತಹ ದಾಳಿಗಳಾಗುವುದೇ ಇಲ್ಲ. ಸಮಾನತೆಯ ಬದುಕನ್ನು ಎತ್ತಿ ಹಿಡಿಯುವ ಸಂವಿಧಾನದ ಆಶಯ ಜನಪ್ರತಿನಿಧಿಗಳಿಂದಲೇ ಅನುಷ್ಠಾನಗೊಳ್ಳಬೇಕು. ಅಕ್ರಮ ಗಳಿಕೆಯ ಮೇಲೆ ನಿರ್ಬಂಧ ಇನ್ನಷ್ಟು ಬಿಗಿಯಾಗಬೇಕು.

ಇನ್ನು ಸಮಾನತೆ ಎಂಬ ಪದವನ್ನು ನೆನೆದರೆ ವಿಷಾದವಾಗುತ್ತದೆ. ಎಷ್ಟೇ ಪ್ರತಿಭೆ ಇದ್ದರೂ ಜಾತಿ ಮುಖ್ಯವಾದಾಗ, ಅವನು ಆದಾಯರಹಿತನಾಗಿ ಇದ್ದರೂ ಅವಕಾಶಗಳ ಹಂಚಿಕೆ ನ್ಯಾಯಯುತವಾಗಿ ಇರುವುದಿಲ್ಲ. ಧಾರ್ಮಿಕ ಕ್ಷೇತ್ರಗಳಲ್ಲಿ ಕಾನೂನಿಗೆ ಅಂಜಿ ಕೆಲವು ಆಚರಣೆಗಳಲ್ಲಿ ಸಮಾನತೆ ಕಂಡುಬಂದರೂ ಊಟದ ಪಂಕ್ತಿಯು ಸಮಾನಭಾವದ ಏಕತೆಯನ್ನು ಸೂಚಿಸುವುದಿಲ್ಲ. ಇತ್ತೀಚೆಗೆ ಮದುವೆಯು ಸ್ವಜಾತಿಯಲ್ಲಿ ನಡೆಯಲು ಕನ್ಯೆಯರಿಗೆ ಬರ ಬಂದಿರುವಾಗ, ಯಾವ ಜಾತಿಯ ಹುಡುಗಿಯೂ ಆಗಬಹುದೆಂಬ ಸಮಾಜೋದ್ಧಾರದ ಹೃದಯವಂತಿಕೆ ಮೆರೆಯುತ್ತಿರುವುದು ಸತ್ಯವೇ. ಆದರೆ ಹುಡುಗಿಯ ಹೆತ್ತವರನ್ನು ಬಂಧುಗಳೆಂದು ಒಪ್ಪಿಕೊಳ್ಳುವಲ್ಲಿ ಮಾತ್ರ ಮುಜುಗರ!



ಧಾರ್ಮಿಕ ಸ್ವಾತಂತ್ರ್ಯವನ್ನು ಸಂವಿಧಾನ ಒತ್ತಿ ಹೇಳಿದ್ದರೂ ಧರ್ಮಾಚರಣೆಯ ವೈರುಧ್ಯಗಳು ಜಾತಿಗಳ ನಡುವೆ ಕಲಹದ ಹೊಗೆ ಎಬ್ಬಿಸುತ್ತಿವೆ. ಧರ್ಮವು ಪ್ರತಿಷ್ಠೆಯ ಪ್ರಶ್ನೆಯಾಗುತ್ತಿದೆ. ಒಂದು ಧರ್ಮದ ಆಹಾರ ಪದ್ಧತಿಯ ನಿಷ್ಕರ್ಷೆ ಇನ್ನೊಂದು ಧರ್ಮದ ಅನುಯಾಯಿಗಳಿಂದ ನಡೆಯುತ್ತಿದೆ. ಉತ್ಸವಗಳು, ಜಾತ್ರೆಗಳು, ಮೆರವಣಿಗೆಗಳು, ಹರಕೆಗಳು ಕೋವಿ ಹಿಡಿದ ಪೊಲೀಸರ ಸುಪರ್ದಿಯಲ್ಲಿ ನಡೆಯುತ್ತಿರುವುದು ಧಾರ್ಮಿಕ ಸಹಬಾಳ್ವೆಯ ನಿದರ್ಶನವಂತೂ ಅಲ್ಲವೇ ಅಲ್ಲ.

ಹೀಗಾಗಿ, ಸಂವಿಧಾನದ ಆಶಯಗಳು ಎಷ್ಟು ಸಮರ್ಪಕವಾಗಿ ನಮ್ಮಲ್ಲಿ ಜಾರಿಯಾಗಿವೆ, ತಪ್ಪಿದಲ್ಲಿ ನಾವು ಯಾವ ಕ್ರಮಗಳನ್ನು ಅನುಸರಿಸುವ ಮೂಲಕ ಅದರ ವಿಧಿಗಳನ್ನು ಅನುಸರಣೆಗೆ ತರಬಹುದು ಎಂಬ ಬಗೆಗೆ ತಿಳಿಯಲು ಒಂದು ಪಾರದರ್ಶಕ ವಿಧಾನದ ಅಧ್ಯಯನ ನಡೆಸಬಹುದು. ಇದೊಂದನ್ನೂ ಮಾಡದ ಸರ್ಕಾರಗಳು, ಸಂವಿಧಾನದ ವಿಧಿಗಳನ್ನು ಮೂಲೆಗೊತ್ತಿ ಆಡಳಿತ ನಡೆಸುತ್ತಿವೆ. ಹೀಗಿರುವಾಗ, ಸಂವಿಧಾನ ಆಶಯದ ಪ್ರಸ್ತಾವನೆಯನ್ನು ನಿತ್ಯ ಪಠಿಸುವ ಮೂಲಕ ಶಾಲೆಗಳಲ್ಲಿ ಮಾತ್ರ ಅದನ್ನು ನೆನಪು ಮಾಡುವುದರಲ್ಲಿ ಸರ್ಕಾರವು ಅನುರಕ್ತವಾದರೆ, ಹೊಸ ಬದಲಾವಣೆಯ ಹವೆ ಬೀಸಬಹುದೆಂದು ನಿರೀಕ್ಷಿಸಲು ಸಾಧ್ಯವೇ?

ಸಂವಿಧಾನದ ಓದು ಮಕ್ಕಳಿಗಿಂತಲೂ ಹಿರಿಯರಿಗೆ, ಅಧಿಕಾರಸ್ಥರಿಗೆ, ಆಡಳಿತಗಾರರಿಗೆ ಮುಖ್ಯ ಅಲ್ಲವೇ?

ವಾಚಕರ ವಾಣಿ

ವರ್ಗಾವಣೆ ಮುಗಿಯಿತು, ಕೊರತೆ ಹೆಚ್ಚಿತು!

ಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಮುಗಿದ ನಂತರ ಗ್ರಾಮೀಣ ಭಾಗದಲ್ಲಿ ಶಿಕ್ಷಕರ ಕೊರತೆ ಹೆಚ್ಚಾಗಿದೆ. ಶಿಕ್ಷಕರಿಲ್ಲದ ಶಾಲೆಗೆ ಮಕ್ಕಳನ್ನು ಪೋಷಕರು ಹೇಗೆ ಕಳುಹಿಸಿಯಾರು?! ಬಡವರಾದರೂ ಅವರಿಗೆ ತಮ್ಮ ಮಕ್ಕಳ ಭವಿಷ್ಯದ ಯೋಚನೆ ಇರುವುದಿಲ್ಲವೇ? ಪ್ರಸ್ತುತ 13,363 ಮಂದಿ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಆಯ್ಕೆಯಾಗಿದ್ದರೂ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಖಟ್ಲೆಯೊಂದು ನ್ಯಾಯಾಲಯದಲ್ಲಿ ಇರುವುದರಿಂದ ಅವರಿಗೆ ಕೆಲಸದ ಆದೇಶಪತ್ರ ನೀಡಲು ಸಾಧ್ಯವಾಗುತ್ತಿಲ್ಲ. 'ವಿಷಯ ಕೋರ್ಟ್‌ನಲ್ಲಿ ಇರುವುದರಿಂದ ನಾವೇನೂ ಹೇಳುವುದಕ್ಕೆ ಆಗದು' ಎಂದು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಚಿವರು ಕೈಚೆಲ್ಲಿ ಕುಳಿತಿದ್ದಾರೆ.

ಕಷ್ಟಪಟ್ಟು ಓದಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಯೂ ನಿರುದ್ಯೋಗಿಗಳಾಗಿರುವ ಗುಂಪು ಒಂದು ಕಡೆಯಾದರೆ, ವಿಷಯವಾರು ಶಿಕ್ಷಕರಿಲ್ಲದೆ ಶಾಲೆಗೆ 'ಬಂದ ಪುಟ್ಟ ಹೋದ ಪುಟ್ಟ' ಎಂಬಂತಾಗಿರುವ ಮಕ್ಕಳು ಇನ್ನೊಂದು ಕಡೆ. ಸ್ಪರ್ಧಾತ್ಮಕ ಜಗತ್ತಿಗೆ ಮಕ್ಕಳನ್ನು ತಯಾರು ಮಾಡುತ್ತಿರುವ ಖಾಸಗಿ ಶಾಲೆಗಳ ಮುಂದೆ ಸರ್ಕಾರಿ ಶಾಲೆಗಳು ಮಂಕಾಗುತ್ತಿರುವುದಂತೂ ಸತ್ಯದ ಸಂಗತಿ. ಇಂತಹ ಕಾರಣಗಳಿಂದ ನೂರಾರು ಶಾಲೆಗಳು ಮುಚ್ಚಿಹೋಗಿವೆ. ಸರ್ಕಾರ ಈಗಲಾದರೂ ಶಾಲೆಗಳ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸದೇ ಇದ್ದರೆ ಮುಂದೊಂದು ದಿನ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಸಂಪೂರ್ಣ ಮುಚ್ಚಿಹೋದರೂ ಆಶ್ಚರ್ಯಪಡಬೇಕಾಗಿಲ್ಲ.

ಸೋಮಶೇಖರ ಯು.ಟಿ., ಮೈಸೂರು

ಭೂ ಸುಧಾರಣೆ: ಅನಾಹುತ ಸರಿಪಡಿಸಿ

ಕರ್ನಾಟಕ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು, ಕೃಷಿಕರಲ್ಲದವರೂ ಕೃಷಿ ಭೂಮಿಯನ್ನು ಕೊಳ್ಳಲು ಅನುವಾಗಿಸಿದ್ದರ ಪರಿಣಾಮ ಆಗಲೇ ಕಾಣಲಾರಂಭಿಸಿದೆ. ರೈತರು ಕುಂಟೆ ಲೆಕ್ಕದಲ್ಲಿ ಕೊಳ್ಳಲೂ ಆಗದಂತಾಗಿ, ಹೊರರಾಜ್ಯದಿಂದ ಬಂದ ವ್ಯಾಪಾರಿಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು ಫಲವತ್ತಾದ ಭೂಮಿಯನ್ನು ಹತ್ತು, ಇಪ್ಪತ್ತೈದು, ಐವತ್ತು ಎಕರೆ ಲೆಕ್ಕದಲ್ಲಿ ಕೊಳ್ಳುವುದು ಶುರುವಾಗಿದೆ.

ಇಂದು ರೈತನಾದವನು ಜಮೀನನ್ನು ಮಾರಬಹುದೇ ವಿನಾ ಕೊಳ್ಳಲು ಆಗುತ್ತಿಲ್ಲ. ಇದು ಹೀಗೆಯೇ ಸಾಗಿದರೆ ಮುಂದೆ ಗತಿ ಏನು?! ರಾಜ್ಯದ ಆಹಾರ ಭದ್ರತೆಯ ಪಾಡೇನು? ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಇದ್ದಾಗ ಈ ತಿದ್ದುಪಡಿಯನ್ನು ವಿರೋಧಿಸಿದ್ದರು. ಈಗ ಅವರದೇ ನೇತೃತ್ವದ ಸರ್ಕಾರ ಇದೆ. ಆಗಿರುವ ಅನಾಹುತವನ್ನು ಸರಿಪಡಿಸಬೇಕು.

ಎಂ.ಎನ್.ಮಂಜುನಾಥ, ಮಾಚನಹಳ್ಳಿ, ತುಮಕೂರು

ಎಲ್‌ಪಿಜಿ ದರ ಇಳಿಕೆ: ಚುನಾವಣಾ ತಂತ್ರ?

ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಕೇಂದ್ರ ಸರ್ಕಾರ ₹ 200 ಇಳಿಕೆ ಮಾಡಿದ್ದು, 'ಇದು ನನ್ನ ಕುಟುಂಬದ ಸಹೋದರಿಯರಿಗೆ ಹೆಚ್ಚು ನೆಮ್ಮದಿ ತರಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. 2014ರಲ್ಲಿ ₹ 400 ಇದ್ದ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹ 1,152ಕ್ಕೆ ಏರಿಸಿ ಜನರ ನೆಮ್ಮದಿಯನ್ನು ಹಾಳು ಮಾಡಲಾಗಿತ್ತು. ಈಗ ಚುನಾವಣೆ ಸಮಯದಲ್ಲಿ ಅದರಲ್ಲಿ ₹ 200ರಷ್ಟು ಇಳಿಕೆ ಮಾಡಿರುವುದು ಮತದಾರರನ್ನು ಮೂರ್ಖರನ್ನಾಗಿಸುವ ತಂತ್ರವೇನೋ ಎಂಬಂತೆ ಭಾಸವಾಗುತ್ತಿದೆ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಕಲುಷಿತ ನೀರು: ಬೇಜವಾಬ್ದಾರಿಯ ಪರಮಾವಧಿ

ಚಿತ್ರದುರ್ಗದ ಕವಾಡಿಗರಹಟ್ಟಿಯಲ್ಲಿ ಇತ್ತೀಚೆಗೆ ಕಲುಷಿತ ನೀರು ಕುಡಿದು ಸಾವುಗಳು ಸಂಭವಿಸಿ, ಬಹಳಷ್ಟು ಮಂದಿ ಅಸ್ವಸ್ಥರಾದ ಪ್ರಕರಣದ ನೆನಪು ಮಾಸುವ ಮುನ್ನವೇ ಯಾದಗಿರಿಯ ಸುರಪುರ ತಾಲ್ಲೂಕಿನ ಚಿಕ್ಕನಳ್ಳಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಹಲವರು ಅಸ್ವಸ್ಥರಾಗಿದ್ದಾರೆ (ಪ್ರ.ವಾ., ಆ. 29). ಈ ಎರಡೂ ಪ್ರಕರಣಗಳು ಆಡಳಿತದ ವೈಫಲ್ಯ, ಧೋರಣೆ ಮತ್ತು ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತವೆ. ಚಿತ್ರದುರ್ಗದ ಪ್ರಕರಣವನ್ನು ನೋಡಿದ ಮೇಲೂ ಜನಪ್ರತಿನಿಧಿಗಳು, ಅಧಿಕಾರಿಗಳು ಎಚ್ಚೆತ್ತುಕೊಳ್ಳದೇ ಇರುವುದು ಬೇಜವಾಬ್ದಾರಿಯ ಪರಮಾವಧಿ.

ಶುದ್ಧ ಕುಡಿಯುವ ನೀರು ಪಡೆಯುವುದು ಪ್ರತಿಯೊಬ್ಬ ಭಾರತೀಯನಿಗೆ ಸಂವಿಧಾನ ನೀಡಿರುವ ಮೂಲಭೂತ ಹಕ್ಕು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಜಲ ಜೀವನ್ ಮಿಷನ್ ಸಮಾಜದ ಕಟ್ಟಕಡೆಯ ಮನುಷ್ಯನನ್ನೂ ತಲುಪುವ ಉತ್ತಮ ಯೋಜನೆಯಾಗಿದ್ದು, ಇದರ ಸದುಪಯೋಗ ಪಡೆದುಕೊಂಡು ರಾಜ್ಯದ ಎಲ್ಲಾ ಮನೆಗಳಿಗೂ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ವ್ಯವಸ್ಥೆಯನ್ನು ಸ್ಥಳೀಯ ಜನಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಮಾಡಬೇಕು. ಮತ್ತೊಮ್ಮೆ ಈ ರೀತಿಯ ಅವಘಡಗಳು ನಡೆಯದ ಹಾಗೆ ಎಚ್ಚರಿಕೆ ವಹಿಸಬೇಕು. ದೇಶವು ಸ್ವಾತಂತ್ರ್ಯ ಪಡೆದು ಅಮೃತ ಮಹೋತ್ಸವ ಆಚರಿಸುವ ವೇಳೆಯಲ್ಲಿ ದೇಶದ ಒಂದು ವರ್ಗದ ಪ್ರಜೆಗಳು ಶುದ್ಧ ಕುಡಿಯುವ ನೀರು ಪಡೆಯುವುದರಿಂದ ವಂಚಿತರಾಗುತ್ತಿದ್ದಾರೆ ಎಂಬುದು ಚಿಂತಿಸಲೇಬೇಕಾದ ಸಂಗತಿ.

ಪ್ರಸಾದ್ ಜಿ.ಎಂ., ಮೈಸೂರು

ಶೋಷಣೆಯ ನಾನಾ ಮುಖ...

ಕಿವಿ ಮುಟ್ಟಲಿ ಕಾರ್ಮಿಕರ ಕೂಗು ಎಂಬ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ, ಆ. 29) ಸಮಯೋಚಿತವೂ ವಾಸ್ತವಾಂಶಗಳಿಂದ ಕೂಡಿದುದೂ ಆಗಿದೆ. ನಮ್ಮ ಸಮಾಜದ ವಿವಿಧ ವಲಯಗಳಲ್ಲಿ ಕಾರ್ಮಿಕರನ್ನು ನಾನಾ ಬಗೆಯಲ್ಲಿ ಶೋಷಿಸುವ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ.

ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಮಿಕರ ಶೋಷಣೆ ಬೇರೆ ಬೇರೆ ರೂಪದಲ್ಲಿ ನಡೆಯುತ್ತಿತ್ತು. ಸಾಲದ ಬಲೆಗೆ ದೂಡಿ, ಅವರ ಕೈ ಕಟ್ಟಿಹಾಕಲು ಏನೇನೋ ಮಸಲತ್ತುಗಳು ನಡೆಯುತ್ತಿದ್ದವು. ಈಗ ಅವುಗಳ ಪ್ರಮಾಣ ಕಡಿಮೆ ಆಗಿರುವುದು ತುಸು ಸಮಾಧಾನಕರ.


ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೈಕೊಟ್ಟ ಮುಂಗಾರು ಬರದ ಬೇಗೆಯಲ್ಲಿ ಕರ್ನಾಟಕ

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಈ ಬಾರಿ ಮುಂಗಾರು ಮಳೆ ಕೊರತೆಯಾಗಿದೆ. ಮುಂಗಾರು ಪ್ರವೇಶ ತಡವಾದ್ದರಿಂದ ಜೂನ್ ತಿಂಗಳಲ್ಲಿ ರಾಜ್ಯದ ಹಲವೆಡೆ ಬಿತ್ತನೆ ಕಾರ್ಯ ನಡೆದಿರಲಿಲ್ಲ. ಜುಲೈನಲ್ಲಿ ಸುರಿದ ಮಳೆಯಿಂದ, ಕೃಷಿ ಚಟುವಟಿಕೆ ಚುರುಕುಗೊಂಡಿತ್ತು. ಆದರೆ, ನಂತರದ ದಿನಗಳಲ್ಲಿ ಮಳೆ ನಿಂತೇ ಹೋಯಿತು. ಅಲ್ಪ ಮಳೆಯಲ್ಲಿ ಎದ್ದುನಿಂತ ವಿವಿಧ ಬೆಳೆಗಳು ಈಗ ನೀರಿಲ್ಲದೆ ಒಣಗುತ್ತಿವೆ. ಇದು ಈಗಿನ ಚಿಂತೆಯಾದರೆ, ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಕೊರತೆಯಾಗುವ ಅಪಾಯವಿದೆ. ಈ ಜಿಲ್ಲೆಗಳಲ್ಲಿ ಬರದ ಸ್ಥಿತಿ ಇದೆ. ಬರ ಎಂಬುದನ್ನು ಸರ್ಕಾರ ಅಧಿಕೃತವಾಗಿ ಘೋಷಿಸಬೇಕು ಅಷ್ಟೆ. ಮುಂಬೈ ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ಬಯಲುಸೀಮೆಯ ಕೆಲವು ಜಿಲ್ಲೆಗಳಲ್ಲಿನ ಬರದ ಸ್ಥಿತಿ ಇಲ್ಲಿದೆ

- ಜೂನ್-ಜುಲೈ-ಆಗಸ್ಟ್ ಅವಧಿಯಲ್ಲಿ ಆಗಬೇಕಿದ್ದ ವಾಡಿಕೆ ಮಳೆ
- ಜೂನ್-ಜುಲೈ-ಆಗಸ್ಟ್ ಅವಧಿಯಲ್ಲಿ ಆಗಿರುವ ವಾಸ್ತವ ಮಳೆ
- ಮಳೆಕೊರತೆ ಪ್ರಮಾಣ



ಬಾಗಲಕೋಟೆ

220 (ಮಿ.ಮೀ.)
148 (ಮಿ.ಮೀ.)
34%

ಬಾಗಕೋಟೆ ಜಿಲ್ಲೆಯಲ್ಲಿ ಜೂನ್ ಹಾಗೂ ಆಗಸ್ಟ್ ತಿಂಗಳಲ್ಲಿ ಮಳೆಯ ಕೊರತೆ ತೀವ್ರವಾಗಿದ್ದು, ಬೆಳೆದ ಬೆಳೆಯು ಕಣ್ಮುಂದೆಯೇ ಮುರುಟಿ ಹೋಗುತ್ತಿವೆ. ಮಳೆಯಾಶ್ರಿತ ಪ್ರದೇಶಗಳಾದ ಇಳಕಲ್ ತಾಲ್ಲೂಕಿನಲ್ಲಿ ಶೇ 48ರಷ್ಟು, ಹುನಗುಂದ ತಾಲ್ಲೂಕಿನಲ್ಲಿ ಶೇ 47ರಷ್ಟು ಮಾತ್ರ ಬಿತ್ತನೆಯಾಗಿದೆ. ಬಾಗಲಕೋಟೆ, ಗುಳೇದಗುಡ್ಡ, ಬಾದಾಮಿ ತಾಲ್ಲೂಕುಗಳಲ್ಲಿ ನೀರಿಲ್ಲದೆ ಬೆಳೆಗಳು ಒಣಗುತ್ತಿವೆ. ‘ಜುಲೈ ಅಂತ್ಯದಲ್ಲಿ ಮಳೆಯಾದಾಗ ಸಂಭ್ರಮದಿಂದ ಬಿತ್ತಿದ್ದೆವು. ನಂತರ ಮಳೆಯಾಗದ್ದರಿಂದ ಬೆಳೆಗಳು ಒಣಗುತ್ತಿವೆ’ ಎನ್ನುತ್ತಾರೆ ಬೆನಕಟ್ಟಿ ರೈತ ಗಿರೀಶ ಉಗಲವಾಟ.

ವಿಜಯಪುರ

245 (ಮಿ.ಮೀ.)
207 (ಮಿ.ಮೀ.)
15%

ವಿಜಯಪುರ ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ ಕೆಲ ಭಾಗದಲ್ಲಿ ಮಾತ್ರ ಅಲ್ಪಸ್ವಲ್ಪ ಮಳೆ ಆಗಿದ್ದು ಬಿಟ್ಟರೆ, ಬಹುತೇಕ ತಾಲ್ಲೂಕುಗಳಲ್ಲಿ ಸಮರ್ಪಕ ಮಳೆಯಾಗಿಲ್ಲ. ತೊಗರಿ, ಜೋಳ, ಸಜ್ಜೆ, ಸೂರ್ಯಕಾಂತಿ, ಹೆಸರು, ಉದ್ದು ಬಿತ್ತನೆ ಮಾಡಲು ಈ ಬಾರಿ ರೈತರಿಗೆ ಸಾಧ್ಯವಾಗಿಲ್ಲ. ಜೂನ್ ಆರಂಭದಲ್ಲೇ ಮುಂಗಾರು ಮಳೆ ಆಗದ ಕಾರಣ ಎಲ್ಲೆಡೆ ಬಿತ್ತನೆಯಾಗದೇ ಪಾಳು ಬಿದ್ದಿರುವ ಹೊಲಗಳು ಕಾಣಸಿಗುತ್ತವೆ. ಕೃಷ್ಣಾ, ಭೀಮಾ ನದಿ ತೀರ ಹಾಗೂ ಆಲಮಟ್ಟಿ ಜಲಾಶಯದ ಹಿನ್ನೀರ ವ್ಯಾಪ್ತಿಯಲ್ಲಿ ನೀರಾವರಿ ಆಶ್ರಿತ ಕಬ್ಬಿನ ಬೆಳೆ ಮಾತ್ರ ಒಂದಷ್ಟು ಇದೆ. ಮಳೆ ಕೊರತೆಯಿಂದ ಈ ಬಾರಿ ಕಬ್ಬಿನ ಇಳುವರಿಯೂ ಕಡಿಮೆಯಾಗುವ ಆತಂಕ ಎದುರಾಗಿದೆ. ಉಳಿದಂತೆ ಮಳೆ ಆಶ್ರಿತ ಹೊಲಗಳು ಬೆಂಗಾಡಾಗಿವೆ. ಇಂಡಿ, ಸಿಂದಗಿ, ದೇವರ ಹಿಪ್ಪರಗಿ, ನಾಗಠಾಣ, ಚಡಚಣ ಭಾಗದಲ್ಲಿ ಲಿಂಬೆ ಮತ್ತು ಬಬಲೇಶ್ವರ, ತಿಕೋಟಾ, ವಿಜಯಪುರ ತಾಲ್ಲೂಕು ವ್ಯಾಪ್ತಿಯಲ್ಲಿರುವ ದ್ರಾಕ್ಷಿ ತೋಟಗಳು ನೀರಿನ ಕೊರತೆ ಅನುಭವಿಸುತ್ತಿವೆ.

ಬೀದರ್

476 (ಮಿ.ಮೀ.)
400 (ಮಿ.ಮೀ.)
16%

ಆಗಸ್ಟ್ ತಿಂಗಳಲ್ಲಿ ಮಳೆ ಕೈಕೊಟ್ಟಿರುವುದರಿಂದ ಜಿಲ್ಲೆಯ ಎಂಟು ತಾಲ್ಲೂಕುಗಳ ಪೈಕಿ ಎರಡು ಬರದತ್ತ ಮುಖ ಮಾಡಿವೆ. ಭಾಲ್ಕಿ, ಹುಲಸೂರಿನಲ್ಲಿ ಕೊರತೆ ಮಳೆ ಆಗಿರುವುದರಿಂದ ಅವೆರಡೂ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸುವುದು ಬಹುತೇಕ ಖಚಿತವಾಗಿದ್ದು, ಅಧಿಕೃತ ಘೋಷಣೆಯೊಂದೇ ಬಾಕಿ ಉಳಿದಿದೆ ಎಂದು ಗೊತ್ತಾಗಿದೆ.

ಯಾದಗಿರಿ

353 (ಮಿ.ಮೀ.)
311 (ಮಿ.ಮೀ.)
12%

ಜಿಲ್ಲೆಯ ಯಾದಗಿರಿ ಮತ್ತು ಹುಣಸಗಿ ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲು ಸಿದ್ಧತೆ ನಡೆದಿದೆ. ಇನ್ನು ಉಳಿದ ತಾಲ್ಲೂಕುಗಳಾದ ಶಹಾಪುರ, ಸುರಪುರ, ಗುರುಮಠಕಲ್, ವಡಗೇರಾ ತಾಲ್ಲೂಕುಗಳಲ್ಲೂ ಮಳೆ ಪ್ರಮಾಣ ಕಡಿಮೆ ಇದೆ. ಇನ್ನೊಂದೆಡೆ ನಾರಾಯಣಪುರದ ಬಸವಸಾಗರ ಜಲಾಶಯದಲ್ಲಿ ದಿನೇ ದಿನೆ ನೀರಿನ ಪ್ರಮಾಣ ಇಳಿಕೆಯಾಗುತ್ತಿದೆ.

ಕಲಬುರಗಿ

397 (ಮಿ.ಮೀ.)
357 (ಮಿ.ಮೀ.)
10%

ಕಲಬುರಗಿ ಜಿಲ್ಲೆಯ ಮುಂಗಾರು ಹಂಗಾಮಿನ ಆಗಸ್ಟ್ ತಿಂಗಳಲ್ಲಿ ಶೇ 81ರಷ್ಟು ಮಳೆ ಕೊರತೆಯಿಂದಾಗಿ ಜಿಲ್ಲೆಯ ಆರು ತಾಲ್ಲೂಕುಗಳು ಬರದತ್ತ ಮುಖಮಾಡಿವೆ. ಕಲಬುರಗಿ, ಅಫಜಲಪುರ, ಆಳಂದ, ಚಿತ್ತಾಪುರ, ಕಾಳಗಿ ಮತ್ತು ಶಹಾಬಾದ್ ತಾಲ್ಲೂಕುಗಳಲ್ಲಿ ನಿರೀಕ್ಷೆಗಿಂತ ಅತಿ ಕಡಿಮೆ ಮಳೆಯಾಗಿದೆ. ತೇವಾಂಶದ ಕೊರತೆಗೆ ಹೆಸರು, ತೊಗರಿ, ಹತ್ತಿ, ಸೋಯಾದಂತಹ ಬೆಳೆಗಳು ಬಾಡುತ್ತಿವೆ.

ರಾಯಚೂರು

285 (ಮಿ.ಮೀ.)
231 (ಮಿ.ಮೀ.)
19%

ಜಿಲ್ಲೆಯ ನೀರಾವರಿ ಪ್ರದೇಶದಲ್ಲೂ ಕಾಲುವೆಗಳಲ್ಲಿ ನೀರು ಹರಿಯದ ಕಾರಣ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಿಲ್ಲಾಡಳಿತ ಈಗಾಗಲೇ ಜಿಲ್ಲೆಯ ಸಿರವಾರ, ಮಾನ್ವಿ ಹಾಗೂ ಲಿಂಗಸುಗೂರು ತಾಲ್ಲೂಕು ಬರಪೀಡಿತ ಎಂದು ಗುರುತಿಸಿದೆ. ಸರ್ಕಾರಕ್ಕೆ ಮಾಹಿತಿಯನ್ನೂ ಕೊಟ್ಟಿದೆ. ಮಾನ್ವಿ, ಸಿರವಾರ ತಾಲ್ಲೂಕಿನಲ್ಲಿ ಆಗಸ್ಟ್‌ನಲ್ಲಿ ವಾಡಿಕೆಗಿಂತ ಶೇ 80ರಷ್ಟು ಕಡಿಮೆ ಮಳೆಯಾಗಿದೆ.

ಬೆಳಗಾವಿ

473 (ಮಿ.ಮೀ.)
406 (ಮಿ.ಮೀ.)
14%

ಬೆಳಗಾವಿ ಜಿಲ್ಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ 7.11 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ ಹೊಂದಲಾಗಿತ್ತು. ಈ ಪೈಕಿ 6.28 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿದೆ. ಈ ಪೈಕಿ 2.28 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಪ್ರದೇಶದಲ್ಲಿ ಬೆಳೆದ ಗೋವಿನಜೋಳ, ತೊಗರಿ, ಸೂರ್ಯಕಾಂತಿ, ಸೋಯಾಅವರೆ, ಉದ್ದು, ಹೆಸರು, ಹತ್ತಿ, ಶೇಂಗಾ ಬೆಳೆಗಳು ಕಾಳುಕಟ್ಟುವ, ಹೂವು ಬಿಡುವ ಹಂತದಲ್ಲೇ ಒಣಗುತ್ತಿವೆ. ಇನ್ನೂ ಕೊಳವೆಬಾವಿ, ತೆರೆದ ಬಾವಿ ಮತ್ತಿತರ ಜಲಮೂಲಗಳಲ್ಲಿ ಅಂತರ್ಜಲ ಮಟ್ಟ ಕುಸಿದಿರುವುದರಿಂದ ನೀರಾವರಿ ಪ್ರದೇಶದಲ್ಲಿ ಬೆಳೆದಿರುವ ಕಬ್ಬು ಸಹ ಒಣಗುತ್ತಿವೆ. ಇಳುವರಿ ಕುಸಿತದ ಆತಂಕ ರೈತರನ್ನು ಕಾಡುತ್ತಿದೆ.

ಕೊಪ್ಪಳ

234 (ಮಿ.ಮೀ.)
177 (ಮಿ.ಮೀ.)
24%

ಕೊಪ್ಪಳ ಜಿಲ್ಲೆಯಲ್ಲಿ ಮೆಕ್ಕೆಜೋಳ, ಸಜ್ಜೆ ಬೆಳೆಗಳು ತೆನೆಯೊಡೆಯುವ ಮಟ್ಟಕ್ಕೆ ಬೆಳೆದು ನಳನಳಿಸುತ್ತಿದ್ದವು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಮೆಕ್ಕೆಜೋಳ ದಂಟಿನ ಜುಟ್ಟು ಮೇಲೆ ಬಂದಿಲ್ಲ, ತೆನೆಯೊಡೆದ ಸಜ್ಜೆ ಕಾಳು ಕಟ್ಟಲಿಲ್ಲ. ದನಕರುಗಳಿಗೆ ಮೇವಿನ ಸಮಸ್ಯೆ ಉದ್ಭವಿಸಲಿದೆ ಎಂಬ ಆತಂಕ ಈಗಲೇ ರೈತರನ್ನು ಕಾಡುತ್ತಿದೆ. ಈವರೆಗೆ ಇದ್ದ ಹೊಟ್ಟು ಮೇವಿನ ಸಂಗ್ರಹವೆಲ್ಲ ಖಾಲಿಯಾಗಿದೆ. ನಾವು ಹೇಗಾದರೂ ಬದುಕುತ್ತೇವೆ, ಸರ್ಕಾರ ಅಕ್ಕಿ, ಗೋಧಿ ಕೊಟ್ಟಾದರೂ ಸಲಹುತ್ತದೆ. ಆದರೆ ಜಾನುವಾರುಗಳ ಹೊಟ್ಟೆಗೆ ಏನು ಮಾಡಬೇಕೆಂಬುದು ತಿಳಿಯುತ್ತಿಲ್ಲ ಎಂದು ಕುಷ್ಟಗಿ ಭಾಗದ ರೈತರು ಹೇಳುತ್ತಾರೆ.

ಧಾರವಾಡ

390 (ಮಿ.ಮೀ.)
336 (ಮಿ.ಮೀ.)
14%

ಜುಲೈ ತಿಂಗಳಲ್ಲಿ ಕೆಲ ದಿನ ಮಳೆ ಸುರಿದಿತ್ತು. ಜೂನ್ ಮತ್ತು ಆಗಸ್ಟ್‌ನಲ್ಲಿ ಮಳೆ ಕೈಕೊಟ್ಟಿದೆ. ಬೆಳೆ ಉಳಿಸಿಕೊಳ್ಳಲು ಕೆಲ ರೈತರು ಕೊಳವೆಬಾವಿಗಳಿಂದ ನೀರು ಹಾಯಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಕೆಲವೆಡೆ ವಿದ್ಯುತ್ ಸಮಸ್ಯೆ ಇದೆ. ಜಿಲ್ಲೆಯಲ್ಲಿ ಬಿತ್ತನೆ ಗುರಿ 2.56 ಲಕ್ಷ ಹೆಕ್ಟೇರ್ ಪೈಕಿ 2.11 ಲಕ್ಷ ಹೆಕ್ಟೇರ್‌ನಲ್ಲಿ (ಶೇ 82) ಬಿತ್ತನೆಯಾಗಿದೆ. ಸುಮಾರು 72 ಸಾವಿರ ಹೆಕ್ಟೇರ್‌ನಲ್ಲಿ ಮುಸುಕಿನ ಜೋಳ ಬಿತ್ತನೆಯಾಗಿದೆ. ಮೊಳಕೆಯೊಡೆದಿರುವ ಬೆಳೆಗಳು ಮುರುಟುತ್ತಿವೆ.

ವಿಜಯನಗರ

261 (ಮಿ.ಮೀ.)
174 (ಮಿ.ಮೀ.)
33%

ಬಳ್ಳಾರಿ

227 (ಮಿ.ಮೀ.)
126 (ಮಿ.ಮೀ.)
44%

ಜಿಲ್ಲೆಯಲ್ಲಿ ತೆನೆ ಮೂಡುವ, ಕಾಳು ಕಟ್ಟುವ ಸಂದಿಗ್ಧ ಸಂದರ್ಭದಲ್ಲಿ ಮಳೆ ಕೈಕೊಟ್ಟಿದ್ದರಿಂದ ಜೋಳ, ಮೆಕ್ಕೆಜೋಳದ ಬೆಳೆ ಬಹುತೇಕ ಹಾನಿಗೊಂಡಿದೆ. 50,036 ಹೆಕ್ಟೇರ್ ಪ್ರದೇಶಗಳ ಪೈಕಿ 35 ಸಾವಿರ ಹೆಕ್ಟೇರ್‌ನಲ್ಲಿನ ಜೋಳದ ಗಿಡಗಳು ಒಣಗಿದ್ದು, ಇವುಗಳು ಪಶು ಆಹಾರ ಆಗಬೇಕಷ್ಟೆ, ಆದರೂ ಹೊಲದಿಂದ ಕತ್ತರಿಸಿ ಸಾಗಿಸಿದರೆ ಇದಕ್ಕೆ ತಗಲುವ ಕೂಲಿ ವೆಚ್ಚವೂ ರೈತರಿಗೆ ಹೊರೆಯಾಗಿಯೇ ಕಾಣಿಸಿದೆ. ಬೆಳೆ ನಷ್ಟ ಉಂಟಾಗಿದ್ದರಿಂದ ಸಾಲ ತೀರಿಸಲಾಗದ ಕೊರಗಿನಲ್ಲಿ ತಾಲ್ಲೂಕಿನ ಹ್ಯಾರಡದ ರೈತ ಮಹೇಶಪ್ಪ ಹೊಲದಲ್ಲಿ ಮೂರು ದಿನಗಳ ಹಿಂದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉತ್ತರ ಕನ್ನಡ

2377 (ಮಿ.ಮೀ.)
1944 (ಮಿ.ಮೀ.)
18%

ಹೆಚ್ಚು ಮಳೆ ಬೀಳುವ ಜಿಲ್ಲೆಯಲ್ಲಿ ಒಂದೆನಿಸಿದ್ದ ಉತ್ತರ ಕನ್ನಡದಲ್ಲಿ ಈ ಬಾರಿ ಮಳೆ ಕೊರತೆ ಉಂಟಾಗಿದೆ. ಭತ್ತ, ಮೆಕ್ಕೆಜೋಳ ಬೆಳೆಗೆ ನೀರಿನ ಕೊರತೆ ಎದುರಾಗಿದೆ. ಹಳಿಯಾಳ, ಯಲ್ಲಾಪುರ ತಾಲ್ಲೂಕು ಹಾಗೂ ಕರಾವಳಿ ಭಾಗದಲ್ಲಿ ಭತ್ತದ ಗದ್ದೆಗಳು ಒಣಗಲಾರಂಭಿಸಿವೆ. ಶಿರಸಿ, ಸಿದ್ದಾಪುರ, ಯಲ್ಲಾಪುರ, ಹೊನ್ನಾವರ ಭಾಗದಲ್ಲಿ ಬಿಸಿಲಿನ ಝಳಕ್ಕೆ ಅಡಿಕೆ ಕಾಯಿಗಳು ಉದುರುವ ಸ್ಥಿತಿ ಮುಂದುವರೆದಿದೆ.

ಗದಗ

236 (ಮಿ.ಮೀ.)
196 (ಮಿ.ಮೀ.)
17%

ಗದಗ ಜಿಲ್ಲೆಯಲ್ಲಿ ಆಗಸ್ಟ್ ತಿಂಗಳಲ್ಲಿ ವಾಡಿಕೆಯಂತೆ 77 ಮಿ.ಮೀ. ಮಳೆ ಆಗಬೇಕಿತ್ತು. ಆದರೆ, 27 ಮಿ.ಮೀ. ಮಾತ್ರ ಮಳೆಯಾಗಿದ್ದು, ಶೇ 65ರಷ್ಟು ಮಳೆ ಕೊರತೆಯಾಗಿದೆ. ತಾಲ್ಲೂಕುಗಳು ಬರಪೀಡಿತ ಎಂದು ದೃಢಪಡಿಸಲು ಕೃಷಿ ಇಲಾಖೆ ಜಿಲ್ಲೆಯ 24 ಗ್ರಾಮಗಳಲ್ಲಿ ತಳಮಟ್ಟದ ಸಮೀಕ್ಷೆ ನಡೆಸಿದ್ದು, ಅಲ್ಲಿನ ಮಾಹಿತಿ ಕ್ರೋಢೀಕರಿಸಿ ಸರ್ಕಾರಕ್ಕೆ ಈಗಾಗಲೇ ವರದಿ ಸಲ್ಲಿಸಿದೆ.

ಮಾಹಿತಿ: ಪ್ರಜಾವಾಣಿ ಬ್ಯೂರೊಗಳಿಂದ   ಪ್ರಜಾವಾಣಿ ಗ್ರಾಫಿಕ್ಸ್

ಈ ವರ್ಷದ ಅಂತ್ಯಕ್ಕೆ ‘ಯುಐ’ ತೆರೆಗೆ



ಉಪೇಂದ್ರ

ಉಪೇಂದ್ರ ನಿರ್ದೇಶಿಸಿ, ನಟಿಸಿರುವ ‘ಯುಐ’ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗಿವೆ. ಇತ್ತೀಚೆಗಷ್ಟೇ ನಟ ಉಪೇಂದ್ರ ಚಿತ್ರದಲ್ಲಿನ ತಮ್ಮ ಪಾತ್ರದ ಡಬ್ಬಿಂಗ್ ಪೂರ್ಣಗೊಳಿಸಿದ್ದಾರೆ.

ಉಪೇಂದ್ರ ಅವರು ಹಲವು ವರ್ಷಗಳ ಬಳಿಕ ನಿರ್ದೇಶನಕ್ಕೆ ಮರಳಿರುವ ಚಿತ್ರವಿದು. ಕೆ.ಪಿ. ಶ್ರೀಕಾಂತ್ ಮತ್ತು ಜಿ. ಮನೋಹರನ್ ಇದಕ್ಕೆ ಬಂಡವಾಳ ಹೂಡಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಫಸ್ಟ್ ಲುಕ್ ಬಿಡುಗಡೆಯಾಗಿತ್ತು. ಅದರಲ್ಲಿ ಯಾವ ವಿಷಯವನ್ನೂ ಬಿಟ್ಟುಕೊಡದ ಉಪೇಂದ್ರ, ‘ನನಗೆ ಪ್ರಚಾರ ಮಾಡುವ ಇರಾದೆ ಇಲ್ಲ. ಒಳ್ಳೆಯ ಚಿತ್ರವನ್ನು ಪ್ರೇಕ್ಷಕರೇ ಪ್ರಚಾರ ಮಾಡುತ್ತಾರೆ’ ಎಂದಿದ್ದರು. ಈ ಹೊಸ ಬಗೆಯ ಪ್ರಚಾರ ತಂತ್ರಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ‘ಫಸ್ಟ್ ಲುಕ್ ಬಿಡುಗಡೆ ಮಾಡಲಾರೆ’ ಎಂದು ಪ್ರೇಕ್ಷಕರ ತಲೆಗೆ ಹುಳ ಬಿಡುವ ಯತ್ನ ಮಾಡಿದ್ದರು.

‘ಚಿತ್ರೀಕರಣ ಪೂರ್ತಿಯಾಗಿದೆ. ಆದರೆ ಒಂದು ಹಾಡಿನ ಚಿತ್ರೀಕರಣ ಬಾಕಿಯಿದೆ. ಐದು ಭಾಷೆಗಳಲ್ಲಿ ಚಿತ್ರ ತೆರೆಗೆ ಬರುತ್ತಿದ್ದು, ಈ ಹಾಡಿಗೆ ಬೇರೆ ಭಾಷೆಯ ಸ್ಟಾರ್ ನಟನನ್ನು ತರುತ್ತೇವೆ. ನಮ್ಮದೇ ನಾಡಿನ ಕಥೆಯಾಗಿದ್ದು, ಹೆಚ್ಚು ಗ್ರಾಫಿಕ್ಸ್ ಬಳಕೆ ಮಾಡಿದ್ದೇವೆ. ಹೀಗಾಗಿ ಪೋಸ್ಟ್ ಪ್ರೊಡಕ್ಷನ್ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಈ ವರ್ಷದ ಅಂತ್ಯಕ್ಕೆ ಚಿತ್ರ ಬಿಡುಗಡೆ ಮಾಡುವ ಆಲೋಚನೆ ಇದೆ’ ಎಂದು ನಿರ್ಮಾಪಕ ಕೆ.ಪಿ. ಶ್ರೀಕಾಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

ಅಣ್ಣನಿಗೆ ಆ್ಯಕ್ಷನ್ ಕಟ್ ಹೇಳಿದ ತಮ್ಮ!

ನಟ ಕೋಮಲ್ ತಮ್ಮ ಅಣ್ಣ ನವರಸ ನಾಯಕ ಜಗ್ಗೇಶ್ ಅವರಿಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಆದರೆ ಇದು ಸಿನಿಮಾದಲ್ಲಿ ಅಲ್ಲ, ಬದಲಾಗಿ ಸಿನಿಮಾದೊಳಗೆ ಇರುವ ಸಿನಿಮಾದಲ್ಲಿ. ಕೋಮಲ್ ಚಿತ್ರದ ಪಾತ್ರದಲ್ಲಿ ನಿರ್ದೇಶಕ.

ಮತಿವಣನ್ ನಿರ್ದೇಶಿಸಿರುವ ಕೋಮಲ್ ಅಭಿನಯದ ‘ಕಾಲಾಯ ನಮಃ’ ಚಿತ್ರದ ಶೂಟಿಂಗ್ ಅಂತಿಮ ಹಂತ ತಲುಪಿದ್ದು, ಇತ್ತೀಚೆಗೆ ಜಗ್ಗೇಶ್ ಹಾಗೂ ಕೋಮಲ್ ಜೊತೆಯಾಗಿ ನಟಿಸುವ ದೃಶ್ಯಗಳನ್ನು ಸೆರೆಹಿಡಿಯಲಾಯಿತು. ಹಾಡೊಂದಕ್ಕೆ ಹೆಜ್ಜೆ ಹಾಕಿದ ಜಗ್ಗೇಶ್ ಅವರು ಒಬ್ಬ ಕಲಾವಿದನ ಪಾತ್ರದಲ್ಲಿ ತಮ್ಮನ ಸಿನಿಮಾಗೆ ಸಾಥ್ ನೀಡಿದರು.

‘ನನಗಿಂತ ಕೋಮಲ್ ಉತ್ತಮ ನಟ. ಅವನು ಬೇರೆ ಭಾಷೆಯಲ್ಲಿ ಇದ್ದಿದ್ದರೆ ಹೆಚ್ಚು ಬಾಳಿಕೆ ಬರುತ್ತಿದ್ದ ಎಂದು ನನಗೆ ಅನಿಸುತ್ತದೆ. ಒಂದು ವರ್ಷದ ಬಳಿಕ ಈ ಸಿನಿಮಾ ಮೂಲಕ ಮತ್ತೆ ಬಣ್ಣಹಚ್ಚಿದ್ದೇನೆ. ಇದರಲ್ಲಿ ನಾನು, ಕೋಮಲ್ ಹಾಗೂ ನನ್ನ ಮಗ ಯತಿರಾಜ್ ಮೂವರೂ ನಟಿಸಿದ್ದೇವೆ’ ಎಂದರು ಜಗ್ಗೇಶ್.


‘‘ಕಾಲಾಯ ನಮಃ ಸಿನಿಮಾ ಶೂಟಿಂಗ್ ಮುಕ್ತಾಯದ ಹಂತದಲ್ಲಿದೆ. ಅಕ್ಟೋಬರ್–ನವೆಂಬರ್‌ನಲ್ಲಿ ಸಿನಿಮಾ ರಿಲೀಸ್‌ಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ನಾಯಕಿಯಾಗಿ ಆಸಿಯಾ ಫಿರ್ದೋಸ್ ನಟಿಸಿದ್ದಾರೆ. ಪ್ರಕಾಶ್ ರಾಜ್, ಸುಚೇಂದ್ರ ಪ್ರಸಾದ್, ಶೈನ್ ಶೆಟ್ಟಿ, ಯತಿರಾಜ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಈ ಸಿನಿಮಾ ಬಳಿಕ ‘ಯಲಾ ಕುನ್ನಿ’, ‘ರೋಲೆಕ್ಸ್’, ಹೆಂಡ್ತಿ ರೋಬೊ ಆಗಿದ್ದರೆ ಹೇಗಿರುತ್ತದೆ ಎನ್ನುವ ಕಥೆ ಇರುವ ‘ಹುಕುಂ’ ಚಿತ್ರಗಳಲ್ಲಿ ತೊಡಗಿಸಿಕೊಳ್ಳಲಿದ್ದೇನೆ’’ ಎನ್ನುತ್ತಾರೆ ಕೋಮಲ್.



ಕೋಮಲ್   ಜಗ್ಗೇಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಸಾಮಾನ್ಯಳು ಕಲಿಸಿದ ದೊಡ್ಡ ವಿವೇಕ



ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ನೇತ್ರಾವತಿ ಎಂಬ ಈ ಮಹಿಳೆ ನನಗೆ ತುಂಬಾ ವಿಶಿಷ್ಟವಾಗಿ ಕಂಡಳು. ನಮ್ಮ ಹೊಸ ಮನೆ ಕಟ್ಟಡ ಕೆಲಸಕ್ಕೆ ಬರುವ ಈಕೆಯೊಂದಿಗೆ ಕುಶಲೋಪ-ಹಾರಿಯಾಗಿ ಮಾತಾಡಿದೆ. ಆಕೆಯ ಕುಟುಂಬದ ಬಗ್ಗೆ ತಿಳಿಯಲು ಸಹಜವಾಗಿ ವಿಚಾರಿಸಿದೆ. ಹತ್ತು ನಿಮಿಷದ ಆಕೆಯ ನಿರರ್ಗಳ ಮಾತಿನಲ್ಲಿ ಐದಾರು ಕಾದಂಬರಿ ಗೀಜುವಷ್ಟು ಕಥೆ ಅಡಗಿತ್ತು. ಬದುಕಿನ ದುಃಖಗಳನ್ನು ಈಕೆ ಅದೆಷ್ಟು ಸಲೀಸಾಗಿ ಎದುರಿಸಿದ್ದಾಳೆ. ಇವಳಿಂದ ಕಲಿಯುವುದು ಬೆಟ್ಟದಷ್ಟಿದೆ. ಅನಕ್ಷರಸ್ಥಳಾದ ಅವಳ ವಿವೇಕ ನನ್ನಲ್ಲೇ ಇಲ್ಲವಲ್ಲ ಎಂದು ಯೋಚಿಸಿ ಗಾಬರಿಯಾದೆ.

ಬಡತನ ಮತ್ತು ಅಸಹಾಯಕತೆ ಎಂಥವರನ್ನೂ ನೆಟ್ಟಗೆ ಮಾಡಿ ಬಿಡುತ್ತವೆ. ಕಾಲಚಕ್ರ ನಿಧಾನಕ್ಕೆ ಎಲ್ಲವನ್ನೂ ತಿಳಿಗೊಳಿಸಿ ಮುನ್ನಡೆಸುತ್ತದೆ. ನಾವೂ ಅದರ ಜೊತೆಗೆ ಕಮಕ್ ಕಿಮಕ್ ಎನ್ನದೆ ಸಾಗಬೇಕಷ್ಟೆ.

ಕುಡುಕ ಗಂಡನಿಂದ ದೂರವಾದ ನೇತ್ರಾ ತವರು ಮನೆ ಸೇರಿದ್ದಳು. ತನ್ನೆರಡು ಮಕ್ಕಳನ್ನು ಸಾಕುವ ಜವಾಬ್ದಾರಿ ಅವಳ ಮೇಲಿತ್ತು. ಓದಿಲ್ಲದ ಅವಳಿಗೆ ಹದಿನೈದು ವರುಷದ ಹಿಂದೆ ಸಿಕ್ಕಿದ್ದು ಗಾರೆ ಕೆಲಸ. ಕಷ್ಟಗಳಿಗೆ ಹೆದರಬಾರದು ಎಂದು ಆಕೆ ನಿರ್ಧರಿಸಿಕೊಂಡಳು. ತನ್ನ ಸುಖಗಳ ಕೈಬಿಟ್ಟು ಮಗ ಮತ್ತು ಮಗಳನ್ನು ಚೆನ್ನಾಗಿ ಓದಿಸಬೇಕು ಎಂಬ ಆಸೆ ಹೊತ್ತಳು. ಆದರೆ ಇದರ ನಡುವೆ ಮತ್ತೊಂದು ದುರದೃಷ್ಟ ನಡೆಯಿತು. ಎಸ್.ಎಸ್.ಎಲ್.ಸಿ.ಯಲ್ಲಿ ಫಸ್ಟ್ ಕ್ಲಾಸ್ ಬಂದಿದ್ದ ಈಕೆಯ ಮಗ ಕಾಲೇಜಿಗೆ ಸೇರಿದ್ದ. ಒಂದು ದಿನ ಹುಡುಗರ ಜೊತೆ ಕೆರೆಗೆ ಈಜಲು ಹೋದವನು ಮತ್ತೆ ಮರಳಿ ಬರಲೇ ಇಲ್ಲ. ಜೊತೆಯಲ್ಲಿ ಇದ್ದವರೇ ತಳ್ಳಿದರೋ ಏನೋ ಅದೂ ಗೊತ್ತಿಲ್ಲ. ತನ್ನ ಅಕ್ಕನ ಮಗನೇ ಈ ಕೃತ್ಯ ಮಾಡಿರಬಹುದು ಎಂಬ ಗುಮಾನಿ ಅವಳಿಗೆ ಈಗಲೂ ಇದೆ. ಆದರೆ ಅವಳು ಅವನನ್ನು ಈಗ ಕ್ಷಮಿಸಿದ್ದಾಳೆ. ಅವಳ ಜೊತೆಯಲ್ಲೇ ಆ ಹುಡುಗನೂ ಗಾರೆ ಕೆಲಸಕ್ಕೆ ಬರುತ್ತಾನೆ.

‘ನನ್ನ ಮಗ ಹೋಗಿಬಿಟ್ಟ ಈಗ ಅಕ್ಕನ ಮಗನನ್ನೇ ನನ್ನ ಮಗ ಎಂದು ಭಾವಿಸಿ ಪ್ರೀತಿಸುತ್ತಿದ್ದೇನೆ. ತಾಯಿ ಪ್ರೀತಿ ತೋರಿಸಲು ರಕ್ತ ಹಂಚಿಕೊಂಡ ಮಗನೇ ಇರಬೇಕು ಎಂದು ರೂಲ್ಸೇನೂ ಇಲ್ಲವಲ್ಲ ಸರ್’ ಎಂದು ಮುಗ್ಧವಾಗಿ ಆಕೆ ಪ್ರಶ್ನಿಸುತ್ತಾಳೆ. ತನ್ನ ಮಗನ ಸಾವಿಗೆ ಕಾರಣವಾದನಿಗೂ ಒಳ್ಳೆಯದನ್ನೇ ಆಲೋಚಿಸುವ ಇವಳದು ಅದೆಂಥ ವಿಶಾಲ ಹೃದಯ. ಒಳ್ಳೆಯದು, ಕೆಟ್ಟದ್ದು, ದೇವರು ನೋಡಿ-ಕೊಳ್ಳುತ್ತಾನೆ. ಅದೆಲ್ಲಾ ತೀರ್ಮಾನಿಸುವಷ್ಟು ನಾನು ದೊಡ್ಡವಳಲ್ಲ. ಆಗಿ ಹೋದ ಕೆಟ್ಟ ಘಟನೆಗಳನ್ನು ನೆನಪಿಸಿಕೊಳ್ಳಲೇ ಬಾರದು. ನಾಳೆಯ ಬದುಕು ನಡೆಸಬೇಕಲ್ಲ ಅದಕ್ಕಾಗಿ ದುಡಿಯಲೇ ಬೇಕು ಎಂದು ತಣ್ಣಗೆ ಆಕೆ ಹೇಳಬಲ್ಲಳು.

ಆಘಾತಕಾರಿ ದುರ್ಘಟನೆಗಳು ನಡೆದ ಮೇಲೂ ಹೀಗೆ ಗಟ್ಟಿಯಾಗಿ ದಿಟ್ಟವಾಗಿ ಬದುಕಲ್ಲಿ ನಿಲ್ಲುವ ಶಕ್ತಿ ಎಲ್ಲರಲ್ಲೂ ಇರುವುದಿಲ್ಲ. ಬದುಕಿನ ತೀವ್ರ ಹೊಡೆತಗಳು ಅಳಲು ಅವಕಾಶವಿಲ್ಲದಂತೆ ಮಾಡಿಬಿಡುತ್ತವೆ. ಇಡೀ ಬದುಕಲ್ಲಿ ಕಷ್ಟವನ್ನು ಬಿಟ್ಟರೆ ಸುಖವನ್ನೇ ಕಾಣದೆ ಬಾಳುತ್ತಿರುವ ನೇತ್ರ ಎಂದೂ ದುಃಖಿತಳಾಗಿ ಇರುವಂತೆ ಕಾಣುವುದೇ ಇಲ್ಲ. ಇದ್ದರೂ ತೋರಗೊಡುವುದಿಲ್ಲ.

ಮನಸ್ಸು ಮುರಿದು ಹೋದ ಮೇಲೆಯೂ ಮತ್ತೆ ತನ್ನನ್ನು ತಾನು ಕಟ್ಟಿಕೊಳ್ಳಲು ಗಟ್ಟಿ ಮನಸ್ಸು ಮತ್ತು ಧೈರ್ಯ ಬೇಕು. ಅದನ್ನು ಎಲ್ಲೂ ಕೊಂಡುಕೊಳ್ಳಲು ಸಾಧ್ಯವಿಲ್ಲ. ಇದು ನಮ್ಮೊಳಗಿಂದಲೇ ಹುಟ್ಟಬೇಕು. ಬದುಕನ್ನು ಸಹಜವಾಗಿ ಸ್ವೀಕರಿಸಿ ನಾಳೆಯ ಹಿತಕ್ಕಾಗಿ, ಸುಖಕ್ಕಾಗಿ, ಮತ್ತು ಮತ್ತೊಬ್ಬರ ಶ್ರೇಯಸ್ಸಿಗಾಗಿ ಜೀವನವನ್ನು ರೂಪಿಸಿಕೊಂಡಿರುವ ನೇತ್ರಳಂಥ ತಾಯಿ ಒಂದು ಪಾಠ. ನಾಳೆಯ ಒಳಿತಿಗಾಗಿ ಇಂದಿನ ಕಷ್ಟಗಳ ಇಂದೇ ಕರಗಿಸಿ ಬಿಡಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ   ಗುರುವಾರ ಆಗಸ್ಟ್ 31, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಪೂರ್ಣಿಮಾ ಗಂ. 07-06 ನಂತರ (ಕೃಷ್ಣ) ಪ್ರತಿಪದ್ ಗಂ. 27-19 ನಕ್ಷತ್ರ: ಶತಭಿಷಾ ಗಂ 17-45 ಯೋಗ: ಸುಕರ್ಮ ಗಂ. 17-16 ಕರಣ: ಬವ ಗಂ. 07- 06, ಸಿಂಹ ಮಾಸದ 14 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 4. ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-23 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 14 ಸಫರ್, ದಿನ ವಿಶೇಷ : ಓಣಂ ನಾಲ್ಕನೇ ದಿನ, ಶ್ರೀ ನಾರಾಯಣ, ಗುರುಗಳ ಜನ್ಮದಿನ (ಕೇರಳ), ಝುಲಾನಾ, ಯಾತ್ರಾ ಸಮಾಪನಾ, ಅಮರನಾಥ ಯಾತ್ರಾ, ರಕ್ಷಾಬಂಧನ, ಗಾಯತ್ರೀ ಜಪಮ್, ಅದೃಷ್ಟ ಸಂಖ್ಯೆ : 4, 7

ಮೇಷ: ತುಂಬಾ ಆತ್ಮೀಯರಂತೆ ಮುಖವಾಡ ಹೊಂದಿರುವ ಅಕ್ಕ-ಪಕ್ಕದ ಹಿತಶತ್ರುಗಳ ಬಣ್ಣ ನಿಮ್ಮೆದುರು ಬಯಲಾಗಲಿದೆ. ಅಪೇಕ್ಷಿಸಿದ ಅವಶ್ಯಕ ವಸ್ತುಗಳ ಗಳಿಕೆಯಿಂದ ಅಧಿಕ ಸಂತೋಷ ವೃದ್ಧಿಯಾಗುವುದು.

ವೃಷಭ: ಮಹಿಳೆಯರಿಗೆ ಆಫೀಸಿನ ಕೆಲಸದ ಒತ್ತಡದಲ್ಲಿ ಮನೆಯ ಕೆಲಸಗಳತ್ತ ಗಮನ ಕಡಿಮೆಯಾಗುವುದು. ಜೀವನ ಸುಲಭವಾಗಿ ಸಾಗುವಂಥ ಹೊಂದಾಣಿಕೆ ಮಾಡಿಕೊಳ್ಳುವಿರಿ. ಮನೆಯಲ್ಲಿನ ಜವಾಬ್ದಾರಿಗಳು ಹೆಚ್ಚಲಿವೆ.

ಮಿಥುನ: ಮೇಲಧಿಕಾರಿಯಿಂದಲೋ, ಗುರು-ಹಿರಿಯರಿಂದಲೋ ಉತ್ತಮ ಪ್ರಶಂಸೆಯ ಮಾತುಗಳು ಕೇಳಿಬರಲಿದೆ. ನಿಮ್ಮಲ್ಲಿರುವ ಒಳ್ಳೆಯತನ ದುರುಪ-ಯೋಗವಾಗದಂತೆ ಎಚ್ಚರ ವಹಿಸಿ. ಆರೋಗ್ಯದ ಬಗ್ಗೆ ಗಮನ ಕೊಡಿ.

ಕರ್ಕಾಟಕ: ಸಮೀಪವರ್ತಿಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳಲ್ಲಿನ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಸ್ವಯಂ ಸಾಮರ್ಥ್ಯದಿಂದ ಅವಕಾಶ ಪಡೆದುಕೊಳ್ಳುವಿರಿ. ಸಾಲದ ಹಣ ಹಿಂತಿರುಗಿಸುವಲ್ಲಿ ಗಮನವಿರಲಿ.

ಸಿಂಹ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಮುಂದುವರಿಕೊಳ್ಳುವುದು ಬುದ್ಧಿವಂತಿಕೆಯನ್ನು ಪ್ರ-ದರ್ಶಿಸುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಉದಾಸೀನತೆ ತೋರಿಬರುವುದು.

ಕನ್ಯಾ: ಕೊಡುವ ಹಾಗೂ ತೆಗೆದುಕೊಳ್ಳುವ ಹಣದ ಬಗ್ಗೆ ಲೆಕ್ಕಾಚಾರ ಸರಿಯಾಗಿ ಇಟ್ಟುಕೊಳ್ಳಿರಿ. ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಕಾಳಜಿ ತೋರುವ ಅನಿವಾರ್ಯತೆ ಹೆಚ್ಚಲಿದೆ. ಬೂದು ಬಣ್ಣ ಶುಭ ತರಲಿದೆ.

ತುಲಾ: ಅತಿಯಾದ ಖರ್ಚು ವೆಚ್ಚಗಳು ಈ ದಿನ ತಗ್ಗುವುದು. ಹಾಲಿನ ಡೈರಿ ಪದಾರ್ಥಗಳ ವ್ಯಾಪಾರಸ್ಥರಿಗೆ ಹೆಚ್ಚಿನ ಉತ್ಪಾದನೆ ಹಾಗೂ ಲಾಭ ತರುವುದು. ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ.

ವೃಶ್ಚಿಕ: ದುರಾಚಾರ ದುರ್ಬುದ್ಧಿ ಹೊಂದಿರುವ ಜನರ ಸಹವಾಸದಿಂದ ದೂರವಿರುವ ಬಗ್ಗೆ ಪ್ರಯತ್ನವಿರಲಿ. ಉನ್ನತ ಶಿಕ್ಷಣಕ್ಕಾಗಿ ದೂರದ ಅಥವಾ ವಿದೇಶ ಪ್ರಯಾಣದ ಕನಸು ಈಡೇರುವ ಬಗ್ಗೆ ಹಣ ವ್ಯಯಿಸಬೇಕಾಗುವುದು.

ಧನು: ನೆರೆಹೊರೆಯವರೊಂದಿಗೆ ಮತ್ತು ಸಹೋದರಿಯವರೊಂದಿಗೆ ಸೌಹಾರ್ದದಿಂದ ವರ್ತಿಸಿ. ಔಷಧಿಗಳು ಅಡ್ಡ ಪರಿಣಾಮ ಬೀರುವಂತಾಗ ಬಹುದು. ವೈದ್ಯರ ಸಲಹೆ ಇಲ್ಲದೆ ಔಷಧಿಗಳನ್ನು ಸೇವಿಸಬೇಡಿ.

ಮಕರ: ಆಶ್ಚರ್ಯ ಮೂಡುವಂಥ ಸಂಭ್ರಮಿಸುವಂಥ ಘಟನೆ ಬದುಕಲ್ಲಿ ಈ ದಿನ ನಡೆಯುವುದು. ಅವಿವಾಹಿತ ಹೆಣ್ಣುಮಕ್ಕಳಿಗೆ ಬಹಳ ದಿನಗಳಿಂದ ನಿರೀಕ್ಷಿಸಿದ ಸಂಬಂಧವೊಂದು ಕೂಡಿ ಬರಲಿದೆ.

ಕುಂಭ: ಕಾನೂನು ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯವಿದ್ದು ಅನುಭವಕ್ಕೆಂದು ಹಿರಿಯ ವಕೀಲರ ಸಹಾಯಕನಾಗಿ ಸೇರಿಕೊಳ್ಳುವುದು ಉತ್ತಮ. ಗೆಳೆಯರೊಂದಿಗೆ ಪ್ರವಾಸ ಹೋಗುವ ವಿಚಾರ ನಿಶ್ಚಿತವಾಗುವುದು.

ಮೀನ: ವ್ಯವಹಾರಿಕವಾದ ಸುಖ ಸಂಪತ್ತು ಅಧಿಕವಾಗಿದ್ದರೂ ಭವಿಷ್ಯದ ಚಿಂತೆ ನಿದ್ದೆಗೆಡಿಸುತ್ತದೆ. ರಿಯಾಯಿತಿ ಮಾರಾಟಗಳಿಂದ ಮೋಸ ಹೋಗುವ ಸಾಧ್ಯತೆಗಳಿವೆ. ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಬಂಡವಾಳ ತೊಡಗಿಸಬಹುದು.

ಪದಬಂಧ 5427


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾಸ್ಯ ಈ ವಿಧವಾಗಿ ಬಂದಿದೆ (3)
3.ಮಾನಿನಿಯ ಮೇಲೇ ಸಂದೇಹ! (3)
5.ನಗರದಲ್ಲಿರುವ ಮನುಷ್ಯ (2)
6. ಪೇರಿಸಿಕೊಂಡಿರುವ ಸಾಮಾನುಗಳ ದುರಸ್ತಿ! (3)
7.ಈತ ನರಕಾಧಿಪತಿ (2)
9.ಶಿರದೊಳಗೆ ಅಡರಿದ ಚಳಿಗಾಲ! (3)
10.ಹರನ ಮುಂದಿರುವ ದೊಡ್ಡ ಕೊಡ (3)
11.ತಟಕ್ಕನೆ ಕಾಣಿಸಿದ್ದು ತಟಾಕದ ದಡ (2)
13.ಹೂವಿನ ಧೂಳು (3)
15.ಅಸುರನ ಹತ್ತಿರವಿರುವ ದೇವತೆ (2)
16.ಭಾಗಲಬ್ಧ ಗೊತ್ತಿರದ ಜಿಪುಣ! (3)
17.ಹತ್ತನೆಯ ಭಾಗ (3)

ಮೇಲಿಂದ ಕೆಳಕ್ಕೆ

1.ವರ ನೀಡಿದ್ದು ವಿಸ್ತಾರವಾದ ನಿರೂಪಣೆ! (3)
2.ಪ್ರಜ್ವಲಿಸುವ ಬೆಂಕಿಯಿದು (3)
3.ಹಳೇ ವಸ್ತುಗಳನ್ನು ಮಾರುವ ಅಂಗಡಿ (3)
4.ನಿರ್ಧಾರವೂ ಆಗುವ ಗೊತ್ತುವಳಿ (3)
5.ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
8.ಚಿತ್ತವಿಕಲ್ಪವನ್ನು ಹೀಗೆನ್ನಿ (5)
12.ಪಾಲು ಕೇಳುವವನ ಕೈಯಲ್ಲಿರುವ ಅಂಚೆ (3)
13. ಹಾಡು ಹೇಳಿ ಗಿಟ್ಟಿಸಿಕೊಂಡಿರುವ ಮೆಡಲ (3)
14.ಬಿಗಿದ ಕಂಠ (3)
15.ಮಗ ಕೊನೆಗೆ ತಿರುಗಿದರೆ ಇದು ಸಲೀಸು (3)



5426ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅರ್ಧಾಂಗಿ 3.ಮದನಕ್ಕೆ
5.ಲೀಲಾಜಾಲ
6.ವಟು 7.ಗಗನ
9.ನವೀನ 12.ಜಯ
13.ಮಡಿವಾಳ 15.ಸೆರೆಮನೆ
16.ಕರುಳು

ಮೇಲಿಂದ ಕೆಳಕ್ಕೆ:
1.ಅತ್ತೆ 2.ಗಿಲೀಟು
3.ಮಲರೋಗ 4.ಕೈವಾರ
6.ವರ್ತಮಾನ 8.ನವೋದಯ
10.ನಡುಮನೆ 11.ಹಾವಸೆ
12ಜಳಕ 14.ಅಳು

ಸುಡೊಕು 5813

		6		4		3		5
	3		5		7			
	9	2		3		7		1
2	1		9		3	6		
				1				3
3	8			5			7	
9		8						7
	6			9			3	
4		3			1	2		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5812 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಷೇರುಪೇಟೆ ವಹಿವಾಟು (12)

ಹಿಂದಿನ ಅಂತ್ಯ 65,075 — ಇಂದಿನ ಅಂತ್ಯ 65,087 (ಅಕ್ಷ: 65400, 65200, 65000, 64800; 10:00, 12:00, 14:00, 16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,342
ಇಂದಿನ ಅಂತ್ಯ	19,347
▲	5
ದಿನದ ಗರಿಷ್ಠ	19,452

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1760(1770)
ಸೋಯಾ (ರಿಫೈನ್ಡ್)	₹925(925)
ಸೂರ್ಯಕಾಂತಿ (ರಿಫೈನ್ಡ್)	₹925(930)
ಪಾಮೋಲಿನ್	₹845(843)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹122

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹7900-7900
ಪುತ್ತೂರು	₹4500-7300
ತಿಪಟೂರು	₹7500-8800
ತುರುವೇಕೆರೆ	₹8500-8600

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹310-572
ದ್ವಿತಳಿ (ಬಿ.ವಿ)	₹450-695

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2000-2500
ಮಧ್ಯಮ	₹1500-2000
ಸಣ್ಣ	₹1000-1500

ಕರ್ಣಾಟಕ ಬ್ಯಾಂಕ್: ಲಾಭಾಂಶಕ್ಕೆ ಅನುಮೋದನೆ

ಪ್ರಜಾವಾಣಿ ವಾರ್ತೆ


ಶ್ರೀಕೃಷ್ಣನ್ ಎಚ್.

ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ಷೇರುದಾರರಿಗೆ 2022–23ನೇ ಸಾಲಿಗೆ ಪ್ರತಿ ಷೇರಿಗೆ ₹5ರಂತೆ (ಶೇ 50) ಡಿವಿಡೆಂಡ್ ನೀಡಲು ಮಂಗಳವಾರ ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿ ವರ್ಚುವಲ್ ಮಾಧ್ಯಮದಲ್ಲಿ ನಡೆದ 99ನೇ ವಾರ್ಷಿಕ ಮಹಾಸಭೆ ಅನುಮೋದನೆ ನೀಡಿದೆ.

ಅಧ್ಯಕ್ಷತೆ ವಹಿಸಿದ್ದ ಬ್ಯಾಂಕ್‌ನ ಚೇರ್ಮನ್ ಪಿ. ಪ್ರದೀಪ್ ಕುಮಾರ್ ಅವರು ಷೇರುದಾರರನ್ನು ಉದ್ದೇಶಿಸಿ ಮಾತನಾಡಿದರು. ಎಂ.ಡಿ. ಹಾಗೂ ಸಿಇಒ ಶ್ರೀಕೃಷ್ಣನ್ ಎಚ್. ಅವರು ಷೇರುದಾರರ ಪ್ರಶ್ನೆಗಳಿಗೆ ಉತ್ತರಿಸಿದರು.

ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶೇಖರ್ ರಾವ್, ನಿರ್ದೇಶಕರಾದ ಜೀವನ್‌ದಾಸ್ ನಾರಾಯಣ್, ಉನ್ನತ ಅಧಿಕಾರಿಗಳು, ಕಾನೂನು ಸಲಹೆಗಾರರು ಹಾಗೂ ಇ-ಮತದಾನದ ಪರಿವೀಕ್ಷಕರು ಇದ್ದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಇಳಿಕೆಯು ಕಂಪನಿಗಳಿಗೆ ನೆರವಾಗುವ ನಿರೀಕ್ಷೆ

ಎಲ್‌ಪಿಜಿ: ಕಂಪನಿಗಳಿಗೆ ಸಬ್ಸಿಡಿ ಅನುಮಾನ

ಮುಖ್ಯಾಂಶಗಳು
- ಜೂನ್ ತ್ರೈಮಾಸಿಕದಲ್ಲಿ ಭಾರಿ ವರಮಾನ ಗಳಿಸಿರುವ ಕಂಪನಿಗಳು
- ಕಂಪನಿಗಳೇ ಹೊರಬೇಕಿದೆ ಬೆಲೆ ಇಳಿಕೆ ಹೊರೆ
- 2022ರಲ್ಲಿ ಕಂಪನಿಗಳಿಗೆ ಪರಿಹಾರ ನೀಡಿದ್ದ ಕೇಂದ್ರ

ನವದೆಹಲಿ (ಪಿಟಿಐ): ಮನೆಗಳಲ್ಲಿ ಬಳಸುವ ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ₹200ರಷ್ಟು ತಗ್ಗಿಸಿರುವುದಕ್ಕೆ ಪ್ರತಿಯಾಗಿ, ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳಿಗೆ ಕೇಂದ್ರದ ಕಡೆಯಿಂದ ಪರಿಹಾರ ಧನ ಸಿಗುವ ಸಾಧ್ಯತೆ ಇಲ್ಲ ಎಂದು ಮೂಲಗಳು ಹೇಳಿವೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ಐದು ತಿಂಗಳಲ್ಲಿ ಸಿಕ್ಕ ಭಾರಿ ವರಮಾನ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್‌ಪಿಜಿ ದರವು ಗರಿಷ್ಠ ಮಟ್ಟದಿಂದ ಕೆಳಕ್ಕೆ ಬಂದಿರುವುದು ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳಿಗೆ ಈಗಿನ ದರ ಇಳಿಕೆಯ ಹೊರೆಯನ್ನು ಹೊತ್ತುಕೊಳ್ಳಲು ನೆರವಾಗಲಿವೆ ಎಂದು ಮೂಲಗಳು ವಿವರಿಸಿವೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ (ಎಚ್‌ಪಿಸಿಎಲ್) ಜೂನ್ ತ್ರೈಮಾಸಿಕದಲ್ಲಿ ಭಾರಿ ವರಮಾನ ದಾಖಲಿಸಿವೆ. ಜೂನ್ ನಂತರದಲ್ಲಿಯೂ ವರಮಾನ ಸಂಗ್ರಹವು ಹೆಚ್ಚಿನ ಮಟ್ಟದಲ್ಲಿ ಇದೆ ಎಂದು ಉದ್ಯಮದ ಮೂಲಗಳು ಹೇಳಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೌದಿ ಸಿಪಿ (ಎಲ್‌ಪಿಜಿ ದರ ನಿಗದಿಗೆ ಆಧಾರವಾಗಿರುವ ದರ) ಮಾರ್ಚ್‌ನಲ್ಲಿ ಟನ್‌ಗೆ 732 ಡಾಲರ್ ಇದ್ದಿದ್ದು ಜುಲೈನಲ್ಲಿ ಟನ್‌ಗೆ 385 ಡಾಲರ್‌ಗೆ ಇಳಿದಿದೆ. ದರವು ಆಗಸ್ಟ್‌ನಲ್ಲಿ 464 ಡಾಲರ್‌ಗೆ ಏರಿಕೆಯಾಗಿದ್ದರೂ, ಎಲ್‌ಪಿಜಿ ದರ ತಗ್ಗಿಸಲು ಅವಕಾಶ ಇದೆ ಎಂದು ಮೂಲವೊಂದು ಹೇಳಿದೆ.

ತೈಲ ಸಚಿವ ಹರದೀಪ್ ಸಿಂಗ್ ಪುರಿ ಅವರು ಬುಧವಾರ ಸಂದರ್ಶನವೊಂದರಲ್ಲಿ, ತೈಲೋತ್ಪನ್ನ ಮಾರಾಟ ಕಂಪನಿಗಳು 'ಒಳ್ಳೆಯ ಕಾರ್ಪೊರೇಟ್ ಪ್ರಜೆಗಳಾಗಿ' ದರ ಇಳಿಕೆ ಮಾಡಿವೆ ಎಂದು ಹೇಳಿದ್ದಾರೆ. ಬೆಲೆ ಇಳಿಕೆ ನಿರ್ಧಾರಕ್ಕೆ ಪೂರಕವಾಗಿ ಸರ್ಕಾರದ ಕಡೆಯಿಂದ ಸಬ್ಸಿಡಿಯ ನೆರವು ಸಿಗಲಿದೆಯೇ ಎಂಬ ಪ್ರಶ್ನೆಗೆ ಅವರು ನೇರ ಉತ್ತರ ನೀಡಿಲ್ಲ.

ಬೆಲೆ ಇಳಿಕೆಯ ಹೊರೆಯನ್ನು ಕಂಪನಿಗಳೇ ಹೊರಬೇಕು ಎಂದು ಮೂಲಗಳು ಹೇಳಿವೆ. ಸೌದಿ ಸಿಪಿ ಬೆಲೆಯು ಮಾರ್ಚ್, ಏಪ್ರಿಲ್‌ನಲ್ಲಿ ಹೆಚ್ಚಾಗಿದ್ದಾಗ ಮೂರೂ ಕಂಪನಿಗಳು ನಷ್ಟ ಅನುಭವಿಸಿದ್ದವು. ಆ ನಷ್ಟವನ್ನು ಸರಿದೂಗಿಸಿಕೊಳ್ಳಲು ಇನ್ನೂ ಆಗಿಲ್ಲ ಎನ್ನಲಾಗಿದೆ. ಕೇಂದ್ರವು 2022ರ ಅಕ್ಟೋಬರ್‌ನಲ್ಲಿ ತೈಲೋತ್ಪನ್ನ ಕಂಪನಿಗಳಿಗೆ ಎಲ್‌ಪಿಜಿಯನ್ನು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆಗೆ ಮಾರಾಟ ಮಾಡಿದ್ದಕ್ಕಾಗಿ ₹22 ಸಾವಿರ ಕೋಟಿ ನೆರವು ಒದಗಿಸಿತ್ತು. ಆದರೆ ಈ ಬಾರಿ ಅಂತಹ ನೆರವು ಇರುವುದಿಲ್ಲ ಎಂದು ಮೂಲಗಳು ಹೇಳಿವೆ.


ಕಲ್ಯಾಣಿ ಮೋಟರ್ಸ್‌ನ ನೆಕ್ಸಾ ಮಳಿಗೆಯನ್ನು ಮಾರುತಿ ಸುಜುಕಿ ಫ್ರಾಂಕ್ಸ್ ಕಾರನ್ನು ಗ್ರಾಹಕರಿಗೆ ಹಸ್ತಾಂತರಿಸಲಾಯಿತು. ವರಮಹಾಲಕ್ಷ್ಮಿ ಹಬ್ಬದ ದಿನ ಮಾರುತಿ ನೆಕ್ಸಾ ರಾಜ್ಯದಲ್ಲಿ 750ಕ್ಕೂ ಹೆಚ್ಚಿನ ಪ್ರೀಮಿಯಂ ವಾಹನಗಳನ್ನು ಗ್ರಾಹಕರಿಗೆ ಹಸ್ತಾಂತರಿಸಿದೆ. ರಾಜ್ಯದ ನೆಕ್ಸಾ ಮಳಿಗೆಗಳಲ್ಲಿ ಒಂದು ದಿನದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ವಾಹನ ಹಸ್ತಾಂತರ ಆಗಿರುವುದು ಇದೇ ಮೊದಲು. ವರಮಹಾಲಕ್ಷ್ಮಿ ಹಬ್ಬದ ದಿನ 200ಕ್ಕೂ ಹೆಚ್ಚು ಗ್ರಾಹಕರಿಗೆ ಗ್ರ್ಯಾಂಡ್ ವಿಟಾರಾ ವಾಹನ ಹಸ್ತಾಂತರಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	625
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-48500
ಕಾರ್ಕಳ	
ಹೊಸತು	30000-45000
ಹಳತು	40000-48500
ಶಿವಮೊಗ್ಗ	
ರಾಶಿ	35669-48009
ಬೆಟ್ಟೆ	49199-51769
ಸರಕು	60869-75896
ಗೊರಬಲು	17000-37258

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13250	13300	13385	153.10ಸೆಂಟ್ಸ್
ಎಸಿ	7000	6700	6700	
ಆರ್‌ಪಿ	10000	10000	10100	ಲಂಡನ್
ಆರ್‌ಸಿ	5830	234	5925	2448ಡಾಲರ್ಸ್

ವಿಮಾನ ಅಪಘಾತಕ್ಕೆ 'ಉದ್ದೇಶಪೂರ್ವಕ ತಪ್ಪು'ಗಳೂ ಕಾರಣವಿರಬಹುದು: ರಷ್ಯಾ

ಮಾಸ್ಕೊ (ಎಪಿ): ವ್ಯಾಗ್ನರ್ ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರಿದ್ದ ವಿಮಾನವು ಅಪಘಾತಕ್ಕೀಡಾದ ಸಂಭಾವ್ಯ ಕಾರಣಗಳಲ್ಲಿ 'ಉದ್ದೇಶಪೂರ್ವಕವಾಗಿ ಮಾಡಿದ ತಪ್ಪುಗಳು' ಕೂಡಾ ಇರಬಹುದು ಎಂದು ಕ್ರೆಮ್ಲಿನ್ (ರಷ್ಯಾ ಆಡಳಿತ) ಬುಧವಾರ ತಿಳಿಸಿದೆ.

ಅಪಘಾತ ಹೇಗೆ ಸಂಭವಿಸಿತು ಎಂಬುದಕ್ಕೆ ಹಲವಾರು ಆಯಾಮಗಳಿಗೆ ಮತ್ತು ಆ ಎಲ್ಲಾ ಆಯಾಮಗಳನ್ನೂ ಪರಿಗಣಿಸಲಾಗುತ್ತಿದೆ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು ಸುದ್ದಿಗಾರರೊಂದಿಗೆ ಹೇಳಿದ್ದಾರೆ.

ಅಪಘಾತಕ್ಕೆ ಸಂಬಂಧಿಸಿ ರಷ್ಯಾ ತನಿಖಾ ಸಂಸ್ಥೆ ನಡೆಸುತ್ತಿರುವ ತನಿಖೆ ಮುಕ್ತಾಯವಾಗುವವರೆಗೂ ಕಾಯುವಂತೆ ಅವರು ಸುದ್ದಿಗಾರರಿಗೆ ಹೇಳಿದರು. ಜೊತೆಗೆ, ಈ ಕುರಿತು ಅಂತರರಾಷ್ಟ್ರೀಯ ಮಟ್ಟದ ತನಿಖೆ ನಡೆಸಲು ಸಾಧ್ಯವಿಲ್ಲ ಎಂದರು.

ಮಾಸ್ಕೊದಿಂದ ಸೇಂಟ್ ಪೀಟರ್ಸ್‌ಬರ್ಗ್‌ಗೆ ಪ್ರಯಾಣಿಸುತ್ತಿದ್ದ ಖಾಸಗಿ ಎಂಬ್ರೇಯರ್ ಲೆಗಸಿ ವಿಮಾನವು ಟಿವೆರ್ ಪ್ರದೇಶದ ಕುಜೆಂಕಿನೋ ಗ್ರಾಮದ ಬಳಿ ಆಗಸ್ಟ್ 23ರಂದು ಅಪಘಾತಕ್ಕೀಡಾಗಿತ್ತು. ರಷ್ಯಾ ಸೇನೆಯ ವಿರುದ್ಧದ ದಂಗೆಯ ನೇತೃತ್ವ ವಹಿಸಿದ್ದ ಖಾಸಗಿ ಸೇನಾ ಗುಂಪು ವ್ಯಾಗ್ನರ್ ಮುಖ್ಯಸ್ಥ ಪ್ರಿಗೋಷಿನ್ ಅಪಘಾತದಲ್ಲಿ ಮೃತರಾಗಿದ್ದರು.

ಅಧೀರ್ ರಂಜನ್ ಅಮಾನತು ಹಿಂಪಡೆಯಲು ನಿರ್ಣಯ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರ ಲೋಕಸಭಾ ಸದಸ್ಯತ್ವದ ಅಮಾನತನು ಹಿಂಪಡೆಯಲು ಲೋಕಸಭೆಯ ಹಕ್ಕು ಭಾಧ್ಯತಾ ಸಮಿತಿಯು ಅವಿರೋಧವಾಗಿ ಬುಧವಾರ ನಿರ್ಣಯವನ್ನು ಅಂಗೀಕರಿಸಿತು.

ಚೌಧರಿ ಅವರು ಸಮಿತಿ ಎದುರು ಹಾಜರಾಗಿ ಈ ಮೊದಲು ನೀಡಿದ್ದ ಹೇಳಿಕೆ ಕುರಿತು ವಿಷಾದ ವ್ಯಕ್ತಪಡಿಸಿದ ಬಳಿಕ ಸಮಿತಿಯು ಅವರ ಅಮಾನತನ್ನು ಹಿಂಪಡೆಯುವ ನಿರ್ಣಯ ಕೈಗೊಂಡಿದೆ.

ಈ ನಿರ್ಣಯವನ್ನು ಆದಷ್ಟು ಬೇಗ ಸ್ಪೀಕರ್‌ಗೆ ಕಳಿಸಲಾಗುವುದು ಎಂದು ಸಮಿತಿಯ ಸದಸ್ಯರೊಬ್ಬರು ತಿಳಿಸಿದ್ದಾರೆ.

ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಕಡೆಯ ದಿನವಾದ ಆಗಸ್ಟ್ 11 ರಂದು ನಡೆದ ಅವಿಶ್ವಾಸ ನಿರ್ಣಯ ಚರ್ಚೆ ವೇಳೆ ಪದೇಪದೆ ಅಶಿಸ್ತಿನ ವರ್ತನೆ ತೋರಿದ್ದರು ಎಂಬ ಕಾರಣಕ್ಕಾಗಿ ಅಧೀರ್ ರಂಜನ್ ಚೌಧರಿ ಅವರ ಲೋಕಸಭೆಯ ಸದಸ್ಯತ್ವವನ್ನು ಅಮಾನತುಗೊಳಿಸಲಾಗಿತ್ತು.

ಸಹಜ ನ್ಯಾಯಿಕ ಪ್ರಕ್ರಿಯೆ ಕಾರಣಕ್ಕಾಗಿ ಸಮಿತಿ ಎದುರು ಬುಧವಾರ ಹಾಜರಾಗುವಂತೆ ಚೌಧರಿ ಅವರಿಗೆ ಹೇಳಲಾಗಿತ್ತು.

ಮುಂಬೈ ಧಾರಣೆ

ಶೇಂಗಾ 30–8–2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12400-12500
ದಪ್ಪ ಮಧ್ಯಪ್ರದೇಶ(ಹೊಸ)	13100-13200
ದಪ್ಪ ಗುಜರಾತ್(ಹೊಸ)	14200-14300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1770(1780)
ಒಂದು ವಾರದ ಡೆಲಿವರಿ	1765(1775)
ಸೋಯಾ ಕಚ್ಚಾ	875(870)
ಪಾಮ್ ವಾರದ ಡೆಲಿವರಿ	843(841)
ಸೂರ್ಯಕಾಂತಿ ಎಣ್ಣೆ ಕಚ್ಚಾ	860(860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 59000 (58700)

ಬೆಳ್ಳಿ ಕೆ.ಜಿ 74650 (73800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

ಷೇರು ಬ್ರೋಕಿಂಗ್ ಸೇವೆಗೆ ಫೋನ್‌ಪೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಪಿಐ ಸೇರಿದಂತೆ ಹಲವು ಬಗೆಯ ಪಾವತಿ ಸೇವೆಗಳನ್ನು ನೀಡುವ ಫೋನ್‌ಪೆ ಕಂಪನಿಯು 'ಷೇರ್ ಡಾಟ್ ಮಾರ್ಕೆಟ್' ಬಿಡುಗಡೆ ಮಾಡುವ ಮೂಲಕ ಷೇರು ಬ್ರೋಕಿಂಗ್ ವಹಿವಾಟನ್ನು ಬುಧವಾರ ಪ್ರವೇಶಿಸಿದೆ. ತನ್ನ ಅಂಗಸಂಸ್ಥೆ ಫೋನ್‌ಪೆ ವೆಲ್ತ್ ಬ್ರೋಕಿಂಗ್ ಪ್ರೈವೇಟ್ ಲಿಮಿಟೆಡ್ ಮೂಲಕ ಈ ಸೇವೆಯನ್ನು ಆರಂಭಿಸಿದೆ.

'ಷೇರ್ ಡಾಟ್ ಮಾರ್ಕೆಟ್' ಮೊಬೈಲ್ ಆ್ಯಪ್ ಮತ್ತು ಜಾಲತಾಣದ ಮೂಲಕ ಡಿಸ್ಕೌಂಟ್ ಬ್ರೋಕಿಂಗ್ ಸೇವೆಗಳನ್ನು ನೀಡುವುದಾಗಿ ಕಂಪನಿ ಹೇಳಿದೆ. ನಗರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಬಿಎಸ್‌ಇ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸುಂದರರಾಮನ್ ರಾಮಮೂರ್ತಿ ಅವರು 'ಷೇರ್ ಡಾಟ್ ಮಾರ್ಕೆಟ್' ಬ್ರ್ಯಾಂಡ್ ಅನಾವರಣ ಮಾಡಿದರು. ಸಣ್ಣ ಹೂಡಿಕೆದಾರರಿಗೆ ಷೇರುಗಳನ್ನು ಖರೀದಿಸಲು, ಇಂಟ್ರಾ-ಡೇ-ಟ್ರೇಡ್ ನಡೆಸಲು, ವೆಲ್ತ್‌ಬಾಸ್ಕೆಟ್‌ನಲ್ಲಿ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಈ ವೇದಿಕೆಯು ಅನುಕೂಲ ಮಾಡಿಕೊಡಲಿದೆ ಎಂದು ಕಂಪನಿ ತಿಳಿಸಿದೆ.

> ಶೀಘ್ರದಲ್ಲೇ ಗ್ರಾಹಕರಿಗೂ ಸಾಲ ನೀಡುವ ಸೌಲಭ್ಯ ಆರಂಭವಾಗಲಿದೆ. ಸದ್ಯ ವ್ಯಾಪಾರಿಗಳಿಗೆ ಮಾತ್ರ ಈ ಸೌಲಭ್ಯ ಇದೆ
> **ಸಮೀರ್ ನಿಗಮ್,** ಫೋನ್‌ಪೇ ಸಿಇಒ

ತಂತ್ರಜ್ಞಾನ ಕೌಶಲ, ಪರಿಮಾಣಾತ್ಮಕ ಸಂಶೋಧನೆ, ಸ್ಪರ್ಧಾತ್ಮಕ ಡಿಸ್ಕೌಂಟ್ ಬ್ರೋಕಿಂಗ್ ಶುಲ್ಕದ ಮೂಲಕ ಷೇರು ಬ್ರೋಕಿಂಗ್‌ಗೆ ಹೊಸ ಆಯಾಮವನ್ನು ಷೇರ್ ಡಾಟ್ ಮಾರ್ಕೆಟ್ ನೀಡಲಿದೆ ಎಂದು ಅದರ ಸಿಇಒ ಉಜ್ವಲ್ ಜೈನ್ ತಿಳಿಸಿದರು.

ಬಳಕೆದಾರ ಸ್ನೇಹಿ ಇಂಟರ್‌ಫೇಸ್ ಮೂಲಕ ಜಾಗತಿಕ ಗುಣಮಟ್ಟದ ಪರಿಮಾಣಾತ್ಮಕ ಸಂಶೋಧನೆ ಆಧಾರಿತ ಹೂಡಿಕೆ ಸೇವೆಗಳ ಮೂಲಕ ಹೂಡಿಕೆದಾರರು ಮತ್ತು ವಹಿವಾಟುದಾರರು ಷೇರು ಮಾರುಕಟ್ಟೆಯಲ್ಲಿ ತೊಡಗಿಸಿಕೊಳ್ಳುವುದಕ್ಕೆ ಹೊಸ ರೂಪ ಕೊಡಲು ಉದ್ದೇಶಿಸಲಾಗಿದೆ ಎಂದು ಷೇರ್ ಡಾಟ್ ಮಾರ್ಕೆಟ್‌ನ ಮುಖ್ಯ ಹೂಡಿಕೆ ಅಧಿಕಾರಿ (ಸಿಐಒ) ಸುಜಿತ್ ಮೋದಿ ಹೇಳಿದರು.


'ಷೇರ್ ಡಾಟ್ ಮಾರ್ಕೆಟ್'ನ ಸಿಇಒ ಉಜ್ವಲ್ ಜೈನ್ ಅವರು ಬ್ರೋಕಿಂಗ್ ಆ್ಯಪ್ ಪ್ರದರ್ಶಿಸಿದರು

ಪಿವ್ ಸಂಶೋಧನಾ ಕೇಂದ್ರದ ಸಮೀಕ್ಷೆ

'ಶೇ80ರಷ್ಟು ಭಾರತೀಯರ ಒಲವು ಮೋದಿ ಪರ'

ವಾಷಿಂಗ್ಟನ್ (ಪಿಟಿಐ): ಭಾರತದ ಶೇ 80 ರಷ್ಟು ಜನರು ಪ್ರಧಾನಿ ನರೇಂದ್ರ ಮೋದಿ ಪರ ಒಲವು ಹೊಂದಿದ್ದಾರೆ. ಅಂದಾಜು 10 ಮಂದಿ ಭಾರತೀಯರಲ್ಲಿ ಏಳು ಮಂದಿ, ತಮ್ಮ ದೇಶವು ಇತ್ತೀಚೆಗಷ್ಟೇ ಹೆಚ್ಚು ಪ್ರಭಾವಶಾಲಿಯಾಗಿ ಹೊರಹೊಮ್ಮಿದೆ ಎಂದು ನಂಬಿರುವುದಾಗಿ ಪಿವ್ ಸಂಶೋಧನಾ ಕೇಂದ್ರದ ಸಮೀಕ್ಷೆ ಹೇಳಿದೆ.


ಜಿ. 20 ಶೃಂಗಸಭೆಯ ಪೂರ್ವಭಾವಿಯಾಗಿ ಈ ಸಮೀಕ್ಷೆ ವರದಿ ಬಿಡುಗಡೆ ಆಗಿದೆ. ಇಸ್ರೇಲ್‌ನಲ್ಲಿ ಭಾರತದ ಕುರಿತ ದೃಷ್ಟಿಕೋನಗಳು ಹೆಚ್ಚು ಸಕಾರಾತ್ಮಕವಾಗಿವೆ. ಅಲ್ಲಿ ಶೇ 71ರಷ್ಟು ಜನರು ಭಾರತದ ಪರ ಒಲವು ಹೊಂದಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಫೆಬ್ರುವರಿ 20ರಿಂದ ಮೇ 22ರ ನಡುವೆ ಸಮೀಕ್ಷೆ ನಡೆಸಲಾಗಿದೆ ಎಂದು ಪಿವ್ ಹೇಳಿದೆ.

ಮೋದಿ ಅವರು ಎರಡನೆಯ ಅವಧಿಗೆ ಪ್ರಧಾನಿಯಾಗಿರುವ ಕುರಿತು ಹತ್ತರಲ್ಲಿ ಎಂಟು ಮಂದಿ ಭಾರತೀಯರು ಮೋದಿ ಪರ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ. ಶೇ 55ರಷ್ಟು ಜನರು ಈ ಗುಂಪಿನಲ್ಲಿದ್ದಾರೆ. 2024ರ ಲೋಕಸಭೆ ಚುನಾವಣೆಯಲ್ಲಿ ಅವರು ಮತ್ತೆ ಪ್ರಧಾನಿಯಾಗುವ ಕುರಿತು ಐದರಲ್ಲಿ ಒಂದನೇ ಭಾಗದಷ್ಟು ಜನ ಮಾತ್ರ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

ಈಚೆಗಿನ ವರ್ಷಗಳಲ್ಲಿ ಅಮೆರಿಕದ ಪ್ರಭಾವವು ಬಲಗೊಳ್ಳುತ್ತಿದೆ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡಿರುವವರಲ್ಲಿ ಶೇ 49ರಷ್ಟು ಭಾರತೀಯರು ಹೇಳಿದ್ದಾರೆ. ಶೇ 41ರಷ್ಟು ಮಂದಿ ರಷ್ಯಾದ ಪ್ರಭಾವ ಬಲಗೊಳ್ಳುತ್ತಿದೆ ಎಂದಿರುವುದಾಗಿ ಸಮೀಕ್ಷೆ ಹೇಳಿದೆ. ಚೀನಾದ ಪ್ರಭಾವದ ಬಗ್ಗೆ ಭಾರತೀಯರಿಂದ ಮಿಶ್ರ ಅಭಿಪ್ರಾಯ ವ್ಯಕ್ತವಾಗಿದೆ.

ಪಿವ್ ಸಮೀಕ್ಷೆಯಲ್ಲಿ ವಿಶ್ವದ ನಿಲುವು



ಇಮ್ರಾನ್ ನ್ಯಾಯಾಂಗ ಬಂಧನ ಸೆ.13ರವರೆಗೆ ವಿಸ್ತರಣೆ

ಇಸ್ಲಾಮಾಬಾದ್(ಪಿಟಿಐ): ಅಧಿಕೃತ ರಹಸ್ಯ ಕಾಯ್ದೆಯಡಿ ದಾಖಲಾಗಿರುವ ಪ್ರಕರಣದಲ್ಲಿ, ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ನ್ಯಾಯಾಂಗ ಬಂಧನವನ್ನು ಸೆಪ್ಟೆಂಬರ್ 13ರ ವರೆಗೆ ವಿಸ್ತರಿಸಿ ಇಲ್ಲಿನ ವಿಶೇಷ ನ್ಯಾಯಾಲಯ ಬುಧವಾರ ಆದೇಶಿಸಿದೆ.

ಇಮ್ರಾನ್ ಅವರನ್ನು ಇರಿಸಲಾಗಿರುವ ಅಟಾಕ್‌ನ ಜೈಲಿಗೆ ಬಂದು ವಿಚಾರಣೆ ನಡೆಸಿದ ನ್ಯಾಯಾಧೀಶ ಅಬುವಲ್ ಹಸನತ್ ಜುಲ್ಕರ್‌ನೈನ್ ಅವರು ಈ ಕುರಿತ ಆದೇಶ ಹೊರಡಿಸಿದರು.

ಅಮೆರಿಕದ ರಾಯಭಾರ ಕಚೇರಿಯ ಗೋಪ್ಯ ರಾಜತಾಂತ್ರಿಕ ಕೇಬಲ್ ವಿಷಯ ಬಹಿರಂಗಪಡಿಸಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ತೋಷಖಾನಾ ಭ್ರಷ್ಟಾಚಾರ ಪ್ರಕರಣದಲ್ಲಿ ಇಮ್ರಾನ್ ಖಾನ್ ಅವರನ್ನು ಸದ್ಯ ಅಟಾಕ್ ಜೈಲಿನಲ್ಲಿರಿಸಲಾಗಿದೆ. ಭದ್ರತೆ ಕಾರಣದಿಂದಾಗಿ ಜೈಲಿನಲ್ಲಿಯೇ ವಿಚಾರಣೆ ನಡೆಸಲು ಗೃಹ ಇಲಾಖೆ ಅಧಿಕಾರಿಗಳು ಮಂಗಳವಾರ ನಿರ್ಧರಿಸಿದ್ದರು. ಇದಕ್ಕೆ ಕಾನೂನು ಸಚಿವಾಲಯ ಅನುಮೋದನೆ ನೀಡಿತ್ತು.

ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲು ಶಿಕ್ಷೆ ವಿಧಿಸಿ ನೀಡಿರುವ ತೀರ್ಪನ್ನು ಇಸ್ಲಾಮಾಬಾದ್ ಹೈಕೋರ್ಟ್‌ನ ಇಬ್ಬರು ಸದಸ್ಯರ ನ್ಯಾಯಪೀಠ ಅಮಾನತುಗೊಳಿಸಿ ಆದೇಶಿಸಿದ್ದರೂ, ಅಧಿಕೃತ ರಹಸ್ಯ ಕಾಯ್ದೆಯಡಿ ದಾಖಲಿಸಿರುವ ಪ್ರಕರಣದಲ್ಲಿ ನ್ಯಾಯಾಂಗ ಬಂಧನ ವಿಸ್ತರಿಸಲಾಗಿದೆ. ಹೀಗಾಗಿ, ಇಮ್ರಾನ್ ಅವರು ಸೆರೆವಾಸ ಅನುಭವಿಸಬೇಕಾಗಿದೆ.

ಗೂಢಚಾರಿಣಿ ವರ್ಣಚಿತ್ರ ಅನಾವರಣ

ಲಂಡನ್ (ಪಿಟಿಐ): ಟಿಪ್ಪು ಸುಲ್ತಾನ್ ವಂಶಸ್ಥೆ, ಭಾರತ ಮೂಲದ ಗೂಢಚಾರಿಣಿ ನೂರ್ ಇನಾಯತ್ ಖಾನ್ ಅವರ ನೂತನ ವರ್ಣಚಿತ್ರವನ್ನು ಬ್ರಿಟನ್ ರಾಣಿ ಕ್ಯಾಮಿಲ್ಲಾ ಅವರು ಇಲ್ಲಿನ ರಾಯಲ್ ಏರ್‌ಫೋರ್ಸ್ (ಆರ್‌ಎಎಫ್) ಕ್ಲಬ್‌ನಲ್ಲಿ ಮಂಗಳವಾರ ಅನಾವರಣಗೊಳಿಸಿದ್ದಾರೆ.

ನೂರ್ ಅವರು, ಎರಡನೇ ಮಹಾ ಯುದ್ಧದ ಸಂದರ್ಭದಲ್ಲಿ ಬ್ರಿಟನ್‌ನ ವಿಶೇಷ ಕಾರ್ಯಾಚರಣೆ ವಿಭಾಗಕ್ಕೆ ರಹಸ್ಯ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ್ದರು. ಅವರ ಗೌರವಾರ್ಥವಾಗಿ ಈ ಚಿತ್ರವನ್ನು ಅನಾವರಣಗೊಳಿಸಲಾಗಿದೆ.

ಅಲ್ಲದೇ, ಆರ್‌ಎಎಫ್ ಕ್ಲಬ್‌ನ ಕೊಠಡಿಯನ್ನು 'ನೂರ್ ಇನಾಯತ್ ಖಾನ್ ಕೊಠಡಿ' ಎಂದೂ ಕ್ಯಾಮಿಲ್ಲಾ ಅವರು ವಿಧ್ಯುಕ್ತವಾಗಿ ನಾಮಕಾರಣ ಮಾಡಿದರು.

ನೂರ್ ಅವರು 1942ರಲ್ಲಿ ವಿಶೇಷ ಕಾರ್ಯಾಚರಣೆ ವಿಭಾಗಕ್ಕೆ ನೇಮಕಗೊಂಡಾಗ ಆರ್‌ಎಎಫ್‌ನ ಮಹಿಳಾ ಸಹಾಯಕ ವಾಯುಪಡೆಯ (ಡಬ್ಲ್ಯುಎಎಫ್) ಸದಸ್ಯರಾಗಿದ್ದರು. ಜಾರ್ಜ್ ಕ್ರಾಸ್‌ನಂತಹ ಅತ್ಯುನ್ನತ ಪ್ರಶಸ್ತಿಯನ್ನು ಪಡೆದ ಡಬ್ಲ್ಯುಎಎಫ್‌ನ ಇಬ್ಬರು ಸದಸ್ಯರಲ್ಲಿ ನೂರ್ ಸಹ ಒಬ್ಬರಾಗಿದ್ದಾರೆ.

'ಆರ್‌ಎಎಫ್ ಕ್ಲಬ್‌ನಲ್ಲಿ ನೂರ್ ಇನಾಯತ್ ಖಾನ್ ವರ್ಣಚಿತ್ರವನ್ನು ಕ್ಯಾಮಿಲ್ಲಾ ಅವರು ಅನಾವರಣಗೊಳಿಸಿರುವುದು ಹೆಮ್ಮೆಯ ಸಂಗತಿ' ಎಂದು ಬ್ರಿಟಿಷ್ ಭಾರತೀಯ ಲೇಖಕಿ ಶ್ರಾವಣಿ ಬಸು ಅವರು ಹೇಳಿದ್ದಾರೆ. ಇದೇ ವೇಳೆ ಶ್ರಾವಣಿ ಅವರು ತಾವು ಬರೆದಿರುವ ನೂರ್ ಅವರ ಜೀವನಚರಿತ್ರೆ– 'ಸ್ಪೈ ಪ್ರಿನ್ಸೆಸ್: ದಿ ಲೈಫ್ ಆಫ್ ನೂರ್ ಇನಾಯತ್ ಖಾನ್' ಪುಸ್ತಕವನ್ನು ಕ್ಯಾಮಿಲ್ಲಾ ಅವರಿಗೆ ನೀಡಿದರು.


ಬ್ರಿಟನ್ ರಾಣಿ ಕ್ಯಾಮಿಲ್ಲಾ ಅವರು ನೂರ್ ಇನಾಯತ್ ಖಾನ್ ಅವರ ವರ್ಣಚಿತ್ರವನ್ನು ಅನಾವರಣಗೊಳಿಸಿದರು –ಪಿಟಿಐ ಚಿತ್ರ

ಸಮನ್ವಯ, ಇತರ ಸಮಿತಿಗಳಿಗೆ ಪದಾಧಿಕಾರಿಗಳು, ಸದಸ್ಯರ ನೇಮಕ ಸಾಧ್ಯತೆ

ಇಂದಿನಿಂದ 'ಇಂಡಿಯಾ' 3ನೇ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2024ರ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ಸೋಲಿಸಲು ರಣತಂತ್ರ ಹೆಣೆಯುತ್ತಿರುವ 28 ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ'ದ (ಭಾರತೀಯ ರಾಷ್ಟ್ರೀಯ ಅಭಿವೃದ್ಧಿಶೀಲ ಎಲ್ಲರನ್ನೊಳಗೊಳ್ಳುವ ಮೈತ್ರಿಕೂಟ) ಮೂರನೇ ಸಭೆ ಮುಂಬೈನಲ್ಲಿ ಗುರುವಾರ ಹಾಗೂ ಶುಕ್ರವಾರ ನಡೆಯಲಿದೆ.

ಎನ್‌ಸಿಪಿ (ಶರದ್ ಪವಾರ್ ಬಣ), ಶಿವಸೇನಾ ಉದ್ಧವ್ ಠಾಕ್ರೆ ಬಣ (ಯುಬಿಟಿ) ಮತ್ತು ಕಾಂಗ್ರೆಸ್ ಜತೆಗೂಡಿ ಸಂಘಟಿಸುತ್ತಿರುವ ಸಭೆಯಲ್ಲಿ 'ಇಂಡಿಯಾ'ದ ಸಮನ್ವಯ ಸಮಿತಿ ಸೇರಿದಂತೆ ಇತರ ಸಮಿತಿಗಳಿಗೆ ಪದಾಧಿಕಾರಿಗಳು ಹಾಗೂ ಸದಸ್ಯರ ನೇಮಕವಾಗುವ ಸಾಧ್ಯತೆ ಇದೆ. ಇದೇ ವೇಳೆ, ಮೈತ್ರಿಕೂಟದ ನಾಯಕರು 'ಇಂಡಿಯಾ'ದ ಲೋಗೊ ಬಿಡುಗಡೆಗೊಳಿಸಲಿದ್ದಾರೆ. ಜತೆಗೆ, 'ಬಿಜೆಪಿ ಚಲೇ ಜಾವೋ' ಆಂದೋಲನಕ್ಕೆ ಚಾಲನೆ ನೀಡುವ ಅಂದಾಜು ಇದೆ.

ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ, ಬಿಜೆಪಿ ವಿರುದ್ಧ 'ಸಾಮಾನ್ಯ ಅಭ್ಯರ್ಥಿ' ಸೂತ್ರದ ರೂಪುರೇಷೆ, ಸಂಪನ್ಮೂಲಗಳ ಕ್ರೋಡೀಕರಣ ಮತ್ತು ಪ್ರಚಾರ ತಂತ್ರಗಳ ಕುರಿತು ಸಮಾಲೋಚನೆಗಳು ನಡೆಯಲಿವೆ. ವರ್ಷಾಂತ್ಯದಲ್ಲಿ ನಡೆಯಲಿರುವ ಮಧ್ಯ ಪ್ರದೇಶ, ರಾಜಸ್ಥಾನ, ತೆಲಂಗಾಣ, ಛತ್ತೀಸಗಢ ಹಾಗೂ ಮಿಜೋರಾಂ ವಿಧಾನಸಭಾ ಚುನಾವಣೆಗಳಿಗೆ ವಿಪಕ್ಷಗಳ ಕಾರ್ಯತಂತ್ರದ ಬಗ್ಗೆಯೂ ಚರ್ಚೆ ನಡೆಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಈ ನಡುವೆ, ಪ್ರಧಾನಿ ಅಭ್ಯರ್ಥಿ ಕುರಿತು ಜೆಡಿಯು ಹಾಗೂ ಎಎಪಿ ನಾಯಕರು ನೀಡಿರುವ ಹೇಳಿಕೆಗಳು ಮೈತ್ರಿಕೂಟದಲ್ಲಿ ಗೊಂದಲ ಸೃಷ್ಟಿಸಿದವು. ಗೊಂದಲ ನಿವಾರಿಸಿ ಮೈತ್ರಿಕೂಟದಲ್ಲಿ ಯಾವುದೇ ಬಿಕ್ಕಟ್ಟಿಲ್ಲ ಎಂದು ಬಿಂಬಿಸುವ ಪ್ರಯತ್ನಗಳು ಬುಧವಾರ ನಡೆದವು.

ಶರದ್ ಪವಾರ್, ಉದ್ಧವ್ ಠಾಕ್ರೆ, ಕಾಂಗ್ರೆಸ್ ಮುಖಂಡರಾದ ಅಶೋಕ್ ಚವಾಣ್ ಹಾಗೂ ನಾನಾ ಪಟೋಲೆ ಅವರು ಬುಧವಾರ ಪತ್ರಿಕಾಗೋಷ್ಠಿ ನಡೆಸಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'ವಿಪಕ್ಷಗಳ ಮೈತ್ರಿಕೂಟವು ಪ್ರಧಾನಿ ಅಭ್ಯರ್ಥಿಗೆ ಹಲವಾರು ಆಯ್ಕೆಗಳನ್ನು ಹೊಂದಿದೆ. ಆದರೆ, ಆಡಳಿತಾರೂಢ ಬಿಜೆಪಿಗೆ ಯಾವ ಆಯ್ಕೆ ಇದೆ' ಎಂದು ಉದ್ಧವ್ ಪ್ರಶ್ನಿಸಿದರು. 'ಕಳೆದ ಒಂಬತ್ತು ವರ್ಷಗಳಿಂದ ನಾವು ನೋಡುತ್ತಿರುವ ಒಂದೇ ಒಂದು ಆಯ್ಕೆ' ಎಂದು ಅವರು ವ್ಯಂಗ್ಯವಾಗಿ ಹೇಳಿದರು.

'ಇಂಡಿಯಾ' ರೂಪುಗೊಂಡ ಬಳಿಕ ಮೂರು ತಿಂಗಳಲ್ಲಿ ಮೈತ್ರಿಕೂಟವು ನಡೆಸುತ್ತಿರುವ ಮೂರನೇ ಸಭೆ ಇದಾಗಿದೆ. ಬಿಜೆಪಿ ಜತೆಗೆ ಕೈಜೋಡಿಸಿರುವ ಎನ್‌ಸಿಪಿ ಮುಖಂಡ ಅಜಿತ್ ಪವಾರ್ ಬಗ್ಗೆ ಮೃದುಧೋರಣೆ ಹೊಂದಿರುವ ಶರದ್ ಪವಾರ್ ಹಾಗೂ 'ಇಂಡಿಯಾ'ದ ಸಂಚಾಲಕನಾಗಲು ಆಸಕ್ತಿ ತೋರದ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ನಡೆಯು ಸಭೆಯಲ್ಲಿ ಚರ್ಚೆಗೀಡಾಗುವ ಸಾಧ್ಯತೆ ಇದೆ. ಎನ್‌ಸಿಪಿ ಬಂಡಾಯದ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಪವಾರ್, 'ಎನ್‌ಸಿಪಿಯಲ್ಲಿ ಯಾವುದೇ ಗೊಂದಲ ಇಲ್ಲ. ಪಕ್ಷ ತೊರೆದವರಿಗೆ ಜನರು ತಕ್ಕ ಪಾಠ ಕಲಿಸಲಿದ್ದಾರೆ' ಎಂದರು.

ಉದ್ಧವ್ ಠಾಕ್ರೆ ಅವರು ನಾಯಕರಿಗೆ ಮಹಾರಾಷ್ಟ್ರ ಶೈಲಿಯ ಭೋಜನವನ್ನು ಗುರುವಾರ ರಾತ್ರಿ ಆಯೋಜಿಸಿದ್ದಾರೆ. ಈ ಸಂದರ್ಭದಲ್ಲಿ, ಮೈತ್ರಿಕೂಟ ಮುಂದೆ ಸಾಗಬೇಕಾದ ಹಾದಿಯ ಕುರಿತು ಪ್ರಾಥಮಿಕ ಹಂತದ ಚರ್ಚೆಗಳು ನಡೆಯಲಿವೆ.

ಮೈತ್ರಿಕೂಟದ ಎಲ್ಲ ನಾಯಕರು ಶುಕ್ರವಾರ ಸೇರಲಿದ್ದು, ಅಂದು ಮುಖ್ಯವಾದ ಚರ್ಚೆಗಳು ಹಾಗೂ ನಿರ್ಣಯಗಳು ಆಗಲಿವೆ. 11 ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ 11 ಸದಸ್ಯರ ಸಮನ್ವಯ ಸಮಿತಿಗೆ ಸಭೆಯಲ್ಲಿ ಅಂತಿಮ ರೂಪ ಸಿಗಲಿದೆ.



ಮಹಾರಾಷ್ಟ್ರದ ಮುಂಬೈನಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ, ಶಿವಸೇನಾ (ಯುಬಿಟಿ) ಅಧ್ಯಕ್ಷ ಉದ್ಧವ್ ಠಾಕ್ರೆ ಹಾಗೂ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಹಾಜರಿದ್ದರು —ಪಿಟಿಐ ಚಿತ್ರ

> **2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 22 ಕೋಟಿ ಮತ ಪಡೆದಿತ್ತು. ಬಿಜೆಪಿಯೇತರ ಪಕ್ಷಗಳು 23 ಕೋಟಿ ಮತ ಪಡೆದಿವೆ. ನಾವೆಲ್ಲ ಒಗ್ಗೂಡಿದರೆ ಗೆಲುವು ನಿಶ್ಚಿತ**
> **ಅಶೋಕ್ ಚವಾಣ್,** ಕಾಂಗ್ರೆಸ್‌ನ ಹಿರಿಯ ನಾಯಕ

> **'ಇಂಡಿಯಾ' ಮೈತ್ರಿಕೂಟದಡಿ ಒಗ್ಗೂಡಿರುವ ಪಕ್ಷಗಳು ವಿಭಿನ್ನವಾದ ಸಿದ್ಧಾಂತ ಹೊಂದಿವೆ. ಆದರೆ, ಪ್ರಜಾಪ್ರಭುತ್ವದ ರಕ್ಷಣೆಯೇ ಎಲ್ಲರ ಏಕೈಕ ಧ್ಯೇಯವಾಗಿದೆ**
> **ಉದ್ಧವ್ ಠಾಕ್ರೆ,** ಅಧ್ಯಕ್ಷ, ಶಿವಸೇನಾ (ಯುಬಿಟಿ)

ಮಾಯಾವತಿ ನಿಲುವಿನಲ್ಲಿ ಸ್ಪಷ್ಟತೆಯಿಲ್ಲ: ಶರದ್ ಪವಾರ್

ಮುಂಬೈ (ಪಿಟಿಐ): 'ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರು ಯಾರ ಪರ ಇದ್ದಾರೆ ಎಂಬುದು ಸ್ಪಷ್ಟವಾಗಿಲ್ಲ. ಅದು ಹೊರತು 'ಇಂಡಿಯಾ' ಕೂಟಕ್ಕೆ ಬಿಎಸ್‌ಪಿ ಸೇರ್ಪಡೆ ಮಾಡಿಕೊಳ್ಳುವ ಬಗ್ಗೆ ನಿರ್ಧಾರ ಕೈಗೊಳ್ಳುವುದಿಲ್ಲ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಸ್ಪಷ್ಟಪಡಿಸಿದ್ದಾರೆ.


> **ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಜೊತೆಗೆ ಬಿಎಸ್‌ಪಿ ನಾಯಕಿ ಮಾಯಾವತಿ ಅವರು ಕೈಜೋಡಿಸಲು ಇಚ್ಛಿಸಿದರೆ ನಾನು ಸ್ವಾಗತಿಸುತ್ತೇನೆ**
> **ರಾಮದಾಸ್ ಆಠವಲೆ,** ಕೇಂದ್ರ ಸಚಿವ

'ನಾನು ಯಾವುದೇ ಮೈತ್ರಿಕೂಟಕ್ಕೆ ಸೇರುವುದಿಲ್ಲ' ಎಂಬ ಮಾಯಾವತಿ ಅವರ ತಟಸ್ಥ ನಿಲುವಿನ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಮೊದಲು ಅವರು ಬಿಜೆಪಿ ಜೊತೆ ಮಾತುಕತೆ ನಡೆಸಿದ್ದರು. ಈಗಲೂ ಅವರು ಅದೇ ಮನಸ್ಥಿತಿ ಹೊಂದಿದ್ದಾರೆ ಎಂದು ನಾನು ಹೇಳಲಾರೆ. ಆದರೆ, ಅವರ ನಿಲುವಿನಲ್ಲಿ ಸ್ಪಷ್ಟತೆ ಇಲ್ಲ. ನಮಗೆ ಆ ಬಗೆಗಿನ ಸ್ಪಷ್ಟ ಚಿತ್ರಣ ಸಿಗದ ಹೊರತು ಯಾವುದೇ ತೀರ್ಮಾನಕ್ಕೆಗೊಳ್ಳುವುದಿಲ್ಲ' ಎಂದು ಹೇಳಿದರು.

'ಮೈತ್ರಿಕೂಟದ ಪ್ರಧಾನಿ ಹುದ್ದೆಗೆ ಕೇಜ್ರಿವಾಲ್ ಆಕಾಂಕ್ಷಿಯಲ್ಲ'

ನವದೆಹಲಿ (ಪಿಟಿಐ): ಮುಂಬೈನಲ್ಲಿ ಇಂದಿನಿಂದ 'ಇಂಡಿಯಾ' ಸಭೆ ನಡೆಯುತ್ತಿರುವ ಬೆನ್ನಲ್ಲೇ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಲಿದ್ದಾರೆ ಎಂದು ಎಎಪಿ ನಾಯಕಿ ಪ್ರಿಯಾಂಕಾ ಕಕ್ಕರ್ ನೀಡಿರುವ ಹೇಳಿಕೆ ಸಂಚಲನಕ್ಕೆ ಕಾರಣವಾಗಿದೆ.

ಆದರೆ ಪ್ರಿಯಾಂಕಾ ಅವರ ಈ ಹೇಳಿಕೆಯನ್ನು ಪಕ್ಷದ ನಾಯಕ ರಾಘವ್ ಚಡ್ಡಾ ಹಾಗೂ ಸಚಿವೆ ಆತಿಶಿ ಅಲ್ಲಗಳೆದಿದ್ದಾರೆ. 'ಕೇಜ್ರಿವಾಲ್ ಪ್ರಧಾನಿ ಹುದ್ದೆಯ ಸ್ಪರ್ಧಿ ಅಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.



ಅರವಿಂದ ಕೇಜ್ರಿವಾಲ್

ಪಕ್ಷದ ದೆಹಲಿ ಘಟಕದ ಸಂಚಾಲಕ ಹಾಗೂ ಪರಿಸರ ಸಚಿವ ಗೋಪಾಲ್ ರೈ ಅವರು, 'ಎಎಪಿಯ ಪ್ರತಿ ಸದಸ್ಯರೂ ಅರವಿಂದ ಕೇಜ್ರಿವಾಲ್ ಅವರು ಪ್ರಧಾನಿ ಅಭ್ಯರ್ಥಿ ಆಗಬೇಕೆಂದು ಬಯಸುತ್ತಾರೆ. ಆದರೆ, ಇದನ್ನು ಅಂತಿಮವಾಗಿ ನಿರ್ಣಯಿಸಬೇಕಾಗಿರುವುದು 'ಇಂಡಿಯಾ'ದ ಸದಸ್ಯರು' ಎಂದು ಹೇಳಿದ್ದಾರೆ.

ಅಮಿತಾಭ್ ಭೇಟಿಯಾದ ದೀದಿ

ಮುಂಬೈ (ಪಿಟಿಐ): ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಅವರನ್ನು ಮುಂಬೈನಲ್ಲಿರುವ ಅವರ ನಿವಾಸದಲ್ಲಿ ಬುಧವಾರ ಭೇಟಿಯಾದರು.

ಮುಂಬೈನಲ್ಲಿ ನಡೆಯಲಿರುವ ಎರಡು ದಿನದ (ಆ. 31 ಮತ್ತು ಸೆ.1) ಸಭೆಗಾಗಿ ಆಗಮಿಸಿದ ಅವರು, ಜುಹುನಲ್ಲಿರುವ ಅಮಿತಾಭ್ ಅವರ ಮನೆಗೆ ತೆರಳಿ, ಭೇಟಿಯಾದರು.

ಈ ವೇಳೆ, 'ಅಮಿತಾಭ್ ಅವರು ನಮ್ಮ ಭಾರತ ರತ್ನ. ಅವರ ಕುಟುಂಬವೂ ಸಹ ಚಿತ್ರೋದ್ಯಮಕ್ಕೆ ಬಹುದೊಡ್ಡ ಕೊಡುಗೆ ನೀಡಿದೆ' ಎಂದರು.

ಉದ್ಧವ್ ಭೇಟಿ: ಬಳಿಕ, ಮಮತಾ ಅವರು ಶಿವಸೇನಾ ನಾಯಕ (ಉದ್ಧವ್ ಬಣ) ಉದ್ಧವ್ ಠಾಕ್ರೆ ಅವರ ನಿವಾಸಕ್ಕೆ ತೆರಳಿ, ಅವರಿಗೆ ರಾಖಿ ಕಟ್ಟಿದ್ದಾರೆ.

ಅಸ್ಸಾಂ: ಪ್ರವಾಹ ಪರಿಸ್ಥಿತಿ ಉಲ್ಬಣ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಬುಧವಾರ ಪ್ರವಾಹ ಪರಿಸ್ಥಿತಿಯು ಉಲ್ಬಣಿಸಿದ್ದು, 22 ಜಿಲ್ಲೆಗಳ ಸುಮಾರು 3.40ಲಕ್ಷಕ್ಕೂ ಹೆಚ್ಚಿನ ಜನರು ಸಂತ್ರಸ್ತರಾಗಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬ್ರಹ್ಮಪುತ್ರ ಮತ್ತು ಅದರ ಉಪ ನದಿಗಳಲ್ಲಿ ನೀರಿನ ಮಟ್ಟ ಹೆಚ್ಚಾಗಿದೆ. ಮಜೌಲಿ ಜಿಲ್ಲೆಯಲ್ಲಿ ಅತಿಹೆಚ್ಚಿನ ಪ್ರವಾಹ ಉಂಟಾಗಿದೆ. ಪ್ರವಾಹಪೀಡಿತರಿಗೆ 153 ಕಾಳಜಿ ಕೇಂದ್ರ ತೆರೆಯಲಾಗಿದೆ.

ಭ್ರಷ್ಟಾಚಾರ: ಸೆಂಥಿಲ್ ವಿರುದ್ಧ ಚಾರ್ಜ್‌ಶೀಟ್

ಚೆನ್ನೈ (ಪಿಟಿಐ): ಸಚಿವ ವಿ. ಸೆಂಥಿಲ್ ಬಾಲಾಜಿ ಅಧಿಕಾರಾವಧಿಯಲ್ಲಿ ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು ಎಂದು ಜಾರಿ ನಿರ್ದೇಶನಾಲಯವು ಇತ್ತೀಚೆಗೆ ಸಲ್ಲಿಸಿದ ಆರೋಪಪಟ್ಟಿಯಲ್ಲಿ ಹೇಳಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ವಿವಿಧ ವಿಭಾಗಗಳ ಅಡಿ ದಾಖಲಾದ ಪ್ರಾಸಿಕ್ಯೂಷನ್ ದೂರನ್ನು ತನಿಖಾ ಸಂಸ್ಥೆ ಆಗಸ್ಟ್ 12 ರಂದು ಚೆನ್ನೈನ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿತು.

2011ರಿಂದ 2016ರವರೆಗೆ ಎಐಎಡಿಎಂಕೆ ಆಡಳಿತದಲ್ಲಿ ಸಾರಿಗೆ ಸಚಿವರಾಗಿದ್ದಾಗ ನಡೆದಿದೆ ಎನ್ನಲಾದ ಉದ್ಯೋಗಕ್ಕಾಗಿ ನಗದು ಹಗರಣಕ್ಕೆ ಸಂಬಂಧಿಸಿದಂತೆ ಡಿಎಂಕೆ ಮುಖಂಡ ಬಾಲಾಜಿ (47) ಅವರನ್ನು ಜೂನ್ 14 ರಂದು ಇ.ಡಿ ಬಂಧಿಸಿತ್ತು.

ಇಲ್ಲಿನ ಪುಝಲ್ ಜೈಲಿನಲ್ಲಿರುವ ಬಾಲಾಜಿ ಅವರು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಸಂಪುಟದಲ್ಲಿ ಖಾತೆಯಿಲ್ಲದ ಸಚಿವರಾಗಿ ಮುಂದುವರೆದಿದ್ದಾರೆ ಮತ್ತು ಅವರ ನ್ಯಾಯಾಂಗ ಬಂಧನವನ್ನು ಸೆ. 15ರವರೆಗೆ ವಿಸ್ತರಿಸಲಾಗಿದೆ.

ಸೆಂಥಿಲ್ ಅವರ ಕಾನೂನುಬಾಹಿರ ನಿರ್ದೇಶನಗಳ ಪ್ರಕಾರ ಸಾರಿಗೆ ಇಲಾಖೆಯಲ್ಲಿ ನೇಮಕಾತಿ ನಡೆದಿದೆ. ವೈಯಕ್ತಿಕ ಲಾಭಕ್ಕಾಗಿ ತಮ್ಮ ಅಧಿಕಾರ ಬಳಸಿಕೊಂಡು, ಕ್ರಿಮಿನಲ್ ಚಟುವಟಿಕೆಗಳ ಮೂಲಕ ಅಕ್ರಮವಾಗಿ ಆದಾಯ ಸಂಪಾದಿಸಿದ್ದಾರೆ. ಇದಕ್ಕೆ ಅವರ ಸಹೋದರ, ಆಪ್ತ ಸಹಾಯಕರು ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು ಸಹ ಸಹಕರಿಸಿದ್ದಾರೆ ಎಂದು ಇ.ಡಿ. ಆರೋಪಿಸಿದೆ.

ಸಾರಿಗೆ ಇಲಾಖೆಯಲ್ಲಿ ಚಾಲಕರ ಹುದ್ದೆ ₹1.75 ಲಕ್ಷ, ಕಂಡಕ್ಟರ್ ಹುದ್ದೆ ₹ 2.25 ಲಕ್ಷ, ಕಿರಿಯ ಟ್ರೇಡ್ಸ್ ಮನ್ ಹುದ್ದೆ ₹ 5 ಲಕ್ಷ, ಕಿರಿಯ ಸಹಾಯಕ ಹುದ್ದೆ ₹7 ಲಕ್ಷ, ಸಹಾಯಕ ಎಂಜಿನಿಯರ್ ಹುದ್ದೆ₹ 12 ಲಕ್ಷಕ್ಕೆ ಮಾರಾಟವಾಗಿರುವ ಸಂಬಂಧ ಪೆನ್ ಡ್ರೈವ್ ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ.

ಕೋಟಾ: ವಾಸ್ತವ್ಯಕ್ಕೆ ಪೋಷಕರ ನಿರ್ಧಾರ

ಕೋಟಾ (ಪಿಟಿಐ): ಕೋಟಾದಲ್ಲಿ ನೀಟ್, ಜೆಇಇ ಪ್ರವೇಶ ಪರೀಕ್ಷೆಯ ತರಬೇತಿ ಅವಧಿಯಲ್ಲಿ ಮಾನಸಿಕ ಒತ್ತಡಕ್ಕೀಡಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಪೋಷಕರಲ್ಲಿ ಆತಂಕ ಮೂಡಿದೆ. ಹಾಗಾಗಿ, ತಮ್ಮ ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಲು ಪೋಷಕರು ಕೋಟಾದಲ್ಲಿ ವಾಸ್ತವ್ಯ ಹೂಡುವ ನಿರ್ಧಾರಕ್ಕೆ ಬಂದಿದ್ದಾರೆ.

ರಾಜಸ್ಥಾನದ ಕೋಟಾ 'ಕೋಚಿಂಗ್ ಹಬ್' ಎಂದೇ ಖ್ಯಾತವಾಗಿದೆ. ಐಐಟಿ ಪ್ರವೇಶ ಪರೀಕ್ಷೆಗಾಗಿ ಇಲ್ಲಿ ತರಬೇತಿ ಪಡೆಯುತ್ತಿರುವ ತಮ್ಮ ಮೊಮ್ಮಗನ ಕಾಳಜಿಗಾಗಿ ಬಿಹಾರದ ಸೀತಾಮಡಿಯ ನಿವಾಸಿ ನೀರೂದೇವಿ 80ನೇ ವಯಸ್ಸಿನಲ್ಲಿ ಕೋಟಾಕ್ಕೆ ಬಂದಿದ್ದಾರೆ.

ಬಿಡುವಿಲ್ಲದ ತರಬೇತಿ, ಕಠಿಣ ಸ್ಪರ್ಧೆ, ಉತ್ತಮ ಅಂಕಕ್ಕಾಗಿ ನಿರಂತರ ಒತ್ತಡ, ಪೋಷಕರ ನಿರೀಕ್ಷೆಯ ಭಾರ, ಈ ಸ್ಥಿತಿಯನ್ನು ನಿತ್ಯವೂ ವಿದ್ಯಾರ್ಥಿಗಳು ಎದುರಿಸಬೇಕಾಗಿದೆ. ಹಾಗಾಗಿ, ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಹಾಸ್ಟೆಲ್‌ಗಳಲ್ಲಿ ಇರಿಸುವ ನಿರ್ಧಾರ ಕೈಬಿಟ್ಟು, ಕೋಟಾದಲ್ಲಿ ಬಾಡಿಗೆ ಮನೆ ಪಡೆದು ಮಕ್ಕಳೊಂದಿಗೆ ಇರಲು ಆದ್ಯತೆ ನೀಡುತ್ತಿದ್ದಾರೆ.

2023ರಲ್ಲಿ ಇದುವರೆಗೆ 22 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಗಸ್ಟ್ 27ರ ಒಂದೇ ದಿನದಂದು ಕೆಲವೇ ಗಂಟೆಗಳ ಅಂತರದಲ್ಲಿ ಇಬ್ಬರು ವಿದ್ಯಾರ್ಥಿಗಳು ತಮ್ಮ ಜೀವವನ್ನು ಕೊನೆಗಾಣಿಸಿಕೊಂಡಿದ್ದಾರೆ. ಕಳೆದ ವರ್ಷ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ 15 ಇತ್ತು.

ಜಿ-20: ಜಿನ್‌ಪಿಂಗ್ ಭಾಗಿ ಖಚಿತಪಡಿಸದ ಚೀನಾ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಧಾನಿಯಲ್ಲಿ ನಡೆಯಲಿರುವ ಜಿ-20 ಶೃಂಗಸಭೆಯಲ್ಲಿ ಅಧ್ಯಕ್ಷ ಷಿ ಜಿನ್‌ಪಿಂಗ್ ಪಾಲ್ಗೊಳ್ಳುವುದನ್ನು ಚೀನಾ ಖಚಿತಪಡಿಸಿಲ್ಲ.

ಶೃಂಗಸಭೆ ಸಂದರ್ಭದಲ್ಲಿಯೇ ಅಮೆರಿಕ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರೊಂದಿಗೆ ಜಿನ್‌ಪಿಂಗ್ ಪ್ರತ್ಯೇಕವಾಗಿ ಮಾತುಕತೆ ನಡೆಸಲಿದ್ದಾರೆ ಎನ್ನಲಾಗಿದೆ. ಆದರೆ, ಜಿನ್‌ಪಿಂಗ್ ಅವರು ಶೃಂಗದಲ್ಲಿ ಭಾಗಿಯಾಗುವುದನ್ನು ಖಚಿತಪಡಿಸುವ ಯಾವುದೆ ಮಾಹಿತಿ ಇಲ್ಲ ಎಂದು ಮೂಲಗಳು ಹೇಳಿವೆ.

ಪ್ರಧಾನಿ ಮೋದಿ ಅವರಿಗೆ ಸೋಮವಾರ ಕರೆ ಮಾಡಿದ್ದ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಸಭೆಯಲ್ಲಿ ತಾವು ಪಾಲ್ಗೊಳ್ಳದಿರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ಮೆಕ್ಸಿಕೊ ಅಧ್ಯಕ್ಷ ಆಂಡ್ರೆಸ್ ಮ್ಯಾನುಯೆಲ್ ಲೋಪೆಜ್ ಒಬ್ರಡಾರ್ ಅವರು ಕೂಡ ಪಾಲ್ಗೊಳ್ಳುತ್ತಿಲ್ಲ.

ಸಜ್ಜು: ಶೃಂಗಸಭೆಗೆ ದೆಹಲಿ ಸಜ್ಜುಗೊಂಡಿದ್ದರೆ, ಮತ್ತೊಂದೆಡೆ ವಿದೇಶಗಳ ಗಣ್ಯರು ನೆನಪಿನಲ್ಲಿಡುವಂತಹ ಆತಿಥ್ಯ ನೀಡಲು ನಗರದ ಐಷಾರಾಮಿ ಹೋಟೆಲ್‌ಗಳು ಸಿದ್ಧತೆ ಮಾಡಿಕೊಂಡಿವೆ.

'ದೇಶದ ಸಾಂಪ್ರದಾಯಿಕ ಕಲೆ, ಸಂಸ್ಕೃತಿ ಹಾಗೂ ಆತಿಥ್ಯ ಪ್ರದರ್ಶನಕ್ಕೆ ಈ ಶೃಂಗಸಭೆ ನಮಗೆ ದೊಡ್ಡ ಅವಕಾಶವನ್ನು ಒದಗಿಸಿದೆ' ಎಂದು ಲಿ ಮೆರಿಡಿಯನ್ ಹೋಟೆಲ್‌ನ ಉಪಾಧ್ಯಕ್ಷೆ ಹಾಗೂ ಪ್ರಧಾನ ವ್ಯವಸ್ಥಾಪಕಿ ಮೀನಾ ಭಾಟಿಯಾ ಹೇಳಿದ್ದಾರೆ.

ಬಿಹಾರದ ಲಿಟ್ಟಿ ಚೋಖಾ, ರಾಜಸ್ಥಾನದ ಗಟ್ಟಾ ಕರಿ, ಕಾಶ್ಮೀರದ ಕೇಸರಿ ಕುರ್ಮ, ಲಖನೌದ ನಲ್ಲಿ ನಿಹಾರಿ, ಕೇರಳದ ಮೀನ್ ಪೊಳ್ಳಿಚ್ಚದ್, ಗೋವಾದ ಚಿಕನ್ ಶಾಕುಟಿ ಮಸಾಲ ಸೇರಿದಂತೆ ಅನೇಕ ಭಕ್ಷ್ಯಗಳು ರಾಜಧಾನಿಯ ವಿವಿಧ ಹೋಟೆಲ್‌ಗಳ ಮೆನುವಿನಲ್ಲಿವೆ.

ರಸ್ತೆಗಳ ಸಿಂಗಾರಕ್ಕೆ 2.5 ಲಕ್ಷ ಹೂಕುಂಡ

ನವದೆಹಲಿ (ಪಿಟಿಐ): ಜಿ20 ಶೃಂಗಸಭೆಯ ಹಿನ್ನೆಲೆಯಲ್ಲಿ ಸುಮಾರು 2.5 ಲಕ್ಷ ಹೂಕುಂಡಗಳ ಮೂಲಕ ದೆಹಲಿಯ ರಸ್ತೆಗಳನ್ನು ಸಿಂಗರಿಸುವ ಕಾರ್ಯ ನಡೆಯುತ್ತಿದೆ ಎಂದು ದೆಹಲಿಯ ಪರಿಸರ ಸಚಿವ ಗೋಪಾಲ್ ರಾಯ್ ಬುಧವಾರ ತಿಳಿಸಿದರು.

ಈ ಗಿಡಗಳ ನಿರ್ವಹಣೆಯ ಜವಾಬ್ದಾರಿಯನ್ನು ಇಲಾಖೆಯ ಸುಮಾರು 300 ಅಧಿಕಾರಿಗಳು ಮತ್ತು ಸಿಬ್ಬಂದಿಗೆ ವಹಿಸಲಾಗಿದೆ ಎಂದು ಅವರು ಸುದ್ದಿಗೋಷ್ಠಿ ಯಲ್ಲಿ ಹೇಳಿದರು.

ದೆಹಲಿಯಲ್ಲಿ ಸೆ.9 ಮತ್ತು 10ರಂದು ಜಿ20 ಶೃಂಗಸಭೆ ನಡೆಯಲಿದೆ. ದೆಹಲಿ ಸರ್ಕಾರ ಈ ವರ್ಷ 52 ಲಕ್ಷ ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಈಗಾಗಲೇ 36 ಲಕ್ಷ ಸಸಿಗಳನ್ನು ನೆಡುವ ಮೂಲಕ ಶೇ 69ರಷ್ಟು ಗುರಿ ಸಾಧಿಸಿದೆ ಎಂದು ಅವರು ತಿಳಿಸಿದರು.

ವಿಶ್ವ ಅಥ್ಲೆಟಿಕ್ಸ್: ಜಾವೆಲಿನ್‌ನಲ್ಲಿ 5ನೇ ಸ್ಥಾನ ಪಡೆದ ಜೇನಾಗೆ ₹25 ಲಕ್ಷ ನೀಡಿದ ಒಡಿಶಾ ಸರ್ಕಾರ

ಮನು ಸಾಧನೆಗೆ ಸಿಗದ ಮನ್ನಣೆ

• ಗಿರೀಶ ದೊಡ್ಡಮನಿ

ಬೆಂಗಳೂರು: ಬುಡಾಪೆಸ್ಟ್‌ನಲ್ಲಿ ಈಚೆಗೆ ನಡೆದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ನೀರಜ್ ಚೋಪ್ರಾ ಚಿನ್ನ ಜಯಿಸಿದ್ದು ಚಾರಿತ್ರಿಕ ದಾಖಲೆ. ಇದರ ಜೊತೆಗೆ ಇದೇ ಮೊದಲ ಬಾರಿ ಭಾರತದ ಮೂವರು ಅಥ್ಲೀಟ್‌ಗಳು ಜಾವೆಲಿನ್ ಥ್ರೋ ಫೈನಲ್ ತಲುಪಿದ್ದು ಕೂಡ ಇತಿಹಾಸ.

ಆ ಮೂವರಲ್ಲಿ ಕನ್ನಡಿಗ ಡಿ.ಪಿ. ಮನು ಅವರೂ ಒಬ್ಬರು. 84.14 ಮೀಟರ್ಸ್ ಥ್ರೋ ಮಾಡಿ ಆರನೇ ಸ್ಥಾನ ಗಳಿಸಿದ ಮನು ಅವರ ಸಾಧನೆಯು ಸಣ್ಣದಲ್ಲ. ಘಟಾನುಘಟಿಗಳು ಇದ್ದ ಫೈನಲ್‌ನಲ್ಲಿ ಅವರು ಈ ಸಾಧನೆ ಮಾಡಿದ್ದಾರೆ. ಆದರೆ ಅವರಿಗೆ ಅಭಿನಂದಿಸುವ ಕಾರ್ಯವನ್ನೂ ರಾಜ್ಯ ಸರ್ಕಾರದ ಕ್ರೀಡಾ ಇಲಾಖೆ ಇದುವರೆಗೂ ಮಾಡಿಲ್ಲ.

'ನನ್ನೊಂದಿಗೆ ಫೈನಲ್‌ನಲ್ಲಿದ್ದ ಕಿಶೋರ್ ಜೇನಾ ಐದನೇ ಸ್ಥಾನ ಗಳಿಸಿದರು. ಅವರು ತಮ್ಮ ತವರು ರಾಜ್ಯ ಒಡಿಶಾಕ್ಕೆ ಮರಳುವ ಮೊದಲೇ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ₹ 25 ಲಕ್ಷ ನಗದು ಬಹುಮಾನ ಘೋಷಿಸಿದ್ದಾರೆ. ನನಗೆ ಹಣದಾಸೆ ಇಲ್ಲ. ಆದರೆ ನನ್ನ ತವರು ರಾಜ್ಯವು ಗೌರವಿಸಿದರೂ ಸಾಕಿತ್ತು. ಆದರೆ ಸ್ಪರ್ಧೆ ಮುಗಿದು ಮೂರು ದಿನ ಕಳೆದರೂ ಇದುವರೆಗೆ ಯಾರೂ ಒಂದು ಕರೆಯನ್ನೂ ಮಾಡಿಲ್ಲ' ಎಂದು ಮನು ಬೇಸರವ್ಯಕ್ತಪಡಿಸಿದರು.

ಬುಧವಾರ ಬೆಳಗಿನ ಜಾವ ಬೆಂಗಳೂರಿಗೆ ಬಂದಿಳಿದಿರುವ ಮನು 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದಲ್ಲಿ ತಮ್ಮ ಸಾಧನೆಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದರು. ಆದರೆ ಸರ್ಕಾರದ ಧೋರಣೆ ಕುರಿತು ಬೇಸರವನ್ನೂ ತೋಡಿಕೊಂಡರು.

'ವಿಶ್ವದ ಟಾಪ್ 10 ಜಾವೆಲಿನ್ ಪಟುಗಳಲ್ಲಿ ಸ್ಥಾನ ಗಳಿಸುವುದು ಸುಲಭದ ಮಾತಲ್ಲ. ನಾನು ಹಳ್ಳಿಯಿಂದ ಬಂದವನು. ಮಧ್ಯಮವರ್ಗದ ಕುಟುಂಬದಿಂದ ಬಂದಿರುವೆ. ಜಾವೆಲಿನ್ ಥ್ರೋನಲ್ಲಿ ಈ ಮಟ್ಟದ ಸಾಧನೆ ಮಾಡಲು ಬಹಳಷ್ಟು ಕಷ್ಟಪಟ್ಟಿರುವೆ. ಪುಣೆಯ ಡಿಫೆನ್ಸ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವೆ. ಭಾರತೀಯ ಸೇನೆಯಲ್ಲಿ ಹವಾಲ್ದಾರ್ ಆಗಿರುವುದರಿಂದ ಬಹಳಷ್ಟು ಅನುಕೂಲ ಆಗಿದೆ. ಆದರೆ ನನ್ನ ನಾಡಿನ ಅಭಿನಂದನೆ ನನಗೆ ಅಮೂಲ್ಯವಾದದ್ದು. ನನಗಿಂತಲೂ ಉತ್ತಮ ಪ್ರತಿಭಾವಂತರು ಈ ರಾಜ್ಯದಲ್ಲಿದ್ದಾರೆ. ಅವರಿಗೆ ಸೂಕ್ತ ಪ್ರೋತ್ಸಾಹ ಸಿಗಬೇಕು. ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯತತ್ಪರವಾಗಬೇಕು' ಎಂದು ಹೇಳಿದರು.

ಈ ಬಾರಿಯ ಫೈನಲ್‌ನಲ್ಲಿ ನೀರಜ್ ಅಲ್ಲದೇ ಪಾಕಿಸ್ತಾನದ ಅರ್ಷದ್ ನದೀಂ (ಬೆಳ್ಳಿ), ಜೆಕ್ ಗಣರಾಜ್ಯದ ಯಾಕೂಬ್ ವಾದ್ಲೇಚ್ (ಕಂಚು), ಜರ್ಮನಿಯ ಜೂಲಿಯನ್ ವೇಬರ್ (4ನೇ ಸ್ಥಾನ), ಫಿನ್ಲೆಂಡ್‌ನ ಒಲಿವರ್ ಹೆಲ್ಯಾಂಡರ್ (7ನೇ), ಲಿಥುವೇನಿಯಾದ ಇಡ್ಸ್ ಮ್ಯಾಟುಸೆವಿಕಸ್ (8ನೇ), ಪೋಲೆಂಡ್‌ನ ಡೇವಿಡ್ ವೆಗ್ನರ್ (9) ಹಾಗೂ ಈಜಿಪ್ಟ್‌ನ ಇಹಾಬ್ ಅಬ್ದೆಲ್ ರೆಹಮಾನ್ (10ನೇ) ಅವರು ಕಣದಲ್ಲಿದ್ದರು.

'ಇದೇ ಮೊದಲ ಸಲ ವಿಶ್ವ ಕೂಟದಲ್ಲಿ ಭಾಗವಹಿಸಿದ್ದೆ. ಅದ್ಭುತ ಅನುಭವ ಇದು. ಅಗ್ರ ಆರು ಸ್ಥಾನಗಳಲ್ಲಿ ಭಾರತದ ಮೂವರು ಇದ್ದದ್ದು, ನೀರಜ್ ಚಿನ್ನ ಜಯಿಸಿದ್ದು ಅಪಾರ ಸಂತಸ ತಂದಿದೆ. ನೀರಜ್ ಅವರದ್ದು ಸರಳ ವ್ಯಕ್ತಿತ್ವ. ಅತ್ಯುನ್ನತ ಸಾಧನೆ ಮಾಡಿದರೂ ನಮ್ಮೆಲ್ಲರೊಂದಿಗೆ ಆತ್ಮೀಯವಾಗಿ ಬೆರೆಯುತ್ತಾರೆ. ಮಿತಭಾಷಿಯಾಗಿರುವ ಅವರು ಪಾಸಿಟಿವ್ ವಿಷಯಗಳನ್ನು ಮಾತ್ರ ಮಾತನಾಡುತ್ತಾರೆ. ನಮಗೂ ಸ್ಫೂರ್ತಿ ತುಂಬುತ್ತಾರೆ. ಸಾಧನೆ, ಪ್ರಶಸ್ತಿ ಮತ್ತು ಕೀರ್ತಿಯನ್ನು ತಲೆಗೇರಿಸಿಕೊಂಡಿಲ್ಲ' ಎಂದು ಶ್ಲಾಘಿಸಿದರು.

'ಕ್ವಾಲಿಫೈಯರ್‌ನಲ್ಲಿಯೇ ಅಮೋಘ ಥ್ರೋ ಮಾಡಿದ್ದ ನೀರಜ್ ಅವರು ಪದಕ ಗೆಲ್ಲುವ ವಿಶ್ವಾಸ ನಮಗೆಲ್ಲರಿಗೂ ಇತ್ತು. ಅದೇ ರೀತಿ ಫೈನಲ್‌ನಲ್ಲಿ ಆಯಿತು. ನನ್ನ ಶ್ರೇಷ್ಠ ಥ್ರೋ ಎಂದರೆ 84.35 ಮೀಟರ್ಸ್. ಸ್ಪರ್ಧೆಯಲ್ಲಿ ಇನ್ನೊಂದು ಅವಕಾಶ ಸಿಕ್ಕಿದ್ದರೆ ಈ ಹಂತವನ್ನು ದಾಟುತ್ತಿದ್ದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆ ಮಾಡುವೆ' ಎಂದು ಮನು ವಿಶ್ವಾಸ ವ್ಯಕ್ತಪಡಿಸಿದರು.


ವಿಶ್ವ ಅಥ್ಲೆಟಿಕ್ಸ್‌ನ ಪುರುಷರ ಜಾವೆಲಿನ್ ಥ್ರೋನಲ್ಲಿ ಕರ್ನಾಟಕದ ಡಿ.ಪಿ. ಮನು ಸ್ಪರ್ಧೆ–ಎಪಿ/ಪಿಟಿಐ ಚಿತ್ರ

'ಅತ್ಯಾಧುನಿಕ ಟ್ರ್ಯಾಕ್ ಭಾರತದಲ್ಲಿಯೂ ಬೇಕು'

ವಿಶ್ವ ಚಾಂಪಿಯನ್‌ಷಿಪ್, ಒಲಿಂಪಿಕ್ಸ್ ಸೇರಿದಂತೆ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಬಳಕೆಯಾಗುವ ಟ್ರ್ಯಾಕ್ ಭಾರತದಲ್ಲಿಯೂ ನಿರ್ಮಾಣವಾಗಬೇಕು. ಮಂಡೊ ಟ್ರ್ಯಾಕ್ ಎಂದು ಕರೆಯಲಾಗುತ್ತದೆ. ಅತ್ಯಾಧುನಿಕ ತಂತ್ರಜ್ಞಾನದಿಂದ ನಿರ್ಮಿತವಾಗಿರುತ್ತದೆ. ಸ್ವಲ್ಪ ಮೃದುತ್ವ ಇರುವುದರಿಂದ ಅದರಲ್ಲಿ ಓಡಲು ಮತ್ತು ಜಂಪ್ ಉತ್ತಮ. ಅದರಲ್ಲೂ ಜಂಪಿಂಗ್ ಅಥ್ಲೀಟ್‌ಗಳಿಗೆ ಸಹಕಾರಿ. ಬುಡಾಪೆಸ್ಟ್‌ನಲ್ಲಿ ಅದೇ ರೀತಿ ಇತ್ತು. ಭಾರತದಲ್ಲಿ ಈಗಲೂ ಕಠಿಣವಾಗಿರುವ ಟ್ರ್ಯಾಕ್ ಬಳಕೆಯಾಗುತ್ತಿವೆ. ತಂತ್ರಜ್ಞಾನದಲ್ಲಿ ಮುಂದುವರಿಯಬೇಕು ಎಂದು ಮನು ಹೇಳಿದರು.

'ಸಹಕಾರ ನೀಡಿ'

ವಿಶ್ವ ಚಾಂಪಿಯನ್‌ಷಿಪ್ ಜಾವೆಲಿನ್ ಸ್ಪರ್ಧೆಯಲ್ಲಿ ಫೈನಲ್ ತಲುಪಿ ರಾಜ್ಯಕ್ಕೆ ಕೀರ್ತಿ ತಂದ ಹೆಮ್ಮೆಯ ಕನ್ನಡಿಗ ಡಿ.ಪಿ. ಮನು ಅವರಿಗೆ ಅಭಿನಂದನೆಗಳು. ಮುಂದೆ ಪದಕ ಗೆಲ್ಲಲು ಸರ್ಕಾರವು ಎಲ್ಲ ತರಹದ ಸಹಕಾರ, ಬೆಂಬಲ ನೀಡಲಿ.

ಮೋಹನ ದಾಸರಿ
ಉಪಾಧ್ಯಕ್ಷರು, ಆಮ್ ಆದ್ಮಿ ಪಾರ್ಟಿ
(ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮಾಡಿರುವ ಟ್ವೀಟ್)

ಹಾಸನ ಜಿಲ್ಲೆಯ ಪ್ರತಿಭೆ

23 ವರ್ಷದ ಮನು ಮೂಲತಃ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಕುಪ್ಪಗೋಡು ಗ್ರಾಮದವರು. ಅಪ್ಪ ಪ್ರಕಾಶ್ ಮತ್ತು ಸುಜಾತಾ ದಂಪತಿಯ ಇಬ್ಬರು ಗಂಡುಮಕ್ಕಳಲ್ಲಿ ಮನು ಮೊದಲನೇಯವರು.

ಪ್ರಕಾಶ್ ಅವರು ಕಾಫಿ ತೋಟದ ಕಾರ್ಯದಲ್ಲಿದ್ದಾರೆ. ಮನು ಅವರ ತಮ್ಮ ಖಾಸಗಿ ಕಂಪನಿ ಕೆಲಸದಲ್ಲಿದ್ದಾರೆ. ಬೇಲೂರಿನ ಹೊಯ್ಸಳ ಶಾಲೆಯಲ್ಲಿ ಎಂಟನೇ ತರಗತಿಯಲ್ಲಿದ್ದಾಗಲೇ ಜಾವೆಲಿನ್ ಥ್ರೋ ಮೇಲೆ ಪ್ರೀತಿ ಬೆಳೆಸಿಕೊಂಡವರು ಮನು. ಅವರ ತೋಳ್ಬಲ ಮತ್ತು ಪ್ರತಿಭೆ ಗುರುತಿಸಿದ್ದ ಶಾಲೆಯ ಶಿಕ್ಷಕ ನಂದೀಶ್ ಪ್ರೋತ್ಸಾಹ ನೀಡಿದರು.

ಮುಂದೆ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಗೆ ಸೇರಿಕೊಂಡರು. 2018ರಲ್ಲಿ ಖೇಲೊ ಇಂಡಿಯಾದಲ್ಲಿ 76 ಮೀಟರ್‌ಗೂ ಹೆಚ್ಚು ದೂರ ಥ್ರೋ ಮಾಡಿದ್ದ ಮನು, ಪುಣೆಯ ಡಿಫೆನ್ಸ್ ಅಕಾಡೆಮಿ ಕೋಚ್, ಕನ್ನಡಿಗ ಕಾಶೀನಾಥ್ ನಾಯ್ಕ್ ಅವರ ಕಣ್ಣಿಗೆ ಬಿದ್ದರು. ನಂತರ ಕಾಶೀನಾಥ್ ಅವರೇ ಮನುಗೆ ತರಬೇತಿ ನೀಡುತ್ತಿದ್ದಾರೆ. ನೀರಜ್ ಚೋಪ್ರಾ ಅವರಿಗೂ ಈ ಹಿಂದೆ ಕೆಲಕಾಲ ಕಾಶೀನಾಥ್ ತರಬೇತಿ ನೀಡಿದ್ದರು.

ಡೈಮಂಡ್ ಲೀಗ್‌ನಲ್ಲಿ ಚಿನ್ನದ ಹುಡುಗ ನೀರಜ್

ಜ್ಯೂರಿಚ್ (ಪಿಟಿಐ): ವಿಶ್ವ ಚಾಂಪಿಯನ್ ಜಾವೆಲಿನ್ ಅಥ್ಲೀಟ್ ನೀರಜ್ ಚೋಪ್ರಾ ಡೈಮಂಡ್ ಲೀಗ್ ಕೂಟದಲ್ಲಿ ತಮ್ಮ ಅಜೇಯ ಓಟವನ್ನು ಮುಂದುವರಿಸುವತ್ತ ಚಿತ್ತ ನೆಟ್ಟಿದ್ದಾರೆ.


ಗುರುವಾರ ಇಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಕೂಟದಲ್ಲಿ ಕಣಕ್ಕಿಳಿಯಲು ಸಜ್ಜಾಗಿದ್ದಾರೆ.

ಕಳೆದ ಭಾನುವಾರ ಬುಡಾಪೆಸ್ಟ್‌ನಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಪುರುಷರ ವಿಭಾಗದಲ್ಲಿ ನೀರಜ್ 88.17 ಮೀಟರ್ಸ್ ದೂರ ಜಾವೆಲಿನ್ ಥ್ರೋ ಮಾಡಿ ಚಿನ್ನದ ಪದಕ ಜಯಿಸಿದ್ದರು. ಈ ಸಾಧನೆ ಮಾಡಿದ ಮೊದಲ ಭಾರತೀಯ ಕ್ರೀಡಾಪಟುವಾಗಿದ್ದರು. 2022ರಲ್ಲಿ ಅವರು ಬೆಳ್ಳಿ ಗಳಿಸಿದ್ದರು.

ಅಲ್ಲದೇ ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಚಿನ್ನ ಗೆದ್ದ ವಿಶ್ವದ ಮೂರನೇ ಜಾವೆಲಿನ್ ಥ್ರೋ ಅಥ್ಲೀಟ್ ಆಗಿದ್ದಾರೆ. ಜೆಕ್ ಗಣರಾಜ್ಯದ ಜಾನ್ ಜೆಲೆನ್‌ಸ್ಕಿ ಮತ್ತು ನಾರ್ವೆಯ ಆ್ಯಂಡ್ರೀಸ್ ಥ್ರೋಕಿಲ್ಡ್‌ಸನ್ ಅವರ ನಂತರ ನೀರಜ್ ಸ್ಥಾನ ಪಡೆದಿದ್ದಾರೆ.

ಈ ಬಾರಿಯ ಡೈಮಂಡ್ ಲೀಗ್ ಋತುವಿನಲ್ಲಿ 25 ವರ್ಷದ ನೀರಜ್ ಅಜೇಯರಾಗಿದ್ದಾರೆ. ದೋಹಾ (ಮೇ 5) ಮತ್ತು ಲೂಸಾನ್ (ಜೂನ್ 30) ನಲ್ಲಿ ನಡೆದ ಆವೃತ್ತಿಗಳಲ್ಲಿ ಜಯಿಸಿದ್ದರು.

ಇದೀಗ ಜೂರಿಚ್ ಆವೃತ್ತಿಯಲ್ಲಿ ಅವರು ಮತ್ತೊಮ್ಮೆ ಜೆಕ್ ಗಣರಾಜ್ಯದ ಯಾಕೂಬ್ ವಡ್ಲೆಚ್, ಜರ್ಮನಿಯ ಜೂಲಿಯನ್ ವೆಬರ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ ಅವರಂತಹ ದಿಗ್ಗಜರು ನೀರಜ್ ಅವರಿಗೆ ಪೈಪೋಟಿಯೊಡ್ಡಲಿದ್ದಾರೆ. ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಬೆಳ್ಳಿ ಜಯಿಸಿದ್ದ ಪಾಕಿಸ್ತಾನದ ಅರ್ಷದ್ ನದೀಂ ಡೈಮಂಡ್ ಲೀಗ್‌ನಲ್ಲಿ ಕಣಕ್ಕಿಳಿಯುತ್ತಿಲ್ಲ. ಪುರುಷರ ಲಾಂಗ್ ಜಂಪ್‌ನಲ್ಲಿ ಭಾರತದ ಮುರಳಿ ಶ್ರೀಶಂಕರ್ ಕೂಡ ಕಣಕ್ಕಿಳಿಯಲಿದ್ದಾರೆ.


ನೀರಜ್ ಚೋಪ್ರಾ –ಎಎಫ್‌ಪಿ ಚಿತ್ರ

ಎಂಎಫ್‌ಎಆರ್ ತಂಡಕ್ಕೆ ಗೆಲುವು

ಬೆಂಗಳೂರು: ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 8–3ರಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಎಂಎಫ್‌ಎಆರ್‌ನ ಪ್ರತೀಕ್ ಸ್ವಾಮಿ ಐದು ಗೋಲು ದಾಖಲಿಸಿ ಮಿಂಚಿದರು. ಜಿ. ಉದಿತ್ ಎರಡು, ಜೆನಿಶ್‌ಸಿಂಹ ರಾಣಾ ಒಂದು ಗೋಲು ಗಳಿಸಿದರು. ಚಾಲೆಂಜರ್ಸ್ ತಂಡದ ಪರವಾಗಿ ಇ. ದೇವರಾಜು, ಲೆಟ್ಮಿನ್ ಲುನ್ ಸಿಂಗ್‌ಸನ್, ಸನ್ನಿ ಕುಮಾರ್ ತಲಾ ಒಂದು ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವು 4–0ಯಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು. ಸತೀಶ್ ಕುಮಾರ್, ಸರವಣಕುಮಾರ್, ರಾಜ ಗಣಪತಿ, ಎಚ್. ಪ್ರಶಾಂತ್ ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಪ್ರಜ್ಞಾನಂದಗೆ ಭವ್ಯ ಸ್ವಾಗತ

ಚೆನ್ನೈ (ಎಎಫ್‌ಪಿ): ಕಳೆದ ವಾರ ವಿಶ್ವಕಪ್ ಚೆಸ್ ಟೂರ್ನಿಯಲ್ಲಿ ಅಮೋಘ ಪ್ರದರ್ಶನ ನೀಡಿದ್ದ ಭಾರತದ ಚೆಸ್ ತಾರೆ ರಮೇಶಬಾಬು ಪ್ರಜ್ಞಾನಂದ ಅವರಿಗೆ ಬುಧವಾರ ಚೆನ್ನೈನಲ್ಲಿ ಭವ್ಯ ಸ್ವಾಗತ ನೀಡಲಾಯಿತು. ಅಜರ್‌ಬೈಜಾನ್‌ನ ಬಾಕುವಿನಲ್ಲಿ ನಡೆದ ವಿಶ್ವಕಪ್ ಅವರು ಫೈನಲ್ ತಲುಪಿ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಟೈಬ್ರೇಕ್‌ನಲ್ಲಿ ಸೋತಿದ್ದರು.

18 ವರ್ಷದ 'ಪ್ರಗ್ಗು' ಅವರು ವಿಮಾನ ನಿಲ್ದಾಣದಿಂದ ಹೊರರುತ್ತಿದ್ದಂತೆ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಅಭಿಮಾನಿಗಳು ಹೂಗುಚ್ಛ ನೀಡಿ ಬರಮಾಡಿಕೊಂಡರು. ಸಿಹಿ ಹಂಚಿ ಸಂಭ್ರಮಿಸಿದರು. 'ಇಷ್ಟೊಂದು ಸಂಖ್ಯೆಯಲ್ಲಿ ಜನರು ನನ್ನನ್ನು ಎದುರ್ಗೊಳ್ಳಲು ಬಂದಿರುವುದನ್ನು ನೋಡಿ ಸಂತಸವಾಗಿದೆ. ಹೆಮ್ಮೆಯೆನಿಸುತ್ತದೆ' ಎಂದು ಪ್ರಜ್ಞಾನಂದ ಹೇಳಿದರು.

ಅವರಿಗೆ ಕಿರೀಟ ತೊಡಿಸಿ, ಜರಿಯ ಅಂಚು ಇರುವ ನೇರಳೆ ಬಣ್ಣದ ಶಾಲು ಹೊದಿಸಿ ತೆರೆದ ಕಾರಿನಲ್ಲಿ ಕರೆದೊಯ್ಯಲಾಯಿತು. ಬ್ಯಾಂಕ್ ಉದ್ಯೋಗಿಯ ಮಗನಾದ ಪ್ರಜ್ಞಾನಂದ ಅವರ ತಾಯಿ ಗೃಹಿಣಿ. ಆದರೆ ಮಗ ಟೂರ್ನಿಗೆ ಹೋದಾಗಲ್ಲೆಲ್ಲಾ ಜೊತೆಗೆ ತೆರಳಿ ಏನೂ ಕಮ್ಮಿಯಾಗದಂತೆ ನೋಡಿಕೊಂಡಿದ್ದರು.


ಪ್ರಜ್ಞಾನಂದ

ವೇಟ್‌ಲಿಫ್ಟರ್‌ಗೆ ಜೀವಾವಧಿ ನಿಷೇಧ

ಟೆಹರಾನ್ (ಎಎಫ್‌ಪಿ): ಪೋಲೆಂಡ್‌ನಲ್ಲಿ ನಡೆದ ಸ್ಪರ್ಧೆಯ ವೇಳೆ ಇಸ್ರೇಲ್ ಎದುರಾಳಿಗೆ ಹಸ್ತಲಾಘವ ನೀಡಿದ್ದಕ್ಕೆ ಇರಾನಿನ ವೇಟ್‌ಲಿಫ್ಟರ್‌ಗೆ ಅಧಿಕಾರಿಗಳು ಜೀವಮಾನ ಪೂರ್ತಿ ನಿಷೇಧ ಹೇರಿದ್ದಾರೆ ಎಂದು ದೇಶದ ಅಧಿಕೃತ ಮಾಧ್ಯಮ 'ಇರ್ನಾ' ವರದಿ ಮಾಡಿದೆ.

ಮೊಸ್ತಾಫ ರಾಜೇಯಿ ಅವರು ವಿಲಿಝ್ಕಾದಲ್ಲಿ ನಡೆದ ವಿಶ್ವ ಮಾಸ್ಟರ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಪ್ರದಾನ ಸಂದರ್ಭದಲ್ಲಿ ಇಸ್ರೇಲಿನ ಮಕ್ಸಿಮ್ ಸ್ವಿರ್‌ಸ್ಕಿ ಜೊತೆ ಹಸ್ತಲಾಘವ ಮಾಡಿದ್ದರು.

ಪಾಕ್ ತಂಡಕ್ಕೆ ಶರಣಾದ ನೇಪಾಳ

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ: ನಾಯಕ ಬಾಬರ್, ಇಫ್ತಿಕಾರ್ ಭರ್ಜರಿ ಶತಕ

ಮುಲ್ತಾನ್ (ಪಿಟಿಐ): ನಿರೀಕ್ಷೆಯಂತೆಯೇ ಆತಿಥೇಯ ಪಾಕಿಸ್ತಾನ ತಂಡವು ಬುಧವಾರ ಆರಂಭವಾದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ನೇಪಾಳ ವಿರುದ್ಧ ದೊಡ್ಡ ಅಂತರದ ಜಯ ಸಾಧಿಸಿತು.

ಮುಲ್ತಾನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನಾಯಕ ಬಾಬರ್ ಆಜಂ(151; 131ಎ, 4X14, 6X4) ಮತ್ತು ಇಫ್ತಿಕಾರ್ ಅಹಮದ್ (ಅಜೇಯ 109; 71ಎ, 4X11, 6X4) ಅವರ ಶತಕಗಳ ಬಲದಿಂದ ಪಾಕ್ ತಂಡವು 238 ರನ್‌ಗಳ ಜಯ ಸಾಧಿಸಿತು.

ಟಾಸ್ ಗೆದ್ದ ಪಾಕ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 342 ರನ್ ಗಳಿಸಿತು. ಅದಕ್ಕುತ್ತರವಾಗಿ ನೇಪಾಳ ತಂಡವು 23.4 ಓವರ್‌ಗಳಲ್ಲಿ 104 ರನ್‌ಗಳಿಗೆ ಆಲೌಟ್ ಆಯಿತು. ಆದರೆ, ಕ್ರಿಕೆಟ್ ಲೋಕದಲ್ಲಿ ಅಂಬೆಗಾಲಿಕ್ಕುತ್ತಿರುವ ನೇಪಾಳದ ಕೆಲವು ಆಟಗಾರರು ಈ ಪಂದ್ಯದಲ್ಲಿ ಬಲಿಷ್ಠ ಎದುರಾಳಿ ಎದುರು ಗಮನ ಸೆಳೆದರು. ಅದರಲ್ಲಿ ಸೋಮಪಾಲ್ ಕಮಿ 2 ವಿಕೆಟ್ ಪಡೆದು, ಬ್ಯಾಟಿಂಗ್‌ನಲ್ಲಿ 28 ರನ್ ಕೂಡ ಗಳಿಸಿದರು. ಆರಿಫ್ ಶೇಖ್ ಕೂಡ 26 ರನ್ ಗಳಿಸಿದರು.

ಇನಿಂಗ್ಸ್ ಆರಂಭಿಸಿದ ಪಾಕ್ ತಂಡಕ್ಕೆ ನೇಪಾಳ ಬೌಲರ್‌ಗಳು ಆರಂಭದಲ್ಲಿಯೇ ಪೆಟ್ಟು ಕೊಟ್ಟರು. 25 ರನ್‌ಗಳಿಗೆ ಪಾಕ್ ತಂಡವು ಎರಡು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಯಾದ ಬಾಬರ್ ಮತ್ತು ಮೊಹಮ್ಮದ್ ರಿಜ್ವಾನ್ (44; 50ಎ, 4X6) 3ನೇ ವಿಕೆಟ್ ಜೊತೆಯಾಟದಲ್ಲಿ 86 ರನ್ ಸೇರಿಸಿದರು. 24ನೇ ಓವರ್‌ನಲ್ಲಿ ರಿಜ್ವಾನ್ ರನ್‌ಔಟ್ ಆದರು. ಇದರೊದಿಗೆ ಜೊತೆಯಾಟ ಮುರಿಯಿತು.

ಎರಡು ಓವರ್‌ಗಳ ನಂತರ ಲಾಮಿಚಾನೆ ಎಸೆತದಲ್ಲಿ ಆಘಾ ಸಲ್ಮಾನ್ (5 ರನ್) ಔಟಾದರು. ಆದರೆ ಕ್ರೀಸ್‌ಗೆ ಬಂದ ಇಫ್ತಿಕಾರ್ ಬೌಲರ್‌ಗಳನ್ನು ಮನಸಾರೆ ದಂಡಿಸಿದರು. ಬಾಬರ್ ಮತ್ತು ಇಫ್ತಿಕಾರ್ ನಡುವೆ ಐದನೇ ವಿಕೆಟ್ ಜೊತೆಯಾಟದಲ್ಲಿ 213 ರನ್‌ಗಳು ಹರಿದುಬಂದವು. ನೇಪಾಳದ ಬೌಲರ್‌ಗಳು ಬಸವಳಿದರು. ಕೊನೆಯ ಓವರ್‌ನಲ್ಲಿ ಬಾಬರ್ ಔಟಾದರು.

ಗುರಿ ಬೆನ್ನತ್ತಿದ್ದ ನೇಪಾಳ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ಶಾಹೀನ್ ಆಫ್ರಿದಿ ದೊಡ್ಡ ಪೆಟ್ಟುಕೊಟ್ಟರು. ಒಂದೇ ಓವರ್‌ನಲ್ಲಿ ಎರಡು ವಿಕೆಟ್ ಗಳಿಸಿದರು. ಪಾಕ್ ತಂಡದ ಅನುಭವಿ ಬೌಲರ್‌ಗಳ ಮುಂದೆ ಅನುಭವಿಗಳಲ್ಲದ ನೇಪಾಳ ಬ್ಯಾಟರ್‌ಗಳು ತತ್ತರಿಸಿದರು. ಮಧ್ಯಮ ಕ್ರಮಾಂಕದಲ್ಲಿ ಶೇಖ್, ಸೋಮಪಾಲ್ ಮತ್ತು ಗುಲ್ಷನ್ ಝಾ (13 ರನ್) ಅವರಷ್ಟೇ ಎರಡಂಕಿ ಮುಟ್ಟಿದರು.

ವಿರಾಟ್ ದಾಖಲೆ ಮುರಿದ ಬಾಬರ್: ಏಷ್ಯಾಕಪ್ ಇತಿಹಾಸದಲ್ಲೇ ಅತ್ಯಧಿಕ ರನ್ ಬಾರಿಸಿದ ನಾಯಕ ಎಂಬ ದಾಖಲೆ ಬಾಬರ್ ಆಜಂ ಪಾಲಾಯಿತು. ಇದಕ್ಕೂ ಮುನ್ನ ಈ ದಾಖಲೆ ವಿರಾಟ್ ಕೊಹ್ಲಿ ಹೆಸರಿನಲ್ಲಿತ್ತು. 2014ರ ಏಷ್ಯಾಕಪ್ ನಲ್ಲಿ ಬಾಂಗ್ಲಾದೇಶದ ವಿರುದ್ಧ ಅಂದಿನ ಭಾರತ ತಂಡದ ನಾಯಕ ಕೊಹ್ಲಿ 136 ರನ್ ಗಳಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. ಇದೇ ವೇಳೆ ಬಾಬರ್ ಏಕದಿನ ಕ್ರಿಕೆಟ್‌ನಲ್ಲಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ 19ನೇ ಶತಕ ದಾಖಲಿಸಿದರು. ಅವರು 102 ಇನ್ನಿಂಗ್ಸ್‌ನಲ್ಲಿ ಈ ಸಾಧನೆ ಮಾಡಿ, ದಕ್ಷಿಣ ಆಫ್ರಿಕಾದ ಹಾಶಿಮ್ ಆಮ್ಲಾ (104 ಇನ್ನಿಂಗ್ಸ್) ಅವರ ದಾಖಲೆ ಮುರಿದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 342 (ಬಾಬರ್ ಆಜಂ 151, ರಿಜ್ವಾನ್ 44, ಇಫ್ತಿಕಾರ್ ಅಹಮದ್ ಅಜೇಯ 109, ಸೋಮಪಾಲ್ ಕಮಿ 85ಕ್ಕೆ2, ಕೆ.ಸಿ. ಕಿರಣ್ 54ಕ್ಕೆ1) **ನೇಪಾಳ:** 23.4 ಓವರ್‌ಗಳಲ್ಲಿ 104 (ಆರಿಫ್ ಶೇಖ್ 26, ಸೋಮಪಾಲ್ ಕಮಿ 28, ಶಾಹೀನ್ ಆಫ್ರಿದಿ 27ಕ್ಕೆ2, ಹ್ಯಾರಿಸ್ ರವೂಫ್ 16ಕ್ಕೆ2, ಶಾದಾಬ್ ಖಾನ್ 27ಕ್ಕೆ4) **ಫಲಿತಾಂಶ:** ಪಾಕಿಸ್ತಾನಕ್ಕೆ 238 ರನ್‌ಗಳ ಜಯ.

ಇಂದಿನ ಪಂದ್ಯ
ಬಾಂಗ್ಲಾದೇಶ–ಶ್ರೀಲಂಕಾ
ಸ್ಥಳ: ಪಲೇಕೆಲೆ(ಮಧ್ಯಾಹ್ನ 3)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್


ಪಾಕಿಸ್ತಾನ ಕ್ರಿಕೆಟ್ ತಂಡದ ಬ್ಯಾಟರ್ ಇಫ್ತಿಕಾರ್ ಅಹಮದ್ ಶತಕ ಸಂಭ್ರಮ –ಎಪಿ/ಪಿಟಿಐ ಚಿತ್ರ

ಏಷ್ಯಾ ಕಪ್ 2023

ಕ್ರಿಕೆಟ್: ಇಂಗ್ಲೆಂಡ್ ಆಟಗಾರ್ತಿಯರಿಗೂ ಸಮಾನ ಸಂಭಾವನೆ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ತಂಡದ ಮಹಿಳಾ ಕ್ರಿಕೆಟಿಗರು ಇನ್ನು ಮುಂದೆ ಪುರುಷ ಕ್ರಿಕೆಟಿಗರಷ್ಟೇ ಸಂಭಾವನೆ ಪಡೆಯಲಿದ್ದಾರೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಬುಧವಾರ ಪ್ರಕಟಿಸಿದೆ. ಗುರುವಾರ ಆರಂಭ ವಾಗುವ ಶ್ರೀಲಂಕಾ ಎದುರಿನ ಟಿ–20 ಸರಣಿಯೊಡನೆ ಸಮಾನ ವೇತನ ನೀತಿ ಅನ್ವಯಕ್ಕೆ ಬರಲಿದೆ.

ಕ್ರಿಕೆಟ್‌ನಲ್ಲಿ ಸಮಾನತೆಗೆ ಸಂಬಂಧಿಸಿ ಸ್ವತಂತ್ರ ಆಯೋಗ ಈ ಬದಲಾವಣೆಗೆ ಶಿಫಾರಸು ಮಾಡಿತ್ತು. ಪುರುಷರಿಗೆ ಹೋಲಿಸಿದರೆ ಮಹಿಳೆಯರಿಗೆ ಪಾವತಿಯಾಗುವ ಸಂಭಾವನೆ ಮುಜುಗರ ಎನಿಸುವಷ್ಟು ಕಡಿಮೆ ಎಂದು ಅದರಲ್ಲಿ ಹೇಳಲಾಗಿತ್ತು. ಇದರ ಬೆನ್ನಲ್ಲೇ ಈ ನಿರ್ಧಾರಕ್ಕೆ ಬರಲಾಗಿದೆ. ನಿಯಮಿತ ಓವರುಗಳ ಪಂದ್ಯದಲ್ಲಿ ಪುರುಷರಿಗೆ ಸಿಗುವ ಸಂಭಾ ವನೆಯ ಕಾಲು ಭಾಗದಷ್ಟೇ ಆಟಗಾರ್ತಿಯರಿಗೆ ಸಿಗುತಿತ್ತು. ಟೆಸ್ಟ್‌ನಲ್ಲಿ ಆಟಗಾರರಿಗೆ ಸಿಗುವ ಸಂಭಾವನೆಯ ಕೇವಲ 15ರಷ್ಟು ಸಂಭಾವನೆ ಮಹಿಳೆಯರು ಪಡೆಯುತ್ತಿದ್ದರು ಎಂದು ವರದಿ ವಿವರಿಸಿತ್ತು.

ಸಂಭಾವನೆ ಸಮಾನಗೊಳಿಸಿರುವ ಕ್ರಮಕ್ಕೆ ಇಂಗ್ಲೆಂಡ್ ತಂಡದ ನಾಯಕಿ ಹೀದರ್ ನೈಟ್ ಸಂತಸ ವ್ಯಕ್ತಪಡಿಸಿದ್ದಾರೆ. ಭಾರತ ಮತ್ತು ನ್ಯೂಜಿಲೆಂಡ್‌ನಲ್ಲೂ ಸಮಾನ ಸಂಭಾವನೆ ನೀಡಲಾಗುತ್ತಿದೆ.

ಅಮೆರಿಕ ಓಪನ್: ಸಬಲೆಂಕಾಗೆ ಜಯ, ವೀನಸ್‌ಗೆ ನಿರಾಸೆ

ಅಲ್ಕರಾಜ್, ಜ್ವರೇವ್ ಮುನ್ನಡೆ

ನ್ಯೂಯಾರ್ಕ್ (ಎಎಫ್‌ಪಿ): ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿರುವ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್, ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ತಮ್ಮ ಎದುರಾಳಿ ಗಾಯಾಳಾದ ಕಾರಣ ಬೇಗನೇ ಜಯ ಪಡೆದರು. ಮಹಿಳೆಯರ ವಿಭಾಗದಲ್ಲಿ ಅನುಭವಿ ಆಟಗಾರ್ತಿ ವೀನಸ್ ವಿಲಿಯಮ್ಸ್ ಟೂರ್ನಿಯಲ್ಲಿ ಇದುವರೆಗಿನ ಹೀನಾಯ ಸೋಲನ್ನು ಅನುಭವಿಸಿದರು.

ಕಳೆದ ವರ್ಷ ಟ್ರೋಫಿ ಎತ್ತಿದ್ದ ಆರ್ಥರ್ ಆ್ಯಷ್ ಕ್ರೀಡಾಂಗಣ ಕೋರ್ಟ್‌ಗೆ ಮಂಗಳವಾರ ಮರಳಿದ ಅಗ್ರ ಶ್ರೇಯಾಂಕದ ಅಲ್ಕರಾಜ್, ಜರ್ಮನಿಯ ಎದುರಾಳಿ ಡೊಮಿನಿಕ್ ಕೋಫರ್ ವಿರುದ್ಧದ ಪಂದ್ಯದಲ್ಲಿ ಹಿಡಿತ ಸಾಧಿಸಿದ್ದರು.

ಆದರೆ ಎಡಪಾದದ ತೀವ್ರ ನೋವಿನಿಂದ ಡೊಮಿನಿಕ್ ಪಂದ್ಯ ಮುಂದುವರಿಸಲಾಗದೇ ಎರಡನೇ ಸೆಟ್‌ನಲ್ಲಿ 3-2 ಹಿಂದೆ ಇದ್ದಾಗ ಬಿಟ್ಟುಕೊಟ್ಟರು. ಮೊದಲ ಸೆಟ್‌ಅನ್ನು ಅಲ್ಕರಾಜ್ 6-2ರಲ್ಲಿ ಪಡೆದಿದ್ದರು.

'ಇದು ಮುಂದಿನ ಸುತ್ತಿಗೆ ಹೋಗುವ ಉತ್ತಮ ರೀತಿಯಲ್ಲ. ಆದರೆ ಪಂದ್ಯದಲ್ಲಿ ನಾನು ಉತ್ತಮವಾಗಿ ಆಡುತ್ತಿದ್ದೆ' ಎಂದು ಅಲ್ಕರಾಜ್ ಹೇಳಿದರು. ಎರಡನೇ ಸುತ್ತಿನಲ್ಲಿ ಅವರು ದಕ್ಷಿಣ ಆಫ್ರಿಕಾದ ಲಾಯ್ಡ್ ಹ್ಯಾರಿಸ್ ಅವರನ್ನು ಎದುರಿಸಲಿದ್ದಾರೆ.

ಮೂರನೇ ಶ್ರೇಯಾಂಕದ ಆ್ಯಂಡ್ರೆ ಮೆಡ್ವೆಡೇವ್ 6–1, 6–1, 6–0 ಯಿಂದ ಹಂಗೆರಿಯ ಅಟ್ಟಿಲಾ ಬಲಾಝ್ ಅವರನ್ನು 74 ನಿಮಿಷಗಳಲ್ಲಿ ಸುಲಭವಾಗಿ ಸೋಲಿಸಿದರು.

ಆದರೆ ರಷ್ಯಾದ ಇನ್ನೊಬ್ಬ ಆಟಗಾರ, 11ನೇ ಶ್ರೇಯಾಂಕದ ಕರೆನ್ ಕಚನೋವ್ ಹೊರಬಿದ್ದರು. ಕಳೆದ ವರ್ಷ ಸೆಮಿಫೈನಲ್ ತಲುಪಿದ್ದ ಕಚನೋವ್, ವಿಶ್ವದ 89ನೇ ಕ್ರಮಾಂಕದ ಆಟಗಾರ ಮೈಕೆಲ್ ಮೊ ಅವರಿಗೆ 6–2, 6–4, 6–2 ರಿಂದ ಮಣಿದರು.

ಜರ್ಮನಿಯ ಆಟಗಾರ, 12ನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ಹೆಚ್ಚು ಪ್ರಯಾಸವಿಲ್ಲದೇ 6–4, 6–4, 6–4 ರಿಂದ ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಕ್ ಅವರನ್ನು ಹಿಮ್ಮೆಟ್ಟಿಸಿದರು. 6ನೇ ಶ್ರೇಯಾಂಕದ ಜಾನಿಕ್ ಸಿನ್ನರ್ (ಇಟಲಿ), ಇಂಗ್ಲೆಂಡ್‌ನ ಆ್ಯಂಡಿ ಮರ್ರೆ ಎರಡನೇ ಸುತ್ತಿಗೆ ಮುನ್ನಡೆದರು

ಚೀನಾದ ವು ಯಿಬಿಂಗ್ ಮತ್ತು ಝಾಂಗ್ ಝಿಝೆನ್ ಎರಡನೇ ಸುತ್ತು ತಲುಪಿದ್ದಾರೆ. ಓಪನ್ ಯುಗದಲ್ಲಿ ಇದೇ ಮೊದಲ ಬಾರಿ ಚೀನಾದ ಇಬ್ಬರು ಆಟಗಾರರು ಎರ್ಡನೇ ಸುತ್ತಿಗೆ ಮುನ್ನಡೆದಿದ್ದಾರೆ.


ಕಾರ್ಲೋಸ್ ಅಲ್ಕರಾಜ್ –ಎಪಿ/ ಪಿಟಿಐ ಚಿತ್ರ

ಸಬಲೆಂಕಾ ಮುನ್ನಡೆ: ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಉಕ್ರೇನ್ ಸಂಜಾತೆ ಬೆಲ್ಜಿಯಂ ಆಟಗಾರ್ತಿ ಮರಿನಾ ಝನೆವಸ್ಕಾ ಅವರನ್ನು 6–2, 6–2 ರಿಂದ ಸೋಲಿಸಿದರು. ಸಬಲೆಂಕಾ ಹಾಲಿ ಆಸ್ಟ್ರೇಲಿಯಾ ಓಪನ್ ಚಾಂಪಿಯನ್.

ಏಳನೇ ಶ್ರೇಯಾಂಕದ ಕರೊಲಿನ್ ಗಾರ್ಸಿಯಾ (ಫ್ರಾನ್ಸ್) ಅವರು ಚೀನಾದ ವಾಂಗ್ ಯಫಾನ್ ಎದುರು 6–4, 6–1ರಲ್ಲಿ ಸೋತರು. ಮೊದಲ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ಗೆಲ್ಲಲು ಇನ್ನಿಲ್ಲದ ಯತ್ನ ನಡೆಸುತ್ತಿರುವ ಟ್ಯುನೀಷಿಯಾದ ಒನ್ಸ್ ಜೇಬರ್ ಕೂಡ ಎರಡನೇ ಸುತ್ತನ್ನು ತಲುಪಿದರು. ಕೊಲಂಬಿಯಾದ ಕ್ಯಾಮಿಲಾ ಒಸೊರಿಯೊ ಅವರನ್ನು 7–5, 7–6 (7–4) ರಿಂದ ಸೋಲಿಸಿದರು. 2022, 23ರಲ್ಲಿ ಅವರು 3 ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಫೈನಲ್‌ನಲ್ಲಿ ಸೋತಿದ್ದಾರೆ.

ವೀನಸ್‌ಗೆ ಸೋಲು: ಆದರೆ ಅಮೆರಿಕದ ಅನುಭವಿ ವೀನಸ್ ವಿಲಿಯಮ್ಸ್ ನಿರಾಸೆ ಮೂಡಿಸಿದರು. 24ನೇ ಸಲ ಅಮೆರಿಕನ್ ಓಪನ್ ಆಡಿ ದಾಖಲೆ ಸರಿಗಟ್ಟಿರುವ ವೀನಸ್ 1–6, 1–6ರಲ್ಲಿ ಬೆಲ್ಜಿಯಂನ ಗ್ರೀಟ್ ಮಿನೆನ್ ಅವರಿಗೆ ಮಣಿದರು. 1997ರಲ್ಲಿ ವೀನಸ್ ಮೊದಲ ಬಾರಿ ಇಲ್ಲಿ ಫೈನಲ್ ತಲುಪಿದ್ದಾಗ ಮಿನೆನ್ ಜನಿಸಿ ಕೆಲವೇ ವಾರಗಳಾಗಿದ್ದವು!

9ನೇ ಶ್ರೇಯಾಂಕ ಪಡೆದಿರುವ ವೊಂಡ್ರುಸೋವಾ 6–3, 6–0 ಯಿಂದ ಅರ್ಹತಾ ಸುತ್ತಿನಿಂದ ಬಂದಿದ್ದ ದಕ್ಷಿಣ ಕೊರಿಯಾ ಆಟಗಾರ್ತಿ ಹಾನ್ ನ ಲೇ ವಿರುದ್ಧ ಜಯಗಳಿಸಿದರು. ಆತಿಥೇಯ ಅಮೆರಿಕದ ಆಟಗಾರ್ತಿ ಜೆಸ್ಸಿಕಾ ಪೆಗುಲಾ ಕೂಡ ನೇರ ಸೆಟ್‌ಗಳ ಗೆಲುವಿನೊಡನೆ ಮುನ್ನಡೆದರು.